
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಜುಲೈ 25, 2012 ಪುಟ 20 ರೂ. 14/-

ಸಾಂಸ್ಕೃತಿಕ ಲೋಕದ ಆತ್ಮಹತ್ಯೆಗಳು



ಮುಖ್ಯಮಂತ್ರಿ ಗಾದಿ ಬಿಸಿ ತುಪ್ಪ

ಸ್ವಯಂಕೃಷಿ ವೀರೇಂದ್ರ ಜೈಲುಪಾಲು

ಂಗಳೂರು: ಜಂಗಮ ಮಠ ನುಂಗುತ್ತಿರುವ ಬಂಟ

ಈಗ' ದೀಪ್‌ನ ಝಲಕ್!



ನಟಿ ಲೈಲಾ ಖಾನ್ ಹತ್ಯೆ




ರಿಹರ: ಸೋಲಿನ ಭೀತಿಯಲ್ಲಿ ಹರೀಶ್

ಚಾರ್ವಾಕ



• ಶಿವಸುಂದ

‘ಸಕ್ರಮ’–‘ಅಕ್ರಮ’ ಗಣಿಗಾರಿಕೆಗಳು ಮತ್ತು ನ್ಯಾಯಾಲಯಗಳು



ಭಾರತದಂಥ ದೇಶಗಳಲ್ಲಿ ಪ್ರಜಾಪ್ರಭುತ್ವದ "ಕ್ರಮ" ಏನಿರಬೇಕು ಎಂಬುದನ್ನು ಅಂತರರಾಷ್ಟ್ರೀಯ ಸಂಸ್ಥೆಗಳು ಮತ್ತು ಜಾಗತಿಕ ಬಂಡವಾಳಶಾಹಿ ಶಕ್ತಿಗಳು ತೀರ್ಮಾನ ಮಾಡುತ್ತಿರುವ ಹೊತ್ತಿನಲ್ಲಿ "ಸಕ್ರಮ ಗಣಿಗಾರಿಕೆ" ಮತ್ತು "ಅಕ್ರಮ ಗಣಿಗಾರಿಕೆ" ಎಂಬುದರ ನಡುವೆ ಎಷ್ಟು ವ್ಯತ್ಯಾಸವಿರಲು ಸಾಧ್ಯ? ಇತ್ತೀಚೆಗೆ ಸುಪ್ರೀಂಕೋರ್ಟ್ ಗಣಿಗಾರಿಕೆಗೆ ಮತ್ತೆ ಅವಕಾಶ ಕೊಟ್ಟಿರುವುದು ಈ ಪ್ರಶ್ನೆ ಇನ್ನೂ ಸುಸಂಗತವಾದದ್ದೇ ಎಂದು ಸ್ಪಷ್ಟಪಡಿಸಿದೆ.

ಬಳ್ಳಾರಿ ಗಣಿಗಾರಿಕೆ ಈ ದೇಶದ ಅಭಿವೃದ್ಧಿ ಪಥಕ್ಕೆ ಮತ್ತು ಈ ದೇಶದಲ್ಲಿ ಜಾಗತೀಕರಣದ ಕಾಲಘಟ್ಟದಲ್ಲಿ ಹುಟ್ಟಿಕೊಂಡಿರುವ ಬಂಡವಾಳಶಾಹಿಯ ಸ್ವರೂಪಕ್ಕೆ ಸ್ಪಷ್ಟ ನಿದರ್ಶನಗಳನ್ನು ಒದಗಿಸುತ್ತವೆ. ಇಪ್ಪತ್ತು ವರ್ಷಗಳ ಕೆಳಗೆ ಸೈಕಲ್ ತುಳಿದುಕೊಂಡು ಚೀಟಿ ವ್ಯವಹಾರ ನಡೆಸುತ್ತಿದ್ದ ರೆಡ್ಡಿಗಳು ನಂತರದಲ್ಲಿ ಒಂದು ರಾಜ್ಯದ ಸರ್ಕಾರವನ್ನು ಮತ್ತು ನ್ಯಾಯಾಲಯವನ್ನು ಕೊಂಡುಕೊಳ್ಳುವ ಮಟ್ಟಿಗೆ ಬೆಳೆದದ್ದು, ಕೇವಲ ಜಾಮೀನಿಗಾಗಿ 60 ಕೋಟಿ ರೂಪಾಯಿ ಲಂಚವನ್ನು ಬಿಸಾಕುವಷ್ಟು "ಶಕ್ತ"ರಾಗಿದ್ದು ಮತ್ತು ಪ್ರಜಾಪ್ರಭುತ್ವ ಅಷ್ಟು "ದುರ್ಬಲ"ವಾಗಿದ್ದು ಎಲ್ಲವೂ ಈ ಗಣಿಗಾರಿಕೆಯು ರೂಪದಲ್ಲಿ ತೆರೆದುಕೊಂಡಿರುವ ಈ ದೇಶದಲ್ಲಿ ರೂಪುಗೊಳ್ಳುತ್ತಿರುವ ಆರ್ಥಿಕತೆಯ ಪರಿಣಾಮಗಳೇ.

ಗಣಿಗಾರಿಕೆ ಸೃಷ್ಟಿಸಿರುವ ಭ್ರಷ್ಟಾಚಾರ ಮತ್ತು ಸಾರ್ವತ್ರಿಕ ರಾಜಕೀಯ ಅಧಃಪತನಗಳ ಬಗ್ಗೆ ಸಾಕಷ್ಟು ಅಸಲೀ ಕಣ್ಣೀರನ್ನು ಸುರಿಸಿ ಆಗಿದೆ. ನೈತಿಕ ಆಕ್ರೋಶವನ್ನು ವ್ಯಕ್ತಪಡಿಸಿ ಆಗಿದೆ. ಆದರೆ ಅವೆಲ್ಲವೂ ನೈತಿಕ–ಸಾತ್ವಿಕ ನೆಲೆಯಲ್ಲಿ ನಡೆದಿವೆಯಾದ್ದರಿಂದ ಅದಕ್ಕೆ ನಿಜಾಯತಿಯುಳ್ಳ ಹಪಹಪಿಕೆಯ ಅಥವಾ ಶಾಪದ ಗೊಣಗಣಿಕೆಯ ಆಚೆ ಹೆಚ್ಚು ಏನನ್ನು ಸಾಧಿಸಲು ಆಗುತ್ತಿಲ್ಲ. ಇಂಥ ಒಂದು ಆರ್ಥಿಕತೆ ಏಕೆ ಸೃಷ್ಟಿಯಾಯಿತು ಮತ್ತು ಇದರ ಹಿಂದಿನ ಶಕ್ತಿಗಳೇನು ಹಾಗೂ ಇದನ್ನು ನಿಜಕ್ಕೂ ನಿಗ್ರಹಿಸಬೇಕೆಂದರೆ ನಮ್ಮ ಅಭಿವೃದ್ಧಿ ಪಥದಲ್ಲಿ ಮಾಡಿಕೊಳ್ಳಬೇಕಿರುವ "ಕೋರ್ಸ್ ಕರೆಕ್ಷನ್" ಅಲ್ಲ ಮೂಲಭೂತ ಮಾರ್ಪಾಡುಗಳ ಬಗ್ಗೆ ಯೋಚಿಸದಿದ್ದರೆ "ಅಕ್ರಮ ಗಣಿಗಾರಿಕೆ" ಇಲ್ಲವಾದರೂ ಹಿಂದಿನ ಬಾಗಿಲಿಂದ "ಸಕ್ರಮ ಗಣಿಗಾರಿಕೆ" ಅಡಿಯಿಡುತ್ತದೆ ಎಂದು ಈ ಅಂಕಣದಲ್ಲಿ ಹಲವು ಸಾರಿ ಬರೆಯಲಾಗಿತ್ತು.

ಈಗ ಅದು ನಿಜವಾಗಿದೆ. ಸುಪ್ರೀಂಕೋರ್ಟ್ ಮತ್ತೆ ಎಂಟು ಉದ್ಯಮಿಗಳಿಗೆ "ಸಕ್ರಮ ಗಣಿಗಾರಿಕೆ"ಗೆ ಅವಕಾಶ ಕೊಟ್ಟಿದೆ. ಅದಕ್ಕೆ ಸುಪ್ರೀಂಕೋರ್ಟ್ ಹಾಕಿರುವ ಶರತ್ತುಗಳು ಲೂಟಿಯ ವೇಗವನ್ನು ತಡೆಯಬಹುದೇ ವಿನಃ ಲೂಟಿಯನ್ನಲ್ಲ. ಏಕೆಂದರೆ ಈ ನವ ಉದಾರವಾದಿ ಯುಗದಲ್ಲಿ "ಅಕ್ರಮ ಗಣಿಗಾರಿಕೆ" ಮತ್ತು "ಸಕ್ರಮ ಗಣಿಗಾರಿಕೆ"ಯ ಹಿಂದಿನ ಮೂಲಭೂತ ಆರ್ಥಿಕ ತರ್ಕ ಒಂದೇ ಆಗಿದೆ ಮತ್ತು ಅದು ನ್ಯಾಯಾಲಯಗಳಲ್ಲಿ, ಸಂಸತ್ತಿನಲ್ಲಿ ಹಾಗೂ ಆಡಳಿತ ಕಚೇರಿಗಳಲ್ಲಿ ಸೃಷ್ಟಿಸಿರುವ ಗ್ರಾಹಕರು ಕೂಡಾ ಒಂದೇ ರೀತಿಯವರು.

ಹಾಗೆ ನೋಡಿದರೆ ಯಡಿಯೂರಪ್ಪನ ಸರ್ಕಾರ ಅದಿರು ರಫ್ತುವಿನ ಮೇಲೆ ಹಾಕಿದ ನಿರ್ಬಂಧವೇ ಅರೆ ಮನಸ್ಸಿನದ್ದು. ತಕ್ಷಣದ ರಾಜಕೀಯ ಲಾಭಕ್ಕೆ ಮತ್ತು ತನ್ನ ವಿರೋಧಿ ಪಾಳಯದ ರೆಡ್ಡಿಗಳನ್ನು ಹಣಿಯಲಿಕ್ಕೆ ಅದಿರು ರಫ್ತು ನಿಷೇಧವನ್ನು ಯಡಿಯೂರಪ್ಪ ಆಯುಧದಂತೆ ಬಳಸಿಕೊಂಡಿದ್ದು ಬಿಟ್ಟರೆ ನಿಜಕ್ಕೂ ಅದಿರು ರಫ್ತು ನಿಷೇಧ ಕ್ರಮವನ್ನು ಸಮರ್ಥಿಸಿಕೊಳ್ಳುವಂಥಾ ಯಾವುದೇ ಕ್ರಮವನ್ನಾಗಲೀ ಅಥವಾ ವಾದವನ್ನಾಗಲೀ ಯಡಿಯೂರಪ್ಪ ಸರ್ಕಾರ ಮಂಡಿಸಲಿಲ್ಲ.

ವಾಸ್ತವವಾಗಿ ಅದಿರು ರಫ್ತನ್ನು ಕರ್ನಾಟಕ ಸರ್ಕಾರ ನಿಷೇಧಿಸಿದ ನಂತರ ಕೋರ್ಟಿನ ಆದೇಶದಂತೆ ಅಕ್ರಮ ಅದಿರನ್ನು ಪತ್ತೆ ಹಚ್ಚಲು ಮತ್ತು ನಿಷೇಧಿಸಲು ಬೇಕಾದ ನಿಯಮಗಳನ್ನು ರೂಪಿಸಬೇಕಿತ್ತು. ಏಕೆಂದರೆ ಒಟ್ಟಾರೆ ಅದಿರು ರಫ್ತನ್ನೇ ನಿಷೇಧಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗಿಲ್ಲ. ಆದರೆ ಸೂಕ್ತ ಸೂತ್ರಗಳನ್ನು ರೂಪಿಸುವ ಮೂಲಕ ಅಕ್ರಮ ಅದಿರು ರಫ್ತನ್ನು ಖಂಡಿತಾ ರಾಜ್ಯ ಸರ್ಕಾರ ನಿಷೇಧಿಸಬಹುದಿತ್ತು. ಒಂದುವೇಳೆ ನಿರ್ದಿಷ್ಟ ಕಾಲಾವಧಿಯಲ್ಲಿ ಸೂತ್ರಗಳನ್ನು ರೂಪಿಸದಿದ್ದರೆ ನ್ಯಾಯಾಲಯ ಸರ್ಕಾರದ ಆದೇಶವನ್ನು ರದ್ದುಗೊಳಿಸುವುದು ಸ್ಪಷ್ಟವಾಗಿತ್ತು. ಯಡಿಯೂರಪ್ಪನವರಿಗೆ ಬೇಕಾದದ್ದೂ ಅದೇ ಆಗಿತ್ತು. ಗಣಿ ಲಾಬಿಗಳನ್ನು ಮಣಿಸಿದ ಕೀರ್ತಿಯೂ ಒಂದು ಕಡೆ, ಗಣಿಲಾಬಿಗಳ ಪರವಾದ ತೀರ್ಪು ಬರುವಂತೆ ಮಾಡಿ ಅವರಿಗೆ ಸಹಾಯ ಮಾಡಿದ ವ್ಯವಹಾರವೂ ಮತ್ತೊಂದು ಕಡೆ. ಹೀಗೆ ಒಂದೇ ಕಲ್ಲಿಗೆ ಎರಡು ಹಕ್ಕಿ.

ಅದೇನೇ ಇರಲಿ. ರಾಜ್ಯ ಸರ್ಕಾರವಿರಲಿ, ಸುಪ್ರೀಂಕೋರ್ಟಿರಲಿ ಗಣನೆಗೇ ತೆಗೆದುಕೊಳ್ಳದ ಅಥವಾ ತೆಗೆದುಕೊಳ್ಳಬಯಸದ ಪ್ರಮುಖವಾದ ಸಂಗತಿಯೆಂದರೆ ತಥಾಕಥಿತ ಸಕ್ರಮ ಗಣಿಗಾರಿಕೆಯಿಂದ ಆಗುತ್ತಿರುವ ಲೂಟಿ. ಜಾಗತೀಕರಣದ ಈ ಕಾಲಘಟ್ಟದಲ್ಲಿ ಈ ಲೂಟಿಯನ್ನೇ ಸಕ್ರಮ ಗಣಿಗಾರಿಕೆ ಎನ್ನುತ್ತಾರೆ. ಅದರ ಸಮರ್ಥನೆಗೆ ಇಡೀ ಪ್ರಭುತ್ವವೇ ನಿಂತಿದೆ. ದೇಶ ಬಡವಾಗುತ್ತಿರುವುದು ಈ ಸಕ್ರಮ ಗಣಿಗಾರಿಕೆಯಿಂದಲೇ!

ಉದಾಹರಣೆಗೆ ಕಳೆದ ವರ್ಷ ಒಂದರಲ್ಲೇ ಕರ್ನಾಟಕವನ್ನೂ ಒಳಗೊಂಡಂತೆ ಇಡೀ ದೇಶದಿಂದ 22.6 ಕೋಟಿ ಟನ್ ಕಬ್ಬಿಣದ ಅದಿರನ್ನು ವಿದೇಶಕ್ಕೆ, ಅದರಲ್ಲಿ ಅರ್ಧ ಭಾಗ ಚೀನಾಗೆ, "ಸಕ್ರಮ"ವಾಗಿಯೇ ಮಾರಲಾಗಿದೆ. ಇದರಿಂದ ದೇಶ ಪಡೆದುಕೊಂಡಿದ್ದು 10,000 ಕೋಟಿ ತೆರಿಗೆಯಾದರೂ ಈ ಸಕ್ರಮ ಅದಿರು ಮಾರಾಟ ಉದ್ಯಮದಲ್ಲಿರುವ ಉದ್ಯಮಿಗಳು ಪಡೆದುಕೊಂಡದ್ದು 2 ಲಕ್ಷ ಕೋಟಿ ರೂಪಾಯಿ ವ್ಯವಹಾರ! ಆದರೆ ದೇಶ ಕಳೆದುಕೊಂಡದ್ದು? ಒಂದು ಅಂದಾಜಿನ ಪ್ರಕಾರ ದೇಶದಲ್ಲಿ ಲಭ್ಯವಿದೆ ಎಂದು ಅಂದಾಜು ಮಾಡಲಾಗಿರುವ ಕಬ್ಬಿಣದ ಅದಿರಿನ ಶೇ.1 ರಷ್ಟು ಅದಿರನ್ನು ಒಂದು ವರ್ಷದಲ್ಲೇ ಶಾಸನಬದ್ಧವಾಗಿ ವಿದೇಶಗಳಿಗೆ ಮಾರಿಕೊಳ್ಳಲಾಗಿದೆ. ಇಂದು ಬಿಜೆಪಿ ಅಧಿಕಾರದಲ್ಲಿರುವ ಜಾರ್ಖಂಡ್, ಛತ್ತೀಸ್‌ಘಡ್‌ಗಳಲ್ಲಿ 12 ಲಕ್ಷ ಕೋಟಿ ರೂಪಾಯಿ ಮೌಲ್ಯದ ಕಬ್ಬಿಣ, ಕಲ್ಲಿದ್ದಲು, ವಜ್ರ, ಚಿನ್ನ, ಬಾಕ್ಸೈಟ್, ಯುರೇನಿಯಂ ಒಳಗೊಂಡಂತೆ 28 ಬಗೆಯ ಖನಿಜ ಸಂಪತ್ತು ಅಡಕವಾಗಿದೆ. ಈ ಖನಿಜ ಸಂಪತನ್ನೂ ಖಾಸಗಿ ಕಂಪನಿಗಳೂ ಹುಡುಕಿ (Explore), ತೆಗೆದು (Extract), ರಫ್ತು (Export) ಮಾಡುವ 1993ರ ರಾಷ್ಟ್ರೀಯ ಖನಿಜ ನೀತಿಗೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಅಕ್ಷರಶಃ ಒಪ್ಪಿಗೆ ನೀಡಿದ್ದವು. ಒಂದು ಅಂದಾಜಿನಂತೆ ಬಿಜೆಪಿ–ಕಾಂಗ್ರೆಸ್ ಸರ್ಕಾರಗಳು ಸ್ವದೇಶಿ ಮತ್ತು ವಿದೇಶಿ ಗಣಿ ಕಂಪನಿಗಳ ಜೊತೆ ಸುಮಾರು 1,50,000 ಕೋಟಿ ಮೌಲ್ಯದ ಒಪ್ಪಂದ ಪತ್ರಕ್ಕೆ (Memorandum Of Understanading-MOU) ಸಹಿ ಹಾಕಿವೆ. ಅದನ್ನು ಜಾರಿಗೆ ತರಲೆಂದೇ ಆದಿವಾಸಿ ವಲಯದಲ್ಲಿ ಆಪರೇಷನ್ ಗ್ರೀನ್ ಹಂಟ್ ಕೂಡಾ ಪ್ರಾರಂಭವಾಗಿದೆ. ಅದರ ಬಗ್ಗೆಯೂ ಕಾಂಗ್ರೆಸ್–ಬಿಜೆಪಿ ಎರಡರಲ್ಲೂ ಸಹಮತವಿದೆ.

ಈ ದೇಶಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲೇ ಸಂವಿಧಾನದ ಏಳನೇ ಶೆಡ್ಯೂಲ್‌ನ ಮೊದಲನೇ ಪಟ್ಟಿಯ 54ನೇ ಎಂಟ್ರಿಯು ಕೇಂದ್ರ ಸರ್ಕಾರಕ್ಕೆ ಈ ದೇಶದ ಎಲ್ಲಾ ಖನಿಜ ಸಂಪನ್ಮೂಲಗಳ ಮೇಲೆ ಪರಮಾಧಿಕಾರವನ್ನು ನೀಡಿತು ಹಾಗೂ ಮೊದಲನೇ ಪಟ್ಟಿಗೆ ಒಳಪಟ್ಟು ಎರಡನೇ ಪಟ್ಟಿಯ 23ನೇ ಎಂಟ್ರಿಯು ರಾಜ್ಯ ಸರ್ಕಾರಗಳಿಗೆ ಅದಿರಿನ ಬಳಕೆಯ ಬಗ್ಗೆ ನಿಯಮಾವಳಿ ರೂಪಿಸುವ ಅಧಿಕಾರವನ್ನೂ ನೀಡಿತು. 1956ರಲ್ಲಿ ರೂಪಿಸಲಾದ ರಾಷ್ಟ್ರೀಯ ಕೈಗಾರಿಕಾ ನೀತಿಯು ಈ ದೇಶದ ಎಲ್ಲಾ ಖನಿಜ ಸಂಪತ್ತನ್ನು ಗಣಿಗಾರಿಕೆ ಮಾಡುವ ಪರಮಾಧಿಕಾರವನ್ನು ತನ್ನಲ್ಲೇ ಉಳಿಸಿಕೊಂಡಿತು. ನಂತರ 1976, 1986, 1988ರಲ್ಲಿ ತಂದ ತಿದ್ದುಪಡಿಗಳು ಸಹ ಈ ದೇಶದ ಖನಿಜ ಸಂಪತ್ತಿನ ಖಾಸಗೀಕರಣವನ್ನು ನಿರಾಕರಿಸಿದ್ದವು. ಆದರೆ 1991ರ ನಂತರ ಪ್ರಾರಂಭವಾದ ಜಾಗತೀಕರಣ ಈ ದೇಶದ ಎಲ್ಲಾ ಸಂಪನ್ಮೂಲಗಳನ್ನು ವಿದೇಶೀ ಕಂಪನಿಗಳ ಲೂಟಿಗೆ ತೆರೆವಿಟ್ಟಿತು.

ಇದರ ಭಾಗವಾಗಿಯೇ 1993ರಲ್ಲಿ ರಾಷ್ಟ್ರೀಯ ಖನಿಜ ನೀತಿಯೊಂದನ್ನು ರೂಪಿಸಲಾಯಿತು. ಇದರ ಭಾಗವಾಗಿ ಕಬ್ಬಿಣದ ಅದಿರು, ಮ್ಯಾಂಗನೀಸ್, ಚಿನ್ನ, ವಜ್ರ, ತಾಮ್ರ, ಸತು, ಇತ್ಯಾದಿ 13 ಖನಿಜಗಳ ಅದಿರಿನ ಉತ್ಪಾದನೆಯನ್ನು ಖಾಸಗೀಕರಿಸಲಾಯಿತು. 1997ರಲ್ಲಿ ಈ ನೀತಿಗೆ ಮತ್ತಷ್ಟು ತಿದ್ದುಪಡಿ ಮಾಡಿ ಈ ಕ್ಷೇತ್ರಗಳ ಗಣಿಗಾರಿಕೆಯಲ್ಲಿ ಶೇ.50ರಷ್ಟು ವಿದೇಶೀ ಹೂಡಿಕೆಗೆ ಅವಕಾಶ ಮಾಡಿಕೊಡಲಾಯಿತು: ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ಶೇ.74ರಷ್ಟು ವಿದೇಶಿ ಬಂಡವಾಳದ ಪಾಲಿಗೆ ಅವಕಾಶ ಮಾಡಿಕೊಟ್ಟರೆ 2006ರ ಫೆಬ್ರವರಿಯಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಅದಿರು ಗಣಿಗಾರಿಕೆಯಲ್ಲಿ ಶೇ.100ರಷ್ಟು ವಿದೇಶೀ ಬಂಡವಾಳಕ್ಕೆ ಅವಕಾಶ ಮಾಡಿಕೊಟ್ಟಿತು. ಮಿಕ್ಕಂತೆ ಯಾರು ಹೆಚ್ಚು ದೇಶಭಕ್ತರು ಎಂದು ಕಚ್ಚಾಡುವ ಕಾಂಗ್ರೆಸ್ ಮತ್ತು ಬಿಜೆಪಿಗಳೆರಡರ ನಡುವೆಯೂ ರಾಷ್ಟ್ರೀಯ ಖನಿಜ ನೀತಿಗೆ ಮಾಡುತ್ತಾ ಬಂದ ಈ ಎಲ್ಲಾ ತಿದ್ದುಪಡಿಗಳ ಬಗ್ಗೆ ಸಮ್ಮತಿಯಿತ್ತು, ಸಮ್ಮತಿಯಿದೆ.

ಒಂದು ದೇಶವನ್ನು ಕಬ್ಬಿಣ ಮತ್ತು ವಿದ್ಯುತ್ ಇಲ್ಲದೆ ಕಟ್ಟಲಾಗುವುದಿಲ್ಲವೆಂಬ ಮಾತಿದೆ. ಇಂದು ಜಪಾನ್, ಹಾಂಕಾಂಗ್ ಮತ್ತು ಪಶ್ಚಿಮದ ಹಲವ[...] ಶ್ರೀಮಂತ ದೇಶಗಳಲ್ಲಿ ಕಬ್ಬಿಣದ ಅದಿರು ಲಭ್ಯವಿಲ್ಲ, ಆದರೆ ಅವು ಅ[...] ಖನಿಜ ಸಂಪತ್ತನ್ನು ಹೊಂದಿರುವ ಆಫ್ರಿಕಾ ಮತ್ತು ಭಾರತದಂತ ಬಡದೇಶಗ[...] ತಮ್ಮ ವಸಾಹತುಗಳಾಗಿ ಮಾಡಿಕೊಂಡು ಅಲ್ಲಿದ್ದ ಅದಿರು ಲೂಟಿ ಮ[...] ತಮ್ಮ ದೇಶವನ್ನು ಕಟ್ಟಿದವು. ಬಿಹೆಚ್‌ಪಿ ಬಿಲ್ಲಿಟನ್, ರಿಯೊಟಿಂಟೋ, [...] ಬೀರ್ಸ್, ನಿಪ್ಪಾನ್‌ನಂಥ ಬಹುರಾಷ್ಟ್ರೀಯ ಕಂಪನಿಗಳೇ ಆಫ್ರಿಕಾವನ್ನು ಬರಿ[...] ಮಾಡಿದ ಪಶ್ಚಿಮದ ಕಂಪನಿಗಳು. ಆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದಮ[...] ಈ ದೇಶದ ಖನಿಜ ಲೂಟಿಯನ್ನು ಬಹುಮಟ್ಟಿಗೆ ತಡೆಯಲಾಗಿತ್ತು. ದೇ[...] ಸಾರ್ವಜನಿಕ ಸಂಸ್ಥೆಗಳ ಸಹಕಾರದೊಂದಿಗೇ ಈ ದೇಶದ ಕಬ್ಬಿಣ ಇನ್ನಿ[...] ಅದಿರುಗಳು ಈ ದೇಶದ ಬಳಕೆಗೆ ಮುಡಿಪಾಗಿಡಬೇಕೆಂಬ ತತ್ವ ಕ[...] ಕಾಗದದ ಮೇಲಾದರೂ ಇತ್ತು. ಆದರೆ ಈಗ?

2006ರಲ್ಲಿ ಕೇಂದ್ರ ಸರ್ಕಾರ ಕಬ್ಬಿಣದ ಅದಿರಿನ ಗಣಿಗಾರಿಕೆಯ[...] ವಿದೇಶಿ ಹೂಡಿಕೆ ಹೆಚ್ಚಿಸಲೆಂದು ಸಲಹೆ ನೀಡಲು ಯೋಜ[...] ಆಯೋಗದ ಸದಸ್ಯರಾದ ಅನ್ವರ್ ಹೂಡಾ ಅವರ ನೇತೃತ್ವದಲ್ಲಿ ಒಂ[...] ಸಮಿತಿಯನ್ನು ನೇಮಿಸಿತ್ತು. ಆ ಸಮಿತಿಯು ಅದಿರು ಗಣಿಗಾರಿಕೆಯ[...] ವಿದೇಶೀ ಬಂಡವಾಳಕ್ಕೆ ಎಲ್ಲಾ ಬಗೆಯ ಉತ್ತೇಜನ ಕೊಡಬೇಕೆಂದ[...] ಅದಿರಿನ ರಫ್ತನ್ನು ಅನಿರ್ಬಂಧಿತವಾಗಿ ಮುಂದುವರೆಸಬೇಕೆಂದೂ ಸ[...] ನೀಡಿದೆ. ಈ ಸಮಿತಿಯ ಮುಂದೆ ತಮ್ಮ ಅಭಿಪ್ರಾಯಗಳನ್ನು ಹಾ[...] ಪಡಿಸಿದವರೂ ಸಹ ಬಿಹೆಚ್‌ಪಿ ಬಿಲ್ಲಿಟನ್, ರಿಯೊಟಿಂಟೋ, [...] ಬೀರ್ಸ್, ನಿಪ್ಪಾನ್ ನಂಥ ಬಹುರಾಷ್ಟ್ರೀಯ ಕಂಪನಿಗಳೇ ಆಗಿದ[...] ಕೇವಲ ಕಾಕತಾಳೀಯವೆನಲಾದೀತೇ?

ಈ ಹೂಡಾ ಸಮಿತಿ ವರದಿಗೂ ಬಿಜೆಪಿ ಮತ್ತು ಕಾಂಗ[...] ಪಕ್ಷಗಳ ಒಪ್ಪಿಗೆ ದೊರೆತಿದೆ. ಈ ದೇಶದಲ್ಲೇ ಸ್ಟೀಲ್ ಉತ್ಪಾ[...] ಮಾಡುವ ಟಾಟಾನಂಥ ಬೃಹತ್ ಉದ್ದಿಮೆಪತಿಗಳು ಈ ದೇ[...] ಕಬ್ಬಿಣದ ಅದಿರು ಈ ದೇಶದಲ್ಲಿರುವ ಸ್ಟೀಲ್ ಉದ್ಯಮ[...] ಬಳಕೆಯಾಗಬೇಕೆಂದು ಒತ್ತಡ ಹಾಕುತ್ತಿವೆ. ಆದರೆ ಈಗ ಭಾರ[...] ಗಣಿ ಉದ್ದಿಮೆಯಲ್ಲಿ ಟಾಟಾಗಿಂಥ ಬೃಹತ್ ಬಹುರಾಷ್ಟ್ರೀಯ ಉದ್ಯಮಿ[...] ಭಾಗಿಯಾಗಿದ್ದಾರೆ. ಉದಾಹರಣೆಗೆ 2010ರಲ್ಲಿ ನಡೆದ ಜಾಗ[...] ಬಂಡವಾಳಗಾರರ ಸಮ್ಮೇಳನದಲ್ಲಿ ಬಳ್ಳಾರಿಯಲ್ಲಿ ಸ್ಟೀಲ್ ಫ್ಯಾಕ್ಟರಿ ಮಾಡ[...] ಮುಂದೆ ಬಂದಿದ್ದ ವಿಶ್ವದ ನಂ.1 ದೈತ್ಯ ಸ್ಟೀಲ್ ಉದ್ಯಮಿ ಮಿಟ್ಟ[...] ಗಣಿಗಾರಿಕೆಗೂ ಲೈಸೆನ್ಸ್ ಕೇಳಿದ್ದರು. ಏಕೆಂದರೆ ಜಗತ್ತಿನಾದ್ಯಂತ ಇರ[...] ಅವರ ಸ್ಟೀಲ್ ಫ್ಯಾಕ್ಟರಿಗಳಿಗೆ ಅದಿರು ಸರಬರಾಜು ಮಾಡುತ್ತಿದ್ದ ಅದಿ[...] ಕಂಪನಿಗಳು ಏಕಾಏಕಿ ಅದಿರು ದರ ಏರಿಸಿವೆ. ಇದರಿಂದ ಮಿಟ್ಟ[...] ಕಂಪನಿ ಬೇರೆ ಅದಿರು ಮೂಲಗಳನ್ನು ಅರಸುತ್ತಿದೆ. ಹೀಗಾಗಿ ಮಿಟ್ಟ[...] ಕರ್ನಾಟಕದಲ್ಲಿ ಬಂಡವಾಳ ಹೂಡಲು ಅದಿರು ರಫ್ತು? ಅವಕಾಶ[...] ಪ್ರಧಾನವೆಂಬುದನ್ನು ಮರೆಯುವಂತಿಲ್ಲ. ಈ ಕಂಪನಿಯ ವಾರ್ಷಿಕ ವಹಿವಾ[...] 105 ಬಿಲಿಯನ್ ಡಾಲರ್‌ಗಳು. ಅಂದರೆ 4,20,000 ಕೋಟಿ ರೂಪಾಯಿಗ[...] ಕರ್ನಾಟಕದ ವಾರ್ಷಿಕ ಬಜೆಟ್ಟು 60,0000 ಕೋಟಿ ಎಂಬುದ[...] ನೆನಪಿಸಿಕೊಂಡರೆ ಈ ಕಂಪನಿಗಳ ಮುಂದೆ ಯಡಿಯೂರಪ್ಪ ಏಕೆ ಮೊಣಕಾಲ[...] ನಿಲ್ಲುತ್ತಾರೆ ಎಂಬುದು ಅರ್ಥವಾಗುತ್ತದೆ. ಆದರೆ ಅವರು ಕೇಳಿದಷ್ಟು ಜಮೀನ[...] ಬೇಕಾಬಿಟ್ಟಿ ಗಣಿಗಾರಿಕೆಗೆ ಅವಕಾಶ ಸಿಗುವುದು ತಡವಾದೊಡನೆ [...] ಮಿತ್ತಲ್ ಕಂಪನಿ ಸ್ಟೀಲ್ ಕಂಪನಿಗೆ ಹಣು ಹೂಡಬೇಕೋ ಬೇಡವ[...] ಎಂದು ಹಿಂದುಮುಂದು ನೋಡುತ್ತಿದೆ. ಹೀಗೆ ವಿದೇಶಿ ಬಂಡವಾಳ[...] ವಾಪಸ್ ಹೋಗಲು ಕಾರಣವಾಗುವುದು ಈ ಕಾಲಘಟ್ಟದಲ್ಲಿ ಮಾತೃಹತ್ಯೆಗಿಂತ[...] ಮಹಾಪಾಪ ಎಂದು ಭಾರತದಂಥ ಮೂರನೇ ಜಗತ್ತಿನ ಪ್ರಜಾಪ್ರಭುತ್ವಗ[...] ಭಾವಿಸುತ್ತವೆ. ಪ್ರಾಯಶಃ ಇದೂ ಸಹ ಸುಪ್ರೀಂ ಕೋರ್ಟು "ಸಕ್ರ[...] ಗಣಿಗಾರಿಕೆಗೆ ಅವಕಾಶ ಕೊಡಲು ಕಾರಣವಿದ್ದಿರಬಹುದು.

ಇವರೊಡನೆ ಗಣಿಗಾರಿಕೆಯಲ್ಲಿ ತೊಡಗಿರುವ ವಿಶ್ವದ ದೈತ್ಯ ಗಣಿಗಾ[...] ಸಂಸ್ಥೆಗಳಾದ ರಿಯೊ ಟಿಂಟೋ, ಬಿಹೆಚ್‌ಪಿ ಬಿಲ್ಲಿಟನ್‌ಗಳೂ ಭಾರತಕ್ಕೆ [...] ಇಟ್ಟಿವೆ. ಇವುಗಳ ಒಟ್ಟಾರೆ ವಹಿವಾಟು ಭಾರತದ ರಾಷ್ಟ್ರೀಯ ಆದಾಯಕ್ಕಿಂತ[...] ಹೆಚ್ಚಿನದ್ದು. ಇವುಗಳ ಒತ್ತಡಕ್ಕೆ ಮಣಿದು ಹಾಗೂ ತತ್‌ಕ್ಷಣದ ಭ್ರಷ್ಟಾಚಾ[...] ಪಕ್ಕಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಇಡೀ ಭಾರತವ[...] ಬೇಲೇಕೇರಿಯಾಗಿಸಿವೆ.

ಹೀಗಾಗಿ ಈ ದೇಶದ ಖನಿಜ ಸಂಪತ್ತು ನಿಜಕ್ಕೂ ಈ ದೇಶದ ಜನರ[...] ಬಳಕೆಯಾಗಬೇಕೆಂದರೆ ಗಣಿ ಉದ್ಯಮದ ರಾಷ್ಟ್ರೀಕರಣವಾಗಬೇಕು. ಅದ[...] ಬಿಟ್ಟು ಬೇರೇ ದಾರಿಯಿಲ್ಲ. ಅದು ಈ ಪ್ರಭುತ್ವದಿಂದ ಸಾಧ್ಯವಿ[...] ನ್ಯಾಯಾಲಯಗಳು ಈ ಪ್ರಭುತ್ವದ ಭಾಗವಷ್ಟೇ!

ನೋ ಕಾಮೆಂಟ್ಸ್



"ಅಶೋಕ್ ಮೀರ್ ಸಾದಿಕ್. ಯಡಿಯೂರಪ್ಪ ಶಕುನಿ."

-ಶಂಕರಲಿಂಗೇಗೌಡ

ನಂಬಿದ್ರೆನಂಬಿ ಬಿಟ್ರೆಬಿಡಿ



"ಎಲ್ಲರದ್ದೂ ಆಯ್ತು. ಇನ್ನು ಉಳಿದಿದ್ದು ಬಹು ನಿರೀಕ್ಷಿತ ಬಿಜೆಪಿಯನ್ನು ಆರಿಸಿದರೆ ಬಹು ದೊಡ್ಡದಲ್ಲದಿದ್ದರೂ ಒಂದು ಚಿಕ್ಕ ಬದಲಾವಣೆಯನ್ನಾದರೂ ತರುತ್ತಾರೆಂಬ ನಿರೀಕ್ಷೆ ನಮ್ಮದಾಗಿತ್ತು. ಆದರೆ ಆಗಿರುವುದೇನು? ಸುಮಾರು 175 ತಾಲ್ಲೂಕುಗಳಲ್ಲಿ ಅಜಮಾಸು 150ಕ್ಕೂ ಹೆಚ್ಚಿನವುಗಳಲ್ಲಿ ಘನಘೋರ ಬಂದು, ಕೋಟ್ಯಂತರ ಬಡ ರೈತರು, ಕಾರ್ಮಿಕರು ತಲ್ಲಣಿಸಿ ಹೋಗುತ್ತಿರುವಾಗ, ಕೃಷಿ, ನೀರಾವರಿ, ಪಿಡಬ್ಲ್ಯೂಡಿ, ಕೈಗಾರಿಕಾ, ವಸತಿ, ವಿದ್ಯುಚ್ಛಕ್ತಿ, ಅಬಕಾರಿ ಮುಂತಾದ ಅತಿಮುಖ್ಯ ಖಾತಾ ಸಚಿವರ ಕೈಯಲ್ಲಿ ರಾಜೀನಾಮೆ ಕೊಡಿಸಿ ಅರ್ಥಕ್ಕೂ, ಹೆಚ್ಚಿನ ವಿಕಾಸ ಸೌಧ–ವಿಧಾನ ಸೌಧದ ಭಾಗದ ಕಚೇರಿಗೆ ಮಾಸಗಟ್ಟಲೆ ಬೀಗಜಡಿಸಿ ಬೆಂಗಳೂರಿಗೂ–ದೆಹಲಿಗೂ ಓಡಾಡುವುದರಲ್ಲೇ ಕಾಲಹರಣ ಮಾಡಿದರಲ್ಲ, ಇದು ಯಾವ ಪುರುಷಾರ್ಥಕ್ಕೆ ಮಹಾಸ್ವಾಮಿ?"

- ಮಾಸ್ಟರ್ ಹಿರಣ್ಣಯ್ಯ

"ಸಂಪುಟ ರಚನೆಯ ಸಂಪೂರ್ಣ ಅಧಿಕಾರ ನೂತನ ಮುಖ್ಯಮಂತ್ರಿಗೆ ಸೇರಿದ್ದು. ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಯೂ ಸೇರಿದಂತೆ ಸಂಪುಟ ರಚನೆಗೆ ಸಂಬಂಧಪಟ್ಟ ಎಲ್ಲಾ ನಿರ್ಧಾರಗಳನ್ನು ಅವರೇ ಕೈಗೊಳ್ಳುವರು."


- ರಾಜನಾಥ್ ಸಿಂಗ್

"ಜಗದೀಶ್ ಶೆಟ್ಟರ್ ಜಾತಿ ಆಧಾರದಲ್ಲಿ ಮುಖ್ಯಮಂತ್ರಿ ಆಗುತ್ತಿಲ್ಲ. ಹೋರಾಟದಿಂದ ಬಂದಿರುವ ಅವರ ಸಾಮರ್ಥ್ಯವನ್ನು ಗುರುತಿಸಿ ಅವಕಾಶ ನೀಡಲಾಗಿದೆ. ಇದನ್ನು ಅರ್ಥಮಾಡಿಕೊಳ್ಳದೆ ಜಾತಿಯನ್ನು ಪ್ರಸ್ತಾಪಿಸುವುದು ಸರಿಯಲ್ಲ"

- ಪ್ರಭಾಕರ್ ಕೋರೆ

ರೈತರ ಹೆಗಲ ಮೇಲೆ ಬಂದೂಕಿಟ್ಟು ಮಧ್ಯಮ ವರ್ಗಕ್ಕೆ ಡಿಶುಂ

"ನೀರಿನ ಬಾಟಲಿಗೆ, ಐಸ್ಕ್ರೀಂ ದರ ಹೆಚ್ಚಾದರೆ ಏನೂ ಹೇಳುವುದಿಲ್ಲ. ಹಾಗೆಯೇ ಆಹಾರ ಧಾನ್ಯಗಳ ಬೆಲೆ ತುಸು ಹೆಚ್ಚಾದರೆ ಖರೀದಿಸಲು ಮಧ್ಯಮವರ್ಗದ ಜನತೆಗೆ ಅಡ್ಡಿ ಏನು? ರೈತರು ಬೆಳೆಯುವ ಧಾನ್ಯ[...] ಹೆಚ್ಚಿನ ಬೆಲೆ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಹಾಗಾಗಿ ಆಹಾರ ಧಾನ್ಯಗಳ ಬೆಲೆಯಲ್ಲಿ ತುಸು ಹೆಚ್ಚಳ ಆಗಿದೆ. ಇದರಿಂದ ರೈತಾಪಿವರ್ಗಕ್ಕೆ ಹೆಚ್ಚಿನ ಲಾಭ ಆಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು."



- ಚಿದಂಬರಂ

ಆಯ್ಕೆಯೋ? ಖರೀದಿಯೋ?

"ರಾಷ್ಟ್ರಪತಿ ಚುನಾವಣೆಯಲ್ಲಿ ಇಂಥವರಿಗೇ ಮತಹಾಕಿ ಅಥವ[...] ಹಾಕಬೇಡಿ ಎಂದು ರಾಜಕೀಯ ಪಕ್ಷಗಳು ತಮ್ಮ ಸದಸ್ಯರಿಗೆ ವಿಪ[...] ಹೊರಡಿಸುವುವಂತಿಲ್ಲ. ಹೀಗೆ ವಿಪ್ ಹೊರಡಿಸುವುದು ಅಥವಾ ನಿರ್ದೇಶ[...] ನೀಡುವುದು ಅಪರಾಧವಾಗುತ್ತದೆ. ರಾಷ್ಟ್ರಪತಿ ಚುನಾವಣೆಯಲ್ಲಿ ಮ[...] ನೀಡುವುದು ಅಥವಾ ಬಿಡುವುದು ಆಯಾ ಶಾಸಕರು ಮತ್ತು ಸಂಸದರಿ[...] ಬಿಟ್ಟ ವಿಷಯ. ಈ ವಿಷಯದಲ್ಲಿ ಅವರು ಸ್ವತಂತ್ರರು. ಇದು ಪಕ್ಷಾಂತ[...] ನಿಷೇಧ ಕಾಯ್ದೆಗೆ ಒಳಪಡುವುದಿಲ್ಲ"

- ಚುನಾವಣಾ ...

ಸಿಡುಕುಮೋರೆ, ನಗುಮುಖ, ಮುಗುಳ್ನಗೆ ಹಿಂದೆ ಆರೆಸ್ಸೆಸ್

ನಿಮ್ಮೆಲ್ಲರಿಗೆ ಈ ಬಿಜೆಪಿಗಳ ಕಿತ್ತಾಟ, ತಿಕ್ಕಾಟ ಇತ್ಯಾದಿಗಳನ್ನು ನೋಡಿ ಏನನಿಸುತ್ತಿಯೋ ಗೊತ್ತಿಲ್ಲ. ಆದರೆ ನನಗಂತೂ ರೋಸಿಹೋಗಿದೆ. ಇವರ ಪಕ್ಷ ಅದ್ಯಾವಾಗ ಅಧಿಕಾರದಿಂದ ತೊಲಗುತ್ತದೋ, ಅದ್ಯಾವಾಗ ನಮ್ಮ ರಾಜ್ಯದ ಜನರಿಗೆ ನೆಮ್ಮದಿ ಸಿಗುತ್ತದೋ ಎಂಬ ಚಿಂತೆಯೇ ನನ್ನನ್ನು ಸದಾ ಕಾಡುತ್ತಿರುತ್ತದೆ. ಅಂದಮಾತ್ರಕ್ಕೆ ಬೇರೆ ರಾಜಕೀಯ ಪಕ್ಷಗಳು ಬಿಜೆಪಿಯವರಿಗಿಂತ ಉತ್ತಮರು ಎಂದಲ್ಲ, ಆದರೆ ಇತ್ತೀಚಿನ ವರ್ಷಗಳಲ್ಲಂತೂ ನಮ್ಮ ರಾಜ್ಯದಲ್ಲಿ ಈ ಬಿಜೆಪಿಯ ಆಡಳಿತಾವಧಿಯಲ್ಲಿ ಕಂಡಿರುವಷ್ಟು ಅಧಿಕಾರ ದಾಹ, ಭ್ರಷ್ಟಾಚಾರ, ದ್ವೇಷ, ಕಾಲೆಳೆತ, ರಾಜಕೀಯ ಹಗೆತನ ಮತ್ತು ಇದೆಲ್ಲಕ್ಕಿಂತ ಮುಖ್ಯವಾಗಿ ಅಭದ್ರತೆಯನ್ನು ಕಂಡಿರಲಿಲ್ಲ ಎಂಬುದಂತೂ ಸ್ಪಷ್ಟ.

ಮೊನ್ನೆ ನೆಲಮಂಗಲದಲ್ಲಿರುವ ಅಮ್ಮನ ತೋಟಕ್ಕೆ ಹೋಗಿದ್ದಾಗ ಅಲ್ಲಿ ಕಂಡ ಕೆಲವು ದೃಶ್ಯಗಳು ನನ್ನ ಮನಸ್ಸನ್ನು ಕಲಕಿದವು. ಐದು ಎಕರೆಯ ಆ ತೋಟದಲ್ಲಿ ಇರುವ ಎರಡು ಬೋರ್‌ವೆಲ್‌ಗಳಲ್ಲೂ ನೀರು ಕಡಿಮೆಯಾಗಿರುವುದರಿಂದ ಪ್ರಥಮಬಾರಿಗೆ ಹತ್ತು ಅಡಿಕೆ ಮರಗಳು ಒಣಗಿಹೋಗಿದ್ದವು. ತೆಂಗಿನ ಮರಗಳ ಗರಿಗಳು ಒಣಗಿಹೋಗಿದ್ದವು. ತೋಟದಲ್ಲಿರುವ ಹತ್ತಾರು ದನಕರುಗಳಲ್ಲದೆ ಸುತ್ತಮುತ್ತಲಿನ ಹಳ್ಳಿಗಳಲ್ಲಿರುವ ಜಾನುವಾರುಗಳು ಮೇವು ಇಲ್ಲದೆ ತತ್ತರಿಸುತ್ತಿದ್ದವು. ಮೇಯಲು ಹುಲ್ಲು ಅರಿಸುತ್ತಾ ನ್ಯಾಷನಲ್ ಹೈವೇ ನಾಲ್ಕರ ಹತ್ತಿರ ಹೋಗುವ ಕೆಲವು ದನಗಳು ಆ ರಸ್ತೆಯಲ್ಲಿ ವೇಗವಾಗಿ ಚಲಿಸುವ ವಾಹನಗಳಿಗೆ ಬಲಿಯಾಗಿದ್ದವು...


ಇದು ಅಮ್ಮನ ತೋಟ ಮತ್ತು ಸುತ್ತಮುತ್ತಲಿನ ಗ್ರಾಮಗಳ ಕತೆ ಮಾತ್ರವಲ್ಲ, ಇವತ್ತು ಕರ್ನಾಟಕದ ಶೇಕಡ ಐವತ್ತಕ್ಕಿಂತ ಹೆಚ್ಚು ಭಾಗಗಳಲ್ಲಿ ಮಳೆ ಆಗಿಲ್ಲ, ಅಣೆಕಟ್ಟುಗಳಲ್ಲಿ ನೀರಿಲ್ಲ, ರಾಜ್ಯಾದ್ಯಂತ ಲಕ್ಷಾಂತರ ಬೋರ್‌ವೆಲ್‌ಗಳು ಬತ್ತಿಹೋಗಿವೆ. ಬೇಸಾಯಕ್ಕೆ ನೀರು ಇಲ್ಲದಿರುವ ಮಾತು ಹಾಗಿರಲಿ, ಸಾವಿರಾರು ಹಳ್ಳಿಗಳಲ್ಲಿ ಕುಡಿಯುವ ನೀರೂ ಇಲ್ಲದಂತಾಗಿದೆ. ರಾಜ್ಯದ ಕೋಟ್ಯಾಂತರ ಜನ ಇಂತಹ ಭೀಕರ ಪರಿಸ್ಥಿತಿಯಲ್ಲಿ ನರಳುತ್ತಿರುವಾಗ ಈ ಬಿಜೆಪಿಯ ನಾಯಕರಿಗೆ ಇದ್ಯಾವುದರ ಬಗ್ಗೆಯೂ ಗಮನಹರಿಸಲು ಪುರುಸೊತ್ತಿಲ್ಲ, ಬದಲಾಗಿ ಯಾರು ಮುಖ್ಯಮಂತ್ರಿ ಆಗಬೇಕು, ಯಾರ್‍ಯಾರಿಗೆ ಉಪಮುಖ್ಯಮಂತ್ರಿ ಹುದ್ದೆ ದಕ್ಕಬೇಕು, ಯಾರು ಬಿಜೆಪಿಯ ರಾಜ್ಯಾಧ್ಯಕ್ಷರಾಗನಬೇಕು, ಯಾರ ಬಣದವರಿಗೆ ಎಷ್ಟು ಮಂತ್ರಿ ಸ್ಥಾನ ಕೊಡಬೇಕು ಎಂಬುದರ ಬಗ್ಗೆಯೇ ಕಿತ್ತಾಡುಕೊಳ್ಳುವುದರಲ್ಲಿ ಮಗ್ನರಾಗಿದ್ದರು. ನಾಚಿಕೆ ಎಂಬುದೇ ಇಲ್ಲದವರು ವರ್ತಿಸುವ ರೀತಿ ಇದು.

ನೆನಪಿದೆಯೇ, ನಾಲ್ಕು ವರ್ಷಗಳ ಹಿಂದೆ ಚುನಾವಣೆಗಳು ನಡೆದಾಗ ಇದೇ ಬಿಜೆಪಿಗಳು ಎಂತೆಂತಹ ಭರವಸೆಗಳನ್ನು ರಾಜ್ಯದ ಜನರಿಗೆ ನೀಡಿದ್ದರು ಎಂದು? "ಅರವತ್ತು ವರ್ಷಗಳಿಂದ ರಾಜ್ಯವನ್ನು ಆಳಿರುವ ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದಾಗಿ ಇಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಜಾತೀಯತೆ ಮುಖ್ಯವಾಗಿದೆ. ರಾಜಕೀಯದಲ್ಲಿ ಅಭದ್ರತೆ ಉಂಟಾಗಿದೆ. ಜನರ ಬಗೆಗಿನ ಕಾಳಜಿ ಇಲ್ಲದಂತಾಗಿದೆ. ನಮ್ಮ ಪಕ್ಷಕ್ಕೆ ಒಂದು ಅವಕಾಶವನ್ನು ಕೊಟ್ಟು ನೋಡಿ. ನಾವು ಸುಭದ್ರ, ಪ್ರಾಮಾಣಿಕ ಮತ್ತು ಪಾರದರ್ಶಕ ಸರ್ಕಾರವನ್ನು ನೀಡುತ್ತೇವೆ" ಎಂದು ಬಿಜೆಪಿಗಳು ಬೊಗಳೆಬಿಟ್ಟಿದ್ದರು. ಅದರಲ್ಲೂ ಕುಮಾರಸ್ವಾಮಿಯ ಕೃಪೆಯಿಂದ ಅಧಿಕಾರದಿಂದ ವಂಚಿತರಾಗಿದ್ದ ಯಡಿಯೂರಪ್ಪ ಎಂಬ ಚೆಡ್ಡಿ ನಾಯಕ "ನಾನೇನು ತಪ್ಪು ಮಾಡಿದ್ದೆ ಎಂದು ನನಗೆ ಈ ಶಿಕ್ಷೆ?" ಎಂದು ಹೋಗಿಬಂದಲ್ಲೆಲ್ಲ ಆರ್ಭಟಿಸಿದ್ದರು, ಕಣ್ಣೀರಿಟ್ಟಿದ್ದರು.

ಆದರೆ ಇದೇ ಯಡಿಯೂರಪ್ಪನ ನೇತೃತ್ವದಲ್ಲಿ ಬಿಜೆಪಿ ಅಧಿಕಾರ ಪಡೆದ ನಂತರ ರಾಜ್ಯಕ್ಕೆ ಕೊಟ್ಟ ಕೊಡುಗೆ ಏನು? ಆರಂಭದ ದಿನಗಳಲ್ಲೇ ಒಂದೆಡೆ ಬೀಜ ಕೇಳುತ್ತಿದ್ದ ರೈತರ ಮೇಲೆ ಗುಂಡು ಹಾರಿಸಿ ಇಬ್ಬರು ಅನ್ನದಾತರನ್ನು ಕೊಂದಿದ್ದಲ್ಲದೆ ಇನ್ನೊಂದೆಡೆ 'ಆಪರೇಷನ್ ಕಮಲ' ಎಂಬ ಅನೈತಿಕ ರಾಜಕೀಯವನ್ನು ಪ್ರಾರಂಭಿಸಿದರು. ಸುಮಾರು ಒಟ್ಟೊಟ್ಟಿಗೆ ನಡೆದ ಈ ಎರಡು ಘಟನೆಗಳೇ ಬಿಜೆಪಿ ಅದೆಷ್ಟು ಜನದ್ರೋಹಿ ಎಂದೂ, ಅಧಿಕಾರದಾಹಿ ಎಂದೂ ಸಾರಿ ಹೇಳುತ್ತಿದ್ದವು.

ಹೀಗೆ ತಮ್ಮ ಅವಧಿಯನ್ನು ಪ್ರಾರಂಭಿಸಿದ ಬಿಜೆಪಿ ಅನಂತರ ಮಾಡಿದ 'ಸಾಧನೆಗಳು' ಜನರಲ್ಲಿ ಅಸಹ್ಯ ಹುಟ್ಟಿಸುವಂತಹದ್ದೇ ಆಗಿದ್ದವು. ಕಳೆದ ಅರವತ್ತು ವರ್ಷಗಳಲ್ಲಿ ರಾಜ್ಯದಲ್ಲಿ ಭ್ರಷ್ಟಾಚಾರ ವಿವಿಧ ಪ್ರಮಾಣಗಳಲ್ಲಿ ನಡೆದಿತ್ತು, ಆದರೆ ಯಾವ ಮುಖ್ಯಮಂತ್ರಿಯೂ ಯಡ್ಡಿಯಷ್ಟು ದೋಚಿರಲಿಲ್ಲ. ಯಾರದ್ದೇ ಸಂಪುಟದಲ್ಲಿದ್ದ ಸಚಿವರು ಯಡ್ಡಿಯ ತಂಡದಲ್ಲಾದಂತೆ ಒಬ್ಬರನಂತರ ಒಬ್ಬರಂತೆ ಜೈಲುಕಂಬಿಗಳನ್ನು ಎಣಿಸಲಿಲ್ಲ. ಸ್ವತಃ ಯಡ್ಡಿಯಂತೆ ಯಾರೂ ಸಾಕ್ಷಿ ಸಮೇತ ಸಿಕ್ಕಿಹಾಕಿಕೊಂಡು ಜೈಲಿಗೆ ಹೋಗಿರಲಿಲ್ಲ, ಅಂತಹ ಸಾಧನೆ ಮಾಡಿದ ಕೀರ್ತಿ ಯಡ್ಡಿಗೆ ಮತ್ತಾತನ ಚೆಡ್ಡಿ ತಂಡಕ್ಕೆ ಸಲ್ಲುತ್ತದೆ. (ಆದರೆ ಈ ಯಡ್ಡಿ ಎಂತಹ ಜಗಮೊಂಡ ಎಂದರೆ ತಾನು ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿರುವುದಕ್ಕೆ, ಜೈಲುಪಾಲಾಗಿದ್ದಕ್ಕೆ ವಿರೋಧ ಪಕ್ಷಗಳನ್ನು, ಲೋಕಾಯುಕ್ತರನ್ನು, ಕೊನೆಗೆ ತನ್ನ ಪಕ್ಷದವರನ್ನೂ ದೂರಿದರೆ ಹೊರತು ತಮ್ಮ ಧನದಾಹಿತನವನ್ನಾಗಲಿ, ಖದೀಮ ಮಕ್ಕಳು ಮತ್ತು ಅಳಿಯನನ್ನಾಗಲಿ ದೂರಲೇ ಇಲ್ಲ!)

ನಿಜ, ಜಾತಿ ಎಂಬುದು ನಮ್ಮ ಸಮಾಜದ ಅನಿಷ್ಟಗಳಲ್ಲಿ ಒಂದಾಗಿರುವುದರಿಂದ ಅದು ಚುನಾವಣೆಗಳಲ್ಲಿ,



ರಾಜಕೀಯದಲ್ಲಿ ಮುಖ್ಯ ಪಾತ್ರವಹಿಸುತ್ತದೆ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಇಂತಹ ಅನಿಷ್ಟಕ್ಕೆ ಸರ್ಕಾರದ ಮರ್ಜಿ ಮತ್ತು ಬೆಂಬಲವನ್ನು ಯಾವ ಹಿಂಜರಿಕೆಯೂ ಇಲ್ಲದಂತೆ ಸೃಷ್ಟಿಸಿದ್ದು ಕೂಡ ಬಿಜೆಪಿಯ ಯಡ್ಡಿಯ ಮತ್ತೊಂದು ಸಾಧನೆ. ಇವತ್ತು ಜಗದೀಶ್ ಶೆಟ್ಟರ್ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿರುವುದರ ಹಿಂದೆಯೂ ಇದೇ ಜಾತಿ ರಾಜಕಾರಣ ಕೆಲಸ ಮಾಡಿರುವುದನ್ನು ಸ್ವತಃ ಶೆಟ್ಟರ್ ಅವರೂ ನಿರಾಕರಿಸಲಾರರು.

ಇನ್ನು ರಾಜ್ಯದಲ್ಲಿ ರಾಜಕೀಯ ಅಭದ್ರತೆ ಬಗ್ಗೆ ಮಾತನಾಡುವ ಅವಶ್ಯಕತೆಯೇ ಇಲ್ಲ ಎನಿಸುತ್ತದೆ. ನಾಲ್ಕು ವರ್ಷಗಳ ಹಿಂದೆ ಬಿಜೆಪಿಗೆ ಅಧಿಕಾರ ಸಿಕ್ಕಾಗಿನಿಂದ ಆ ಪಕ್ಷದಲ್ಲಿ ಭಿನ್ನಮತೀಯ ಚಟುವಟಿಕೆಗಳು ಸರಣಿ ರೂಪದಲ್ಲಿ ಜರುಗುತ್ತಲೇ ಬಂದಿವೆ. ಒಂದೇ ವ್ಯತ್ಯಾಸವೇನೆಂದರೆ ಯಾರು ಯಾರ ವಿರುದ್ಧ ಯಾವಾಗ ಭಿನ್ನಮತೀಯ ಚಟುವಟಿಕೆಗಳನ್ನು ನಡೆಸುತ್ತಿದ್ದರು ಎಂಬುದಷ್ಟೆ. ಇದೆಲ್ಲದರ ಪರಿಣಾಮವಾಗಿ ಇವತ್ತು ಜಗದೀಶ್ ಶೆಟ್ಟರ್ ಮೂರನೆ ಬಿಜೆಪಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಇದನ್ನು ಶೆಟ್ಟರ್ ಅವರ-ಅದೃಷ್ಟವೆಂದೂ, ಕರ್ನಾಟಕದ ದುರಾದೃಷ್ಟವೆಂದೂ ನೋಡಬಹುದಷ್ಟೇ.

ರಾಜಕೀಯದಲ್ಲಿ ಯಾರೂ ಶಾಶ್ವತ ಮಿತ್ರರೂ ಅಲ್ಲ, ವೈರಿಗಳೂ ಅಲ್ಲ ಎಂಬ ಮಾತಿದೆ. ಅದು ಯಡ್ಡಿ ಮತ್ತು ಶೆಟ್ಟರ್- ಇವರಿಬ್ಬರಿಗೆ ಸರಿಯಾಗಿ ಅನ್ವಯಿಸುತ್ತದೆ. ಈ ಹಿಂದೆ ಇದೇ ಶೆಟ್ಟರ್ ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಿಂದ ಬಸವರಾಜ್ ಬೊಮ್ಮಾಯಿ ವಿರುದ್ಧ ಗೆಲ್ಲುವಂತೆ ಯಡ್ಡಿ ಸಹಕರಿಸಿದ್ದರು. ಅದೇ ಚುನಾವಣೆಯಲ್ಲಿ ಸ್ವತಃ ಯಡ್ಡಿ ಬಂಗಾರಪ್ಪನ ವಿರುದ್ಧ ಸೋತಿದ್ದರಿಂದ ಶೆಟ್ಟರ್ ಅವರೇ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗುವಂತೆ ಯಡ್ಡಿ ನೋಡಿಕೊಂಡಿದ್ದರು. ಅದಕ್ಕೆ ತಕ್ಕಂತೆ ಶೆಟ್ಟರ್ ಕೂಡ ವರ್ತಿಸಿದ್ದರು. ಮುಂದಿನ ಚುನಾವಣೆಯಲ್ಲಿ ಯಡ್ಡಿ ಗೆದ್ದಾಗ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಯಡ್ಡಿಗೆ ಶೆಟ್ಟರ್ ಬಿಟ್ಟುಕೊಟ್ಟಿದ್ದರು.

ಆದರೆ 2008ರಲ್ಲಿ ಶೆಟ್ಟರ್ ವಿರುದ್ಧ ಯಡ್ಡಿ ತಿರುಗಿಬಿದ್ದರು. ಅದಕ್ಕೆ ಮುಖ್ಯ ಕಾರಣ ಲಿಂಗಾಯತ ಜಾತಿಯ ಶೆಟ್ಟರ್ ಯಡ್ಡಿಯಂತೆ ದಕ್ಷಿಣ ಕರ್ನಾಟಕದವರಾಗಿರದೆ ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿರುವ ಉತ್ತರ ಕರ್ನಾಟಕದವರಾಗಿದ್ದು, ತನ್ನಂತೆಯೇ ಆರೆಸ್ಸೆಸ್ ಮತ್ತು ಬಿಜೆಪಿಯಲ್ಲಿ ಬೆಳೆದ ಶೆಟ್ಟರ್ ಮುಂದೊಂದು ದಿನ ತನಗೆ ಪ್ರತಿಸ್ಪರ್ಧಿ ಆಗಬಹುದು ಎಂದು ಹೆದರಿದ ಯಡ್ಡಿ ಬಸವರಾಜ್ ಬೊಮ್ಮಾಯಿಯನ್ನು ಬಿಜೆಪಿಗೆ ತಂದು ಆತನನ್ನು ಶೆಟ್ಟರ್ ವಿರುದ್ಧ ಬೆಳೆಸಲಾರಂಭಿಸಿದರು. ಎಷ್ಟರ ಮಟ್ಟಿಗೆಂದರೆ 2008ರಲ್ಲಿ ಮೊದಲ ಬಿಜೆಪಿ ಮುಖ್ಯಮಂತ್ರಿ ಆದ ಯಡ್ಡಿ ಹೊಸಬ ಬೊಮ್ಮಾಯಿಗೆ ಮಂತ್ರಿ ಪದವಿಯನ್ನು ಕೊಟ್ಟರೆ ಶೆಟ್ಟರ್ ಅವರಿಗೆ ಸ್ಪೀಕರ್ ಹುದ್ದೆಯನ್ನಷ್ಟೇ ಕರುಣಿಸಿದರು.

ಗಣಿಕಳ್ಳ ರೆಡ್ಡಿಗಳ ಇಲಾಖೆಗಳಲ್ಲಿ ಯಡ್ಡಿಯ ಆಪ್ತೆ ಶೋಭಾ ಕರಂದ್ಲಾಜೆ ಮೂಗು ತೂರಿಸಲು ನೋಡಿದಾಗ ಆಕೆಯ ವಿರುದ್ಧ ಬಳ್ಳಾರಿಯ ಗ್ಯಾಂಗ್ ತಿರುಗಿ ಬಿತ್ತು. ಆಗ ಯಡ್ಡಿ ವಿರುದ್ಧ ತಮ್ಮ ಸೇಡು ತೀರಿಸಿಕೊಂಡು ತಾವೇ ಮುಖ್ಯಮಂತ್ರಿ ಆಗಲು ಶೆಟ್ಟರ್ ರೆಡ್ಡಿಗಳೊಂದಿಗೆ ಕೈಜೋಡಿಸಿದರು. ಆದರೆ ಬಿಜೆಪಿ ಹೈಕಮಾಂಡ್ ಯಡ್ಡಿಯನ್ನು ಮುಖ್ಯಮಂತ್ರಿ ಸ್ಥಾನದಿಂದ ಕಿತ್ತೊಗೆಯಲಿಲ್ಲ. ಆಗ ಯಡ್ಡಿಗೆ ಮುಖಭಂಗವೂ, ಶೆಟ್ಟರ್‌ಗೆ ಭ್ರಮನಿರಸನವೂ ಆಗಿತ್ತು.

ಅನಂತರ ಶೆಟ್ಟರ್ ಮತ್ತೊಮ್ಮೆ ಮುಖ್ಯಮಂತ್ರಿ ಸ್ಥಾನದ ಹತ್ತಿರ ಬಂದದ್ದು ಕಳೆದ ವರ್ಷ. ಆಗಲೂ ಯಡ್ಡಿ ಅಡ್ಡಗಾಲು ಹಾಕಿ ಶೆಟ್ಟರ್ ಬದಲಿಗೆ ಸದಾನಂದ ಗೌಡ ಮುಖ್ಯಮಂತ್ರಿ ಆಗುವಂತೆ ನೋಡಿಕೊಂಡಿದ್ದರು. ಆಗ ತಮಗಾದ ಅವಮಾನವನ್ನು ಶೆಟ್ಟರ್ ನುಂಗಿಕೊಂಡು ಸುಮ್ಮನಾದರು. ಆದರೀಗ ಲಿಂಗಾಯತ ಸಮುದಾಯದ ಮೇಲೆ ತಮ್ಮ ಹಿಡಿತವನ್ನು ಭದ್ರಪಡಿಸಿಕೊಳ್ಳಲು ಯಡ್ಡಿಯೇ ಮುಂದೆ ನಿಂತು ಲಿಂಗಾಯತ ಶೆಟ್ಟರ್ ಮುಖ್ಯಮಂತ್ರಿ ಸ್ಥಾನಕ್ಕೇರುವಂತೆ ಮಾಡಿದ್ದಾರೆ. ಮುಂದೆ ಯಾವ ಕಾರಣಕ್ಕೆ ಯಾವ ಕ್ಷಣ ಯಡ್ಡಿ ತನ್ನ

ಕಂಡಹಾಗೆ



editorlankesh@gmail.com ● ಗೌರಿ ಲಂಕೇಶ್


ಬುದ್ಧಿ ಬದಲಾಯಿಸುತ್ತಾರೆಂದು ಹೇಳಲಾಗುವುದಿಲ್ಲ.

ಇವತ್ತು 'ಭಿನ್ನಮತೀಯರ ಜನತಾ ಪಕ್ಷ'ವಾಗಿ ಪರಿವರ್ತನೆಗೊಂಡಿರುವ ಬಿಜೆಪಿಯ ನೂತನ ಮುಖ್ಯಮಂತ್ರಿ ಆಗಿರುವ ಶೆಟ್ಟರ್ ಅವರ ಅಧಿಕಾರಾವಧಿ ಒಂದು ವರ್ಷಕ್ಕಿಂತಲೂ ಕಮ್ಮಿ. ಇಷ್ಟು ಅಲ್ಪ ಅವಧಿಯಲ್ಲಿ ಅವರು ಏನು ಮಾಡಲು ಸಾಧ್ಯ? ಶೆಟ್ಟರ್ ಅವರು ಸದಾನಂದ ಗೌಡರಿಗಿಂತ ಚಾಣಾಕ್ಷ ರಾಜಕಾರಣಿ ಎಂಬುದು ಅವರ ಹತ್ತಿರದವರ ಅಭಿಪ್ರಾಯ. ಆದರೆ ಶೆಟ್ಟರ್ ಅವರ ಮುಂದಿರುವ ಆಯ್ಕೆಗಳು ಸರಳವಾದವುಗಳಲ್ಲ. ಅವರು ತಮ್ಮ ಸದ್ಯದ ಮಿತ್ರ ಯಡ್ಡಿಯನ್ನು ರಕ್ಷಿಸಲು ಯತ್ನಿಸಿದರೆ ಕೆಟ್ಟ ಹೆಸರು ಪಡೆಯುತ್ತಾರೆ. ರಕ್ಷಿಸದೆ ಈ ಹಿಂದೆ ತಮಗಾದ ಅವಮಾನಕ್ಕೆ ಪ್ರತೀಕಾರ ತೀರಿಸಿಕೊಳ್ಳಲು ಮುಂದಾದರೆ ಯಡ್ಡಿಯ ಕೆಂಗಣ್ಣಿಗೆ ಗುರಿಯಾಗುತ್ತಾರೆ. ಇಂತಹ ಬಿಕ್ಕಟ್ಟಿನ ಮಧ್ಯೆ ರಾಜ್ಯಕ್ಕೆ ಉತ್ತಮ ಆಡಳಿತ ಕೊಡಲು ಅವರಿಂದ ಸಾಧ್ಯವಾದೀತೆ?

ಮೂಢನಂಬಿಕೆಗಳಾದ ವಾಸ್ತು, ಹೋಮ, ಹವನ, ರಾಹುಕಾಲ ಇತ್ಯಾದಿಗಳಲ್ಲಿ ಶೆಟ್ಟರ್ ಅವರಿಗೆ ನಂಬಿಕೆ ಇಲ್ಲದಿರುವುದು ಸ್ವಾಗತಾರ್ಹ. ಆದರೆ ಅವರು ಕೂಡ ಕೋಮುವಾದಿ ಸಿದ್ಧಾಂತವನ್ನೇ ಆಧರಿಸಿರುವ ಆರೆಸ್ಸೆಸ್ಸಿನಲ್ಲಿ ಬೆಳೆದವರು. ಹುಬ್ಬಳ್ಳಿಯಲ್ಲಿ ಈದ್ಗಾ ಮೈದಾನ ವಿವಾದದಲ್ಲಿ ಭಾಗಿ ಆಗಿದ್ದವರು. ಕಳೆದ ನಾಲ್ಕು ವರ್ಷಗಳಿಂದ ಸಂಘ ಪರಿವಾರದ ಸಿದ್ಧಾಂತಿಗಳು, ರಾಜಕೀಯ ನಾಯಕರು, ಗೂಂಡಾಗಳು, ಪಡ್ಡೆಹೈಕಳು ರಾಜ್ಯದಲ್ಲಿ ಮಾಡಿರುವ ಹತ್ತಾರು ಆಘಾತಕಾರಿ ಕೃತ್ಯಗಳಿಗೆ ಮೌನ ಸಮ್ಮತಿ ನೀಡಿರುವವರು. ಆದ್ದರಿಂದ ಯಡ್ಡಿ ಹೋದ, ಗೌಡ ಬಂದ, ಗೌಡ ಹೋದ, ಶೆಟ್ಟರ್ ಬಂದ ಡುಂಡುಂ ಎಂಬ ಬಿಜೆಪಿಗಳ ದೊಂಬರಾಟ ನಡೆಯುತ್ತಿರುವವರೆಗೂ ನಿಜವಾಗಲೂ ಅಧಿಕಾರವನ್ನು ಚಲಾಯಿಸುತ್ತಿರುವವರು ಆರೆಸ್ಸೆಸ್ಸಿನ ಲೀಡರ್‌ಗಳು.

ಯಡ್ಡಿಯ ಸಿಡುಕುಮೋರೆ, ಸದಾನಂದ ಗೌಡರ ನಗುಮುಖ, ಶೆಟ್ಟರ್ ಅವರು ಮುಗುಳ್ನಗೆ. . . ಇವೆಲ್ಲವು ನಮಗೆ ಹೊರಗೆ ಕಾಣಿಸುವ ಮುಖವಾಡಗಳು ಮಾತ್ರ. ಈ ಮುಖವಾಡಗಳ ಹಿಂದೆ ಬಚ್ಚಿಟ್ಟುಕೊಂಡು ರಾಜಕಾರಣಿಗಳನ್ನು ತಮ್ಮ ತಾಳಕ್ಕೆ ತಕ್ಕಂತೆ ಆಡಿಸುತ್ತಿರುವವರು, ರಾಜ್ಯದಲ್ಲಿ ಅನಾಹುತಕಾರಿ ಕೋಮುವಾದವನ್ನು ಬಿತ್ತುತ್ತಿರುವವರು ಆರೆಸ್ಸೆಸ್ಸಿಗರು. ಅದನ್ನು ರಾಜ್ಯದ ಜನ ಎಂದೂ ಮರೆಯಬಾರದು...

●



ಜಗದೀಶ್ ಶೆಟ್ಟರ್ ಕೊನೆಗೂ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಅವರ ಜೊತೆಗೆ ಇಬ್ಬರು ಉಪಮುಖ್ಯಮಂತ್ರಿಗಳು ಮತ್ತು 34 ಸಚಿವರೂ ಪ್ರಮಾಣವಚನವನ್ನು ಸ್ವೀಕರಿಸಿದ್ದಾರೆ.

ಆದರೆ ಮೊದಲ ಬಾರಿಗೆ ಇಬ್ಬರು ಉಪಮುಖ್ಯ ಮಂತ್ರಿಗಳನ್ನು ಮತ್ತು ಪೂರ್ಣಪ್ರಮಾಣದ ಮಂತ್ರಿಮಂಡಲ ವನ್ನು ರಚಿಸುವ ಮುಖಾಂತರ ಬಿಜೆಪಿ ನಾಯಕರು ರಾಜಕೀಯ ವಲಯದಲ್ಲಿ ದಿಗ್ಭ್ರಮೆ ಮೂಡಿಸಿದ್ದಾರೆ.

ಬಿಜೆಪಿ ಪಕ್ಷದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಉಪಮುಖ್ಯಮಂತ್ರಿ ಸ್ಥಾನವನ್ನು ಸೃಷ್ಟಿಸಲಾಗಿದೆ. ಅದರಲ್ಲೂ ಎರಡೆರಡು ಉಪಮುಖ್ಯಮಂತ್ರಿ ಸ್ಥಾನಗಳನ್ನು ಸೃಷ್ಟಿಸಿರುವುದು ಬಿಜೆಪಿಯಲ್ಲಿ ಜಾತೀಯ ಅಂತಃಕಲಹ ಯಾವ ಮಟ್ಟಕ್ಕೇರಿದೆ ಮತ್ತು ಅದನ್ನು ಪರಿಹರಿಸಲು ಬಿಜೆಪಿ ಹೈಕಮಾಂಡಿಗೆ ಸಾಧ್ಯವಾಗುತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಿದೆ. ಒಂದೇ ಕಂತಿನಲ್ಲಿ ಎಲ್ಲಾ 34 ಮಂತ್ರಿ ಸ್ಥಾನಗಳನ್ನು ಭರ್ತಿ ಮಾಡುವ ಮೂಲಕ ಇನ್ನು ಮುಂದೆ ಭಿನ್ನಮತೀಯ ಚಟುವಟಿಕೆಗಳಿಗೆ ಆಸ್ಪದ ಕೊಡುವುದಿಲ್ಲ ಎಂಬ ಸಂದೇಶವನ್ನು ಚೆಡ್ಡಿಗಳ ಹೈಕಮಾಂಡ್ ರವಾನಿಸಿದ್ದರೂ ಪ್ರಮಾಣವಚನ ಸ್ವೀಕರಿಸುವ ಕಾರ್ಯಕ್ರಮ ಮುಗಿದ ಬೆನ್ನಲ್ಲೇ ಯಥಾಪ್ರಕಾರ ಭಿನ್ನ ಮತೀಯ ದನಿಗಳು ಕೇಳಿಬಂದಿವೆ.

ವಾಸ್ತವವಾಗಿ ಬುಧವಾರ ದೆಹಲಿಯಲ್ಲಿ ಶೆಟ್ಟರ್, ಈಶ್ವರಪ್ಪ ಹಾಗೂ ಅನಂತ್‌ಕುಮಾರ್ ಎಂಬ ತ್ರಿಮೂರ್ತಿ ಗಳು ಬಿಜೆಪಿಯ ಹೈಕಮಾಂಡ್ ಜೊತೆ ಮಾತುಕತೆ ನಡೆಸಿದಾಗ 32 ಮಂತ್ರಿಗಳನ್ನು ಸಂಪುಟಕ್ಕೆ ಸೇರಿಸಲು ಹೈಕಮಾಂಡ್ ಒಪ್ಪಿಗೆ ನೀಡಿತ್ತು. ಆದರೆ ಗುರುವಾರ ಬೆಳಗ್ಗೆ 34 ಜನರನ್ನು ಮಂತ್ರಿಗಳನ್ನಾಗಿ ಮಾಡುವ ಮುಖಾಂತರ ಪಕ್ಷದಲ್ಲಿನ ಭಿನ್ನಾಭಿಪ್ರಾಯಗಳಿಗೆಲ್ಲ ಇತಿಶ್ರೀ ಹಾಡಲು ಬಿಜೆಪಿ ನಾಯಕರು ಯತ್ನಿಸಿದ್ದರು. ಆದರೆ ಅವರು ಅದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ.

ಪುಟ್ಟಸ್ವಾಮಿಗೆ ಮಂತ್ರಿಗಿರಿ; ಯಡ್ಡಿ ವಿರುದ್ಧ ಆಕ್ರೋಶ

ಪ್ರಮಾಣವಚನ ಸ್ವೀಕರಿಸಿದ ಮರುಕ್ಷಣದಿಂದಲೇ ಬಿಜೆಪಿಯಲ್ಲಿ ಎರಡು ಗುಂಪುಗಳಿಂದ ಭಿನ್ನಮತೀಯ ಚಟುವಟಿಕೆಗಳು ಆರಂಭವಾದವು. ಅದಕ್ಕೆ ಮೊದಲು ಕಾರಣವಾಗಿದ್ದು ಬಿ.ಜೆ. ಪುಟ್ಟಸ್ವಾಮಿಗೆ ಮಂತ್ರಿ ಪದವಿಯನ್ನು ಕೊಟ್ಟಿದ್ದು. ಮೊನ್ನೆ ಮೊನ್ನೆಯಷ್ಟೇ ಎಂಎಲ್‌ಸಿ ಆದ ಪುಟ್ಟಸ್ವಾಮಿಯವರನ್ನು ಮಂತ್ರಿ ಮಾಡಿದ ಬಗ್ಗೆ ಯಡಿ ಯೂರಪ್ಪನ ಹಿಂಬಾಲಕರಲ್ಲಿ ತೀವ್ರವಾದ ಅಸಮಾಧಾನವನ್ನು ಹುಟ್ಟುಹಾಕಿದೆ. ಅವರೆಲ್ಲರೂ ಗುರುವಾರ ಬೆಳಗ್ಗೆ ಯಡಿಯೂರಪ್ಪನ ಮನೆಗೆ ಹೋಗಿ ಮೊದಲ ಬಾರಿಗೆ ಧೈರ್ಯ ಮಾಡಿ ಯಡ್ಡಿ ಮುಂದೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಹಾಗೆ ಯಡ್ಡಿ ಮುಂದೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದವರಲ್ಲಿ ಬೇಳೂರು ಗೋಪಾಲಕೃಷ್ಣ ಬಿ.ಪಿ.ಹರೀಶ್, ಸುರೇಶ್ ಗೌಡ, ಕರಡಿ ಸಂಗಣ್ಣ ಮತ್ತು ಚಂದ್ರಕಾಂತ್ ಬೆಲ್ಲದ್ ಪ್ರಮುಖರು. ತಮ್ಮಲ್ಲಿ ಯಾರಾದ ರೊಬ್ಬರನ್ನು ಯಡಿಯೂರಪ್ಪ ಮಂತ್ರಿ ಮಾಡಿಸುತ್ತಾರೆಂದು ಕನಸು ಕಂಡಿದ್ದ ಇವರಿಗೆಲ್ಲ ಯಡ್ಡಿ ಪುಟ್ಟಸ್ವಾಮಿಗೆ ಗೂಟದ ಕಾರು ದಯಪಾಲಿಸಿದ್ದು ಸಹಜವಾಗಿಯೇ ದೊಡ್ಡ ಶಾಕ್ ನೀಡಿತು.

ಹಾಗೆ ನೋಡಿದರೆ ಪುಟ್ಟಸ್ವಾಮಿ ಮೂಲತಃ ಜನತಾ ದಳದವರು. ಸ್ವಲ್ಪ ಕಾಲ ಕಾಂಗ್ರೆಸ್‌ನಲ್ಲಿದ್ದು ಕೊನೆಗೆ ಬಿಜೆಪಿಯಲ್ಲಿ ಆಶ್ರಯ ಪಡೆದವರು. ಅವರನ್ನು ವಿಧಾನ ಪರಿಷತ್‌ಗೆ ಸದಸ್ಯರನ್ನಾಗಿ ಮಾಡುವುದರ ಬಗ್ಗೆಯೇ ಬಿಜೆಪಿಯಲ್ಲಿ ಸಾಕಷ್ಟು ವಿರೋಧವಿತ್ತು. ಆದರೀಗ ಪಕ್ಷದಲ್ಲಿರುವ ಮೂಲನಿವಾಸಿ ಶಾಸಕರನ್ನು ಮೂಲೆಗುಂಪು ಮಾಡಿ ಹೊಸದಾಗಿ ವಲಸೆ ಬಂದಿರುವ ಪುಟ್ಟಸ್ವಾಮಿಗೆ ಮಂತ್ರಿ ಆಗುವ ಭಾಗ್ಯವನ್ನು ಯಡ್ಡಿ ಕರುಣಿಸಿದ್ದು ಯಡ್ಡಿಯ ಹಿಂಬಾಲಕರಲ್ಲಿ ಅಪಾರ ನಿರಾಶೆ ಮೂಡಿಸಿದೆ.

ಆದರೆ ಪುಟ್ಟಸ್ವಾಮಿಯನ್ನು ಮಂತ್ರಿ ಮಾಡುವ ಮುಖಾಂತರ ಯಡಿಯೂರಪ್ಪ ಹೈಕಮಾಂಡ್ ವಿರುದ್ಧ ಗೆಲುವನ್ನು ಸಾಧಿಸಿದ್ದಾರೆ. ಇತ್ತೀಚೆಗಷ್ಟೇ ಬಿಜೆಪಿ ಸೇರಿದ ಈ ವ್ಯಕ್ತಿಗೆ ಸಚಿವ ಸ್ಥಾನ ಸಿಗುತ್ತದೆ ಎಂದರೆ ಹೈಕಮಾಂಡ್ ಯಡ್ಡಿಯ ಮಾತಿಗೆ ಮಣೆ ಹಾಕುತ್ತಿದೆ ಎಂದೇ ಅರ್ಥ. ಅಂದರೆ ಇವತ್ತು ಬಿಜೆಪಿ ಹೈಕಮಾಂಡ್ ಅತ್ಯಂತ ದುರ್ಬಲ ವಾಗಿದ್ದು ಯಡ್ಡಿಯೇ ಪ್ರಬಲರಾಗಿದ್ದಾರೆ ಎಂದು ತೋರಿಸುತ್ತದೆ.


ಅಶೋಕ್ ಪಿತೂರಿಯಲ್ಲಿ ಒಕ್ಕಲಿಗರ ಪ್ರತಿಭಟನೆ......

ಪುಟ್ಟಸ್ವಾಮಿಯಿಂದಾಗಿ ಯಡ್ಡಿಯ ಹಿಂಬಾಲಕರಲ್ಲಿ ಹುಟ್ಟಿಕೊಂಡಿರುವ ಭಿನ್ನಮತ ಯಾವ ಹಂತಕ್ಕೆ ತಲುಪಬಹುದು ಎಂದು ಈಗಲೇ ಹೇಳುವುದು ಕಷ್ಟ.

ಕರಾವಳಿಯಲ್ಲೂ ಬಂಡಾಯ

ಇತ್ತ ಯಡ್ಡಿ ಪಾಳೆಯದಲ್ಲಿ ಭಿನ್ನಮತ ಕಾಣಿಸಿಕೊಳ್ಳು ತ್ತಿದ್ದಂತೆಯೇ ಅತ್ತ ಮುಖ್ಯಮಂತ್ರಿ ಸ್ಥಾನಕ್ಕೆ ಬಲವಂತದಿಂದ ರಾಜೀನಾಮೆ ನೀಡಿದ ಸದಾನಂದ ಗೌಡರ ಪಾಳೆಯದಲ್ಲೂ ಭಿನ್ನಮತೀಯ ಚಟುವಟಿಕೆ ಹುಟ್ಟಿಕೊಂಡವು. ಹಾಗೆ ನೋಡಿದರೆ ಶೆಟ್ಟರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ಸಂದರ್ಭದಲ್ಲೇ ಕರಾವಳಿಯ ಶಾಸಕರೆಲ್ಲರೂ ಕುಂದಾಪುರದ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಶಾಸಕರ ಭವನದಲ್ಲಿ ಸಭೆ ಸೇರಿ ಕರಾವಳಿಯ ಶಾಸಕರಿಗೆ ಅನ್ಯಾಯವಾಗಿದೆ ಎಂದು ತಮ್ಮ ಅಳಲನ್ನು ತೋಡಿಕೊಳ್ಳಲಾರಂಭಿಸಿದರು.

ಈ ಸಭೆಯಲ್ಲಿದ್ದ ಬಹುತೇಕ ಶಾಸಕರು ಜನರಿಂದ ಆಯ್ಕೆಯಾದ ತಮ್ಮಂಥವರನ್ನು ಹೊರತುಪಡಿಸಿ ಹಿಂಬಾಗಿಲಿನಿಂದ ಎಂಎಲ್‌ಸಿ ಆಗಿರುವ ಕೋಟಾ ಶ್ರೀನಿವಾಸ ಶೆಟ್ಟಿಯವರನ್ನು ಮಂತ್ರಿ ಮಾಡಿದ ಬಗ್ಗೆ ತಮ್ಮ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದರು. ಇದು ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ. ಅಲ್ಲಿ ಬಂಟ್ಸ್ ಮತ್ತು ಬಿಲ್ಲವ ಜನಾಂಗದ ನಡುವೆ ಮೊದಲಿನಿಂದಲೂ ತೆರೆಮರೆಯಲ್ಲಿ ಜಗಳ ನಡೆಯುತ್ತಲೇ ಇದೆ. ಹೀಗಾಗಿ ಕೊನೆಗಳಿಗೆಯಲ್ಲಿ ಶ್ರೀನಿವಾಸ ಶೆಟ್ಟರ ಸ್ಥಾನದಲ್ಲಿ ಶ್ರೀನಿವಾಸ್ ಪೂಜಾರಿ ಮಂತ್ರಿಯಾಗಿರುವುದರಂತೂ ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿಯಲ್ಲಿ ಅಂತಃಕಲಹವನ್ನು ಹುಟ್ಟುಹಾಕು ವುದು ಶತಃಸಿದ್ಧ. ಇಂತಹ ಒಂದು ಕಲಹಕ್ಕೆ ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸಿದ ಸದಾನಂದ ಗೌಡರು ಕಾರಣವಾಗುತ್ತಿರುವುದು ರಹಸ್ಯವಾಗಿ ಉಳಿದಿಲ್ಲ.

ರಾಗ ಬದಲಾಯಿಸಿದ ಈಶ್ವರಪ್ಪ

ಶಿವಮೊಗ್ಗ ಜಿಲ್ಲೆಯ ಕೋಟಾದಡಿ ಈ ಬಾರಿಯ ಸಂಪುಟ ವಿಸ್ತರಣೆಯಲ್ಲಿ ತಮಗೆ ಮಂತ್ರಿಸ್ಥಾನ ಸಿಕ್ಕೇಸಿಗುತ್ತದೆ ಎಂಬ ಆಸೆಯಲ್ಲಿದ್ದ ಬೇಳೂರು ಗೋಪಾಲಕೃಷ್ಣ ಮತ್ತು ಹಾಲಪ್ಪನವರನ್ನು ಈಶ್ವರಪ್ಪ ಕ್ಲೀನ್‌ಬೋಲ್ಡ್ ಮಾಡಿದ್ದಾರೆ. ಮೊನ್ನೆಮೊನ್ನೆ ತನಕ 'ನಾನು ಅಧ್ಯಕ್ಷ ಸ್ಥಾನದಲ್ಲೇ ಮುಂದುವರೆಯುತ್ತೇನೆ. ನನಗೆ ಯಾವುದೇ ಕಾರಣಕ್ಕೂ ಉಪಮುಖ್ಯಮಂತ್ರಿ ಪಟ್ಟ ಬೇಡವೇ ಬೇಡ' ಎಂದು ಹೇಳುತ್ತಿದ್ದ ಈಶ್ವರಪ್ಪ ಕೊನೆಯ ಕ್ಷಣದಲ್ಲಿ ತನ್ನ ರಾಗವನ್ನು ಬದಲಾಯಿಸುವ ಮುಖಾಂತರ ಪರೋಕ್ಷವಾಗಿ ಈ ಇಬ್ಬರು ಮಂತ್ರಿ ಆಕಾಂಕ್ಷಿಗಳ ರಾಜಕೀಯ ಅಧ್ಯಾಯವನ್ನೇ ಭಗ್ನ ಮಾಡಿದ್ದಾರೆ.

ವಾಸ್ತವವಾಗಿ ಮುಂದಿನ ಚುನಾವಣೆಯನ್ನು ತನ್ನ ಅಧ್ಯಕ್ಷಗಿರಿಯಲ್ಲಿಯೇ ಎದುರಿಸಬೇಕು, ಆ ಮೂಲಕ ಎಲ್ಲಾ ಶಾಸಕರಿಗೆ ಬಿ ಫಾರ್ಮ್ ಕೊಡುವ ಅವಕಾಶವನ್ನು ತನ್ನ ಬಳಿಯಲ್ಲಿಯೇ ಉಳಿಸಿಕೊಳ್ಳಬೇಕು ಎಂಬ ಆಶೆ ಈಶ್ವರಪ್ಪನವರದಾಗಿತ್ತು, ಆದರೆ ಯಾವಾಗ ದೆಹಲಿಯಲ್ಲಿ ಪಕ್ಷದ ವರಿಷ್ಠರು ಉಪಮುಖ್ಯಮಂತ್ರಿ ಸ್ಥಾನವನ್ನು ಸೃಷ್ಟಿಸುವ ಬಗ್ಗೆ ಚರ್ಚಿಸಲಾರಂಭಿಸಿದರೋ ಆಗ ಈಶ್ವರಪ್ಪನವರಿಗೆ ಉಪ ಮುಖ್ಯಮಂತ್ರಿಯಾಗುವ ಕನಸು ಹುಟ್ಟಿಕೊಂಡಿತು. ಆದರೆ ಆ ಸ್ಥಾನಕ್ಕೆ ಗೃಹ ಸಚಿವ ಅಶೋಕ್ ಹೆಸರು ಕೇಳಿಬಂದಾಗ ತಾನೂ ಉಪ ಮುಖ್ಯಮಂತ್ರಿ ಆಗಲೇಬೇಕು ಎಂದು ಈಶ್ವರಪ್ಪನವರು ತಮ್ಮ ಕಾರ್ಯಚಟುವಟಿಕೆಯನ್ನು ಆರಂಭಿಸಿದರು. ಏಕೆಂದರೆ ಒಮ್ಮೆ ಉಪ ಮುಖ್ಯಮಂತ್ರಿ ಯಾದರೆ ಅದು ಮುಖ್ಯಮಂತ್ರಿ ಸ್ಥಾನಕ್ಕೆ ಅತ್ಯಂತ ಹತ್ತಿರವಾದದ್ದು. ಮುಂದೆ ಮುಖ್ಯಮಂತ್ರಿ ಸ್ಥಾನಕ್ಕೆ ಹೆಸರು ಪ್ರಸ್ತಾಪವಾದಾಗಲೆಲ್ಲ ಸಹಜವಾಗಿಯೇ ಮೊದಲ ಅವಕಾಶ ಉಪಮುಖ್ಯಮಂತ್ರಿಗೇ ಬರುತ್ತದೆಯೇ ವಿನಃ ಪಕ್ಷದ ಅಧ್ಯಕ್ಷರಿಗಲ್ಲ. ಈ ಎಲ್ಲಾ ಲೆಕ್ಕಾಚಾರಗಳೊಂದಿಗೆ ಈಶ್ವರಪ್ಪ ಸದಾನಂದಗೌಡರ ಜೊತೆ ಸೇರಿ, ಹೈಕಮಾಂಡ್ ಮೇಲೆ ಒತ್ತಡವನ್ನು ಹೇರಿ ಕೊನೆಗೂ ಮತ್ತೊಂದು ಉಪಮುಖ್ಯಮಂತ್ರಿ ಸ್ಥಾನವನ್ನು ಸೃಷ್ಟಿಸುವಲ್ಲಿ, ತಾವು ಅದನ್ನು ಪಡೆಯುವಲ್ಲಿ ಯಶಸ್ವಿಯಾದರು.

ಅಶೋಕ್‌ರ ತೆರೆಮರೆಯ ನಾಟಕ

ಬೆಂಗಳೂರಿನ ಶಾಸಕರೆಲ್ಲರೂ ಅಶೋಕ್‌ಗೆ ಗುಡ್‌ಬೈ ಹೇಳಿ ಸದಾನಂದ ಗೌಡರ ಗುಂಪಿಗೆ ಸೇರಿ ಯಾವುದೇ ಕಾರಣಕ್ಕೂ ಅಶೋಕ್‌ರವರನ್ನು ಉಪ ಮುಖ್ಯಮಂತ್ರಿ ಮಾಡಬಾರದು ಎಂದು ಒತ್ತಾಯಿಸಿದರು. ಅದರಲ್ಲೂ ಮೈಸೂರಿನ ಶಾಸಕ ಶಂಕರಲಿಂಗೇಗೌಡ ಅಶೋಕ್ ಬಗ್ಗೆ ಮಾತನಾಡುತ್ತ "ಅವರು ಮೀರ್ ಸಾದಿಕ್ ಇದ್ದಂತೆ" ಎಂದು ಆರ್ಭಟಿಸಿದರು. ಇಷ್ಟೆಲ್ಲ ವಿರೋಧಗಳ ನಡುವೆಯೂ ಅಶೋಕ್ ಉಪಮುಖ್ಯಮಂತ್ರಿ ಸ್ಥಾನ ಅಲಂಕರಿಸಿದ್ದು ಒಂದು ಸಾಧನೆಯೇ ಸರಿ.

ಕಳೆದ ಕೆಲವು ದಿನಗಳಿಂದ ಅಶೋಕ್ ಬಹಳ ಜಾಣ್ಮೆಯಿಂದ ಒಂದು ನಾಟಕವನ್ನಾಡಿದರು. ಮುಖ್ಯಮಂತ್ರಿ ಸದಾನಂದ ಗೌಡರ ಪದಚ್ಯುತಿ ಮಾಡುವುದು ಹತ್ತಿರವಾಗುತ್ತಿದ್ದಂತೆ ಒಕ್ಕಲಿಗರ ಸಂಘದಲ್ಲಿರುವ ತನ್ನ ಸ್ನೇಹಿತರ ಮುಖಾಂತರ 'ಒಕ್ಕಲಿಗರಿಗೆ ಅನ್ಯಾಯವಾಗಿದೆ' ಎಂದು ಪ್ರತಿಭಟನೆ, ರಸ್ತೆತಡೆ ಮೊದಲಾದ ಚಟುವಟಿಕೆಗಳನ್ನು ಪ್ರಾಯೋಜಿಸಿದ್ದೇ ಅಶೋಕ್. ಮೇಲ್ನೋಟಕ್ಕೆ ಇದು ಸದಾನಂದ ಗೌಡರಿಗೆ ಅನುಕಂಪ ತೋರಿಸುವಂತೆ ಕಂಡುಬಂದರೂ ವಾಸ್ತವವಾಗಿ ಈ ತರಹ ಮಾಡುವುದರಲ್ಲಿ ಅಶೋಕ್ ಗೇಮ್‌ಪ್ಲಾನ್ ಬೇರೆಯೇ ಆಗಿತ್ತು, ಅದೇನೆಂದರೆ, ಒಬ್ಬ ಒಕ್ಕಲಿಗನನ್ನು ಮುಖ್ಯಮಂತ್ರಿ ಕುರ್ಚಿಯಿಂದ ಇಳಿಸಿದ್ದರಿಂದ ಒಕ್ಕಲಿಗರ ಕೋಪ-ತಾಪವನ್ನು ಶಮನ ಮಾಡಲು ಕನಿಷ್ಠವಾದರೂ ಉಪಮುಖ್ಯಮಂತ್ರಿ ಸ್ಥಾನವನ್ನು ಒಕ್ಕಲಿಗರಿಗೆ ನೀಡಲಿ ಎಂಬುದೇ ಇದರ ಹಿಂದಿನ ಉದ್ದೇಶವಾಗಿತ್ತು.

ಈ ಕಾರಣಕ್ಕಾಗಿಯೇ ಯಡಿಯೂರಪ್ಪನವರನ್ನು ಭೇಟಿಯಾಗಿ ಅವರ ಒಪ್ಪಿಗೆಯನ್ನು ಪಡೆದ ಅಶೋಕ್ ತುಂಬಾ ಜಾಣ್ಮೆಯಿಂದ ಉಪ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದರು. ಯಡಿಯೂರಪ್ಪನವರಿಗೂ ತನ್ನ ವೈರಿ ಸದಾನಂದ ಗೌಡರನ್ನು ಮಟ್ಟ ಹಾಕಲು ಮತ್ತೊಬ್ಬ ಒಕ್ಕಲಿಗನನ್ನು ಎತ್ತಿಕಟ್ಟುವ ಅನಿವಾರ್ಯತೆ ಇತ್ತು. ಅದಕ್ಕೆ ಅವರು ಅಶೋಕ್‌ಗೆ ಸಂಪೂರ್ಣ ಬೆಂಬಲ ನೀಡಿದರು. ಅಶೋಕ್‌ಗೆ ಉಪಮುಖ್ಯಮಂತ್ರಿ ಸ್ಥಾನಕ್ಕೆ ಬಡ್ತಿ ನೀಡುವ ಮುಖಾಂತರ ಪರೋಕ್ಷವಾಗಿ ಒಕ್ಕಲಿಗ ನಾಯಕರಾದ ದೇವೇಗೌಡ ಮತ್ತು ಕುಮಾರ ಸ್ವಾಮಿಯವರಿಗೆ ಟಾಂಗ್ ನೀಡುವುದು ಕೂಡ ಯಡ್ಡಿಯ ಉದ್ದೇಶವಾಗಿತ್ತು. ಅಂತೂ-ಇಂತೂ ಸದಾನಂದ ಗೌಡರ ಪದಚ್ಯುತಿಯ ಸಂದರ್ಭವನ್ನು ಅತ್ಯಂತ ಜಾಣ್ಮೆಯಿಂದ ನಿಭಾಯಿಸಿದ ಅಶೋಕ್ ಉಪಮುಖ್ಯಮಂತ್ರಿ ಸ್ಥಾನವನ್ನು ತಮ್ಮದಾಗಿಸಿ ಕೊಂಡಿದ್ದಾರೆ.

ಒಕ್ಕಲಿಗರ ರಸ್ತೆ ತಡೆ ಮತ್ತು ಪ್ರತಿಭಟನೆಯ ಕಾವು ಏರಿದ್ದರಿಂದ ಇನ್ನೆರಡು ಒಕ್ಕಲಿಗ ಶಾಸಕರಿಗೂ ಲಾಭವಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಸಿ.ಟಿ. ರವಿ ಅಥವಾ ಜೀವರಾಜ್ ಇವರಿಬ್ಬರಲ್ಲಿ ಒಬ್ಬರಿಗೆ ಈ ಬಾರಿ ಮಂತ್ರಿಸ್ಥಾನ ಸಿಗುವುದು ಖಚಿತವಾಗಿತ್ತು, ಆದರೆ ಒಬ್ಬರನ್ನು ಮಾತ್ರ ಮಂತ್ರಿ ಮಾಡಿದರೆ ಎಲ್ಲಿ ಚಿಕ್ಕಮಗಳೂರಿನ ಒಕ್ಕಲಿಗರು ಬೀದಿಗಿಳಿಯುತ್ತಾರೋ ಎಂಬ ಭಯದಿಂದ ಪಕ್ಷದ ವರಿಷ್ಠರು ಇಬ್ಬರಿಗೂ ಮಂತ್ರಿ ಸ್ಥಾನ ನೀಡಿದ್ದಾರೆ. ಹೀಗೆ ಒಂದು ಮುಖ್ಯಮಂತ್ರಿ ಸ್ಥಾನದ ಬದಲಿಗೆ ಒಕ್ಕಲಿಗ ಜನಾಂಗಕ್ಕೆ ಒಂದು ಉಪ ಮುಖ್ಯಮಂತ್ರಿ ಸ್ಥಾನ ಮತ್ತು ಎರಡು ಮಂತ್ರಿ ಸ್ಥಾನಗಳು ಲಭಿಸಿದವು.

ಬಿಜೆಪಿಯಲ್ಲೀಗ ನಾಲ್ಕು ಬಣ

ಈ ಬಾರಿಯ ಸಂಪುಟ ಪುನರ್‌ರಚನೆಯನ್ನು ಸ್ಪಷ್ಟವಾಗಿ ಅವಲೋಕಿಸಿದರೆ ಈಗ ಬಿಜೆಪಿಯಲ್ಲಿ ನಾಲ್ಕು ಬಣಗಳಿ ರುವುದು ಸ್ಪಷ್ಟವಾಗುತ್ತದೆ. ಈ ಹಿಂದೆ ಆ ಪಕ್ಷದಲ್ಲಿ ಯಡಿಯೂರಪ್ಪ ಬಣ ಮತ್ತು ಅನಂತ್‌ಕುಮಾರ್ ಬಣ ಮಾತ್ರ ಇದ್ದವು. ಆದರೀಗ ಅವೆರಡಲ್ಲದೆ ಈಶ್ವರಪ್ಪ ಬಣ ಮತ್ತು ಸದಾನಂದ ಗೌಡ ಬಣ ಎಂಬ ಇನ್ನೆರಡು ಬಣಗಳು ಹುಟ್ಟಿಕೊಂಡಿವೆ. ತಮ್ಮದು ಶಿಸ್ತಿನ ಪಕ್ಷ ಎಂದು ಕರೆದುಕೊಳ್ಳುವ ಬಿಜೆಪಿಯಲ್ಲಿ ಈಗ ಜಾತಿ ಆಧಾರದಲ್ಲಿ



ಒಕ್ಕಲಿಗರ ಬಿಜೆಪಿ, ಬ್ರಾಹ್ಮಣರ ಬಿಜೆಪಿ, ಕುರುಬರ ಬಿಜೆ... ಮತ್ತು ಲಿಂಗಾಯತರ ಬಿಜೆಪಿ ಎಂಬ ನಾಲ್ಕು ಬಣಗ... ಇವೆ. ಯಾವ ಹಂತದಲ್ಲಿ ಈ ಬಣಗಳ ನಡುವೆ... ಭಿನ್ನಾಭಿಪ್ರಾಯ ಮತ್ತೊಮ್ಮೆ ಸ್ಫೋಟಗೊಳ್ಳುತ್ತದೆ ಎಂ... ಹೇಳಲು ಸಾಧ್ಯವಿಲ್ಲ.

ಅಧ್ಯಕ್ಷ ಸ್ಥಾನಕ್ಕೆ ಅನಂತ್?

ಈಗ ಸಂಪುಟ ಪುನರ್‌ರಚನೆಯ ಕಸರತ್ತು ಮುಗಿದಿ... ಉಳಿದಿರುವ ಇನ್ನೊಂದು ದೊಡ್ಡ ಸವಾಲೆಂದರೆ ರಾ... ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ವ್ಯಕ್ತಿಯನ್ನು ಆಯ್ಕೆ ಮಾಡುವುದ... ಈ ಸಮಸ್ಯೆಯನ್ನು ಬಿಜೆಪಿಯ ದೆಹಲಿ ವರಿಷ್ಠರು ಹೆ... ಪರಿಹರಿಸುತ್ತಾರೋ ಗೊತ್ತಿಲ್ಲ. ಈಶ್ವರಪ್ಪನವರು ತೆರ... ಮಾಡಿರುವ ಈ ಸ್ಥಾನಕ್ಕೆ ಮುಖ್ಯಮಂತ್ರಿ ಸ್ಥಾನವನ್ನು ತ... ಮಾಡಿದ ಸದಾನಂದ ಗೌಡರಿಗೇ ನೀಡಬೇಕು ಎಂ... ಒಕ್ಕಲಿಗ ಶಾಸಕರೆಲ್ಲ ಒಕ್ಕೊರಲಿನಿಂದ ಹೇಳುತ್ತಿದ್ದಾರೆ. ಆ... ಯಡಿಯೂರಪ್ಪ ಯಾವುದೇ ಕಾರಣಕ್ಕೂ ಸದಾನ... ಗೌಡರಿಗೆ ಆ ಸ್ಥಾನ ನೀಡಬಾರದು ಎಂದು ಈಗಾಗ... ಸ್ಪಷ್ಟಪಡಿಸಿದ್ದಾರೆ.

ಅಧ್ಯಕ್ಷ ಸ್ಥಾನವನ್ನು ತನಗೇ ನೀಡಬೇಕು ಎಂ... ಯಡಿಯೂರಪ್ಪ ಬಹಳ ದಿನಗಳಿಂದ ದೆಹಲಿ ಹೈಕಮಾಂಡ... ಒತ್ತಾಯಿಸುತ್ತಲೇ ಇದ್ದಾರೆ. ಆದರೆ ಅಧ್ಯಕ್ಷ ಸ್ಥಾನದ... ಕುಳಿತುಕೊಳ್ಳುವವರು ಕಳಂಕರಹಿತರಾಗಿರಬೇಕು ಎಂಬು... ದೆಹಲಿ ನಾಯಕರ ಅಭಿಪ್ರಾಯ. ಆದರ್ದ್ಥ ಅಧ್ಯಕ್ಷ ಸ್ಥಾನ... ಯಡಿಯೂರಪ್ಪನವರಿಗೆ ನೀಡಲು ದೆಹಲಿ ನಾಯಕರಿ... ಸುತಾರಾಂ ಇಷ್ಟವಿಲ್ಲ. ಇಂತಹ ಸಂದರ್ಭದಲ್ಲಿ ರಾ... ರಾಜಕೀಯಕ್ಕೆ ಮರಳುವ ಆಸೆಯನ್ನು ಹೊಂದಿರು... ಅನಂತ್‌ಕುಮಾರ್ ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಬರು... ಸಾಧ್ಯತೆ ಇದೆ.

ಸದಾನಂದ ಗೌಡರನ್ನು ವಿರೋಧಿಸುವ ಯಡಿಯೂರ... ನವರು ಖಂಡಿತವಾಗಿಯೂ ಅನಂತ್‌ಕುಮಾರ್ ಅವರ... ಇನ್ನೂ ಹೆಚ್ಚಾಗಿ ವಿರೋಧಿಸುತ್ತಾರೆ ಎಂಬುದರಲ್ಲಿ ಸಂಶಯ... ಇಲ್ಲ. ಹೀಗಾಗಿ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಅ... ಮಾಡುವ ಸಂದರ್ಭದಲ್ಲಿ ಮತ್ತೊಮ್ಮೆ ಬಿಜೆಪಿ... ಭಿನ್ನಾಭಿಪ್ರಾಯಗಳೆಲ್ಲ ಬೀದಿಗೆ ಬರುವ ಸಾಧ್ಯತೆಗಳಿವೆ...

ಸದಾ ಈಗ ಏಕಾಂಗಿಯಲ್ಲ

ಮೊನ್ನೆ ಮೊನ್ನೆತನಕ ಏಕಾಂಗಿಯಂತೆ ಕಾಣಿಸುತ್ತಿ... ಸದಾನಂದ ಗೌಡರ ಜೊತೆ ದಿಢೀರನೆ ಸುಮಾರು ... ಶಾಸಕರು ಕಾಣಿಸಿಕೊಂಡಿದ್ದು ಯಡಿಯೂರಪ್ಪನ ನಿದ್ದೆಯ... ಕೆಡಿಸಿದೆ. ಅಷ್ಟೇ ಯಾಕೆ? ಯಡಿಯೂರಪ್ಪನ ಜೊತೆಗ... ಅನೇಕ ಶಾಸಕರು ದಿನಬೆಳಗಾಗುವುದರೊಳಗೆ ಸದಾನ... ಗೌಡರ ಪರವಾಗಿ ಬಂಡೆಗಲ್ಲಿನಂತೆ ನಿಂತಿದ್ದು ಕೂ... ಅಚ್ಚರಿಯೇ ಸರಿ. ಈ ಎಲ್ಲಾ ಬೆಳವಣಿಗೆಗಳು ಆರೆಸ್ಸೆ... ನಾಯಕರ ಮತ್ತು ಅಡ್ವಾನಿಯವರ ಸೂಚನೆಯಂತೆ ನಡೆದ... ಎಂದು ಪಕ್ಷದ ವಲಯದಲ್ಲಿ ಎಲ್ಲರಿಗೂ ಗೊತ್ತಿರು... ವಿಷಯ. ಅಂದರೆ ಆರೆಸ್ಸೆಸ್ ತೆರೆಮರೆಯಲ್ಲಿ ಕೆಲಸ ಮಾಡು... ಯಡಿಯೂರಪ್ಪನ ರೆಕ್ಕೆಪುಕ್ಕಗಳನ್ನು ಕತ್ತರಿಸಲು ಸಜ್ಜಾಗುತ್ತಿ... ಹೀಗಾಗಿ ಮುಂದಿನ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡು... ಸಂದರ್ಭದಲ್ಲಿ ಖಂಡಿತವಾಗಿಯೂ ಮತ್ತೊಮ್ಮೆ ಬಿಜೆ... ಪಕ್ಷದಲ್ಲಿ ಭಿನ್ನಾಭಿಪ್ರಾಯಗಳು ಭುಗಿಲೇಳುವುದು ಖಂಡಿ...

ಶೆಟ್ಟರಿಗೆ ಬಿಸಿತುಪ್ಪ

ಎರಡು ಬಾರಿ ಕೈತಪ್ಪಿದ್ದ ಮುಖ್ಯಮಂತ್ರಿ ಹುದ್ದೆಯ... ಪಡೆಯುವಲ್ಲಿ ಶೆಟ್ಟರ್ ಯಶಸ್ವಿ ಆಗಿದ್ದಾರೆ. ಆದರೆ ಅ... ಮುಂದೆ ಯಡ್ಡಿ ಎಂಬ ಕಲ್ಲು, ಸದಾನಂದ ಗೌಡ ಎಂ... ಮುಳ್ಳು ಇರುವ ಹಾದಿಯೇ ಇದೆ. ಜೊತೆಗೆ ಅಕ್ಕಪಕ್ಕದ... ನಿರಾಶೆಗೊಂಡಿರುವ ಶಾಸಕರು, ಹತ್ತಾರು ಆಕಾಂಕ್ಷಿಗಳ... ಹೊಂದಿರುವ ಚೆಡ್ಡಿ ನಾಯಕರೂ ಇದ್ದಾರೆ. ಅಷ್ಟೇ ಅಲ್ಲ... ಶೆಟ್ಟರ್ ತಲೆ ಮೇಲೆ ಎಂದಿನಂತೆ ಆರೆಸ್ಸೆಸ್ ನಿಂತಿದೆ.

ಜನ ಬಿಜೆಪಿಯ ಆಟಾಟೋಪಗಳನ್ನು ಕಂಡು ಕ್ಯಾಕ... ಉಗಿಯುತ್ತಿದ್ದಾರೆ. ರಾಜ್ಯದಲ್ಲಿ ಸರ್ಕಾರ, ಆಡಳಿತ, ದಕ್ಷ... ಎಂಬುದೆಲ್ಲ ಎಂದೋ ಮಾಯವಾಗಿದೆ. ಚುನಾವಣೆ... ಹೆಚ್ಚೆಂದರೆ ಹತ್ತು ತಿಂಗಳುಗಳು ಮಾತ್ರ ಉಳಿದಿವೆ.

ಈ ಎಲ್ಲವುಗಳ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಹು... ಶೆಟ್ಟರ್ ಪಾಲಿಗೆ ಉಗಿಯಲೂ ಆಗದ, ನುಂಗಲೂ ಆಗ... ಬಿಸಿ ತುಪ್ಪವೇ ಸರಿ...

● ಸದಾಶಿವ ಶೆಣ...



ಜೈಲು ಸೇರಿದ ಸ್ವಯಂ ಕೃಷಿ ವೀರೇಂದ್ರ



ಹೈದರಾಬಾದ್‌ನಲ್ಲಿ ತಲೆಮರೆಸಿಕೊಂಡಿದ್ದ ಸ್ವಯಂಕೃಷಿ ಎಂಬ ಬ್ಲೇಡ್ ಕಂಪನಿಯ ಕಿಂಗ್‌ಪಿನ್ ವೀರೇಂದ್ರಬಾಬು ಮತ್ತು ಅಧ್ಯಕ್ಷ ಮುರಳಿಯನ್ನು ದೇವನಹಳ್ಳಿ ಪೊಲೀಸರು ಕೊನೆಗೂ ಬಂಧಿಸಿದ್ದಾರೆ. ಅದರ ಮರುದಿನವೇ ಡೈರೆಕ್ಟರ್‌ಗಳಾದ ಗೋವಿಂದರಾಜು, ವೆಂಕಟೇಶಬಾಬು, ಮಾರೇಗೌಡ ಮುಂತಾದವರನ್ನೂ ಬಂಧಿಸಿ ಪೊಲೀಸರು ಪೋಸು ಕೊಟ್ಟು ಫೋಟೋ ತೆಗೆಸಿಕೊಂಡಿದ್ದಾರೆ. ಆದರೆ ತಮ್ಮ ಸಮಸ್ಯೆ ಪರಿಹಾರವಾಗಿ ತಾವು ಕಟ್ಟಿದ ಹಣ ವಾಪಸ್ ಬರಬಹುದೆಂಬ ನಿರೀಕ್ಷೆಯಲ್ಲಿರುವ ಬಡಪಾಯಿಗಳಿಗೆ ಮಾತ್ರ ನ್ಯಾಯ ಸಿಗುವ ಯಾವ ಭರವಸೆಯೂ ಇಲ್ಲವಾಗಿರುವುದೇ ದೊಡ್ಡ ದುರಂತ!

ಇದು ಕೇವಲ ಸ್ವಯಂಕೃಷಿ ಎಂಬ ಕಂಪನಿಯ ಕತೆ ಮಾತ್ರವಲ್ಲ; ವಿನಿವಿಂಕ್, ಗುರುಟೀಕ್, ಆದಿತ್ಯ ಫೈನಾನ್ಸ್, ಮೊಜೀಲ್‌ನಂಥಾ ಹತ್ತಾರು ಬ್ಲೇಡ್ ಕಂಪನಿಗಳು ಬಡವರು ಜೀವಮಾನವಿಡೀ ಕೂಡಿಸಿಟ್ಟ ದುಡ್ಡನ್ನು ಲಪಟಾಯಿಸಿ ರಾತ್ರೋರಾತ್ರಿ ನಾಪತ್ತೆಯಾಗುತ್ತಿವೆ. ಆದರೆ ಸ್ವಯಂಕೃಷಿ ಎಂಬ ಖತರ್‌ನಾಕ್ ಕಂಪನಿಯ ಸ್ಟೈಲೇ ಬೇರೆ ಲೆವೆಲ್ಲಿನದು. ಅದರ ಕೆಲವು ಸ್ಯಾಂಪಲ್‌ಗಳು ಇಲ್ಲಿವೆ ನೋಡಿ.

ರಿಯಲ್ ಎಸ್ಟೇಟ್ ಕುಳಗಳು, ಭೂಗತ ಲೋಕದ ಮಾಫಿಯಾಗಳು ಸಿನಿಮಾ ತೆಗೆಯೋಕೆ ದುಡ್ಡು ಸುರಿಯೋದು ಕೇಳಿದ್ದೇವೆ. ಆದರೆ ಬೀದಿಯಲ್ಲಿ ಚಪ್ಪಲಿ ಹೊಲಿಯುವವರು, ಫುಟ್‌ಪಾತ್‌ನಲ್ಲಿ ಸೊಪ್ಪು ಮಾರುವವರು, ಮನೆಗೆಲಸ ಮಾಡುವವರು - ಇಂಥಾ ಬಡಪಾಯಿಗಳ ದುಡ್ಡಲ್ಲಿ ಸಿನಿಮಾ ತೆಗೀತಾರೆ ಅಂದರೆ ಏನಂತೀರಾ? ಇಂಥ ಬಡವರ ದುಡ್ಡಿನಿಂದಲೇ ವೀರೇಂದ್ರ ಬಾಬು ಎಂಬ ಐನಾತಿ ಆಸಾಮಿ 'ಸ್ವಯಂಕೃಷಿ' ಎಂಬ ಹೈಬಜೆಟ್ ಕಮರ್ಷಿಯಲ್ ಸಿನಿಮಾ ಮಾಡಿದ್ದಾನೆ. ಸಿನಿಮಾ ತೆಗೆಯುವುದರ ಬಗ್ಗೆ ಗಂಧಗಾಳಿ ಗೊತ್ತಿಲ್ಲದಿದ್ದರೂ ಅದನ್ನು ತಾನೇ ನಿರ್ದೇಶಿಸಿ ತಾನೇ ನಾಯಕ ನಟನಾಗಿದ್ದಾನೆ. ಈ ಸಿನಿಮಾಗೆಂದು ಆತ ಹಾಕಿದ್ದ ಬಡಪಾಯಿಗಳ ಬರೋಬ್ಬರಿ ಕೋಟಿ ರೂಪಾಯಿಗಳು. ಅದೆಲ್ಲ ಬಾಕ್ಸ್‌ಆಫೀಸ್‌ನಲ್ಲಿ ನಾಮಾವಶೇಷವಾಗಿ ಹೋಯ್ತು. ಈ ಬಗ್ಗೆ ಬಾಬು ಸ್ವಲ್ಪವೂ ತಲೆಕೆಡಿಸಿಕೊಳ್ಳಲಿಲ್ಲ; ಕಾರಣ ಹಾಕಿದ ದುಡ್ಡಿನಲ್ಲಿ ಒಂದು ಪೈಸೆಯೂ ಆತನ ಬೆವರಿನಿಂದ ಬಂದಿದ್ದಲ್ಲ.

ತಮಾಷೆಯೇನೆಂದರೆ ಇದೇ 'ಸ್ವಯಂಕೃಷಿ' ಚಿತ್ರದಲ್ಲಿ 'ಶ್ರೀಮನ್ನಾರಾಯಣ ಗೋವಿಂದಾ... ಗೋವಿಂದಾ' ಅಂತಾ ಒಂದು ಹಾಡಿನ ದೃಶ್ಯ ಬರುತ್ತದೆ. ಅದರಲ್ಲಿ ಸ್ವತಃ ಹೀರೋ ವೀರೇಂದ್ರಬಾಬು ಅರೆಬೆತ್ತಲೆಯಾಗಿರುವ ರಷ್ಯನ್ ಕ್ಯಾಬರೆ ನರ್ತಕಿಯರ ಹಿಂಡಿನಲ್ಲಿ ಹೆಂಡ ಕುಡಿದ ಕೋತಿಯಂತೆ ವಿಕಾರವಾಗಿ ಕುಣೀತಾ ಇದ್ದರೆ, ಹಿನ್ನೆಲೆಯಲ್ಲಿ ಬರುವ ಡ್ಯಾನ್ಸರ್‌ಗಳು ಹಣೆ ತುಂಬಾ ತಿರುಪತಿ ನಾಮ ಹಾಕಿಕೊಂಡಿರುತ್ತಾರೆ. ಈ ನಾಮದ ಜೊತೆ ವೀರೇಂದ್ರಬಾಬು ಗಿರುವ ಸೆಳೆತ ಎಂಥಾದ್ದಿರಬಹುದು ನೋಡಿ!

ಈ ವೀರೇಂದ್ರಬಾಬು ಮೂಲತಃ ದೊಡ್ಡಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದವನು. ಕೆಲವು ವರ್ಷಗಳತನಕ ಚಿತ್ರಾನ್ನಕ್ಕೂ ಕಾಸಿಲ್ಲದೆ ಅಬ್ಬೇಪಾರಿಯಾಗಿ ಅಂಡಲೆಯುತ್ತಿದ್ದವನು. ಆದರೆ ಬಹುಮುಖ ಪ್ರತಿಭಾವಂತ. ಗಾರ್ಮೆಂಟ್ ಫ್ಯಾಕ್ಟರಿಯಿಂದ ಹಿಡಿದು ಹೋಟೆಲ್‌ಗಳಲ್ಲಿ ತಟ್ಟೆ ಲೋಟ ತೊಳೆಯುವವರೆಗಿನ ಎಲ್ಲಾ ಅನುಭವವೂ ಈತನಿಗಿದೆಯಂತೆ. ನಂತರದಲ್ಲಿ ಈತ ಅಗ್ರಿಗೋಲ್ಡ್ ಎಂಬ ಮತ್ತೊಂದು ಇಂಥದೇ ಫೈನಾನ್ಸ್ ಕಂಪನಿಯಲ್ಲಿ ಸೇರಿಕೊಂಡ. ಅಲ್ಲಿ ಮುರಳಿ ಮುಂತಾದ ಹಲವು ಖತರ್‌ನಾಕ್ ಕಿಲಾಡಿಗಳು ಈತನಿಗೆ ಜೊತೆಯಾದರು. ಎಲ್ಲಾ ಸೇರಿ ದೊಡ್ಡ ಸ್ಕೆಚ್ ಹಾಕಿ ಸ್ವಯಂಕೃಷಿ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್ ಎಂಬ ಸಂಸ್ಥೆಯೊಂದನ್ನು ಶುರುಮಾಡಿಕೊಂಡರು.

ಇವರು ಟಾರ್ಗೆಟ್ ಮಾಡಿದ್ದೇ ಬಡ ಜನರನ್ನು. ಕೂಲಿನಾಲಿ ಮಾಡುವವರು, ಸಣ್ಣಪುಟ್ಟ ವ್ಯಾಪಾರ ಮಾಡುವವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆಂದೋ ಅಥವಾ ಮಕ್ಕಳ ಮದುವೆಗೆಂದೋ ತಮ್ಮ ಕೈಲಿರುವ ಪುಡಿಗಾಸು ಉಳಿಸುತ್ತಿರುತ್ತಾರಲ್ಲಾ ಆ ಹಣದ ಮೇಲೆಯೇ ಈ ಕಿಡಿಗೇಡಿಗಳ ಕಣ್ಣು ಬಿದ್ದಿದ್ದು. ಹೇಗೇಗೋ ಮಾಡಿ ಬಣ್ಣಬಣ್ಣದ ಕನಸುಗಳ ಮೋಡಿ ಮಾಡಿ ಸುಮಾರು ಒಂದೂವರೆ ಲಕ್ಷ ಜನಗಳಿಂದ ನೂರಾರು ಕೋಟಿಗಳಷ್ಟು ಹಣ ಲಪಟಾಯಿಸಿದರು. ಈ ಘನಕಾರ್ಯಕ್ಕೆ ಇವರು ಬಳಸಿಕೊಂಡಿದ್ದು ಲೋಕಲ್ ಏಜೆಂಟ್‌ಗಳನ್ನು. ಹೆಚ್ಚಿನ ಸಂಪರ್ಕ ಇರುವ, ಮರ್ಯಾದೆಯುತವಾಗಿ ಜೀವನ ನಡೆಸುತ್ತಿದ್ದ ಕೆಲ ಜನರನ್ನು ಗುರುತಿಸಿ ಅವರನ್ನು ಪುಸಲಾಯಿಸಿ, ಕಮಿಷನ್ ಆಸೆ ತೋರಿಸಿ ಏಜೆಂಟ್‌ಗಳನ್ನಾಗಿ ನೇಮಿಸಿಕೊಂಡರು. ನಂತರ ಆ ಲೋಕಲ್ ವ್ಯಕ್ತಿಗಳಿಗಿರುವ ವಿಶ್ವಾಸವನ್ನು ಉಪಯೋಗಿಸಿಕೊಂಡು ಡೆಪಾಸಿಟ್ ಕಲೆಕ್ಷನ್ ಶುರುಮಾಡಿಕೊಂಡರು. ಇದು ಸಾಮಾನ್ಯವಾಗಿ ಎಲ್ಲಾ ಬ್ಲೇಡ್ ಕಂಪನಿಗಳ ಕಾರ್ಯಶೈಲಿ.

ಕೆಲವು ಉದಾಹರಣೆಗಳನ್ನು ನೋಡಿ.

ಅಮೃತಹಳ್ಳಿಯಲ್ಲಿ ನಾಗರತ್ನಮ್ಮ ಎಂಬ ಟೈಲರಿಂಗ್ ಟೀಚರ್ ಇದ್ದಾರೆ. ಆಕೆಯ ಗಂಡ ತೀರಿಕೊಂಡು ಇಲ್ಲಿಗೆ ಹತ್ತು ವರ್ಷ ಆಯ್ತು, ಎರಡು ಹೆಣ್ಣು ಮಕ್ಕಳು. ಮಗನಿಗೆ ಆಕ್ಸಿಡೆಂಟ್ ಆಗಿ ಮೂಲೆಗೆ ಕೂತಿದ್ದಾನೆ. ಆದರೂ ಧೃತಿಗೆಡದೆ ಕಷ್ಟಪಟ್ಟು ದುಡಿದು ತನ್ನ ಮಕ್ಕಳನ್ನು ಪೋಷಿಸುತ್ತಿರುವ ನಾಗರತ್ನಮ್ಮನ ಬಗ್ಗೆ ಅಕ್ಕಪಕ್ಕದ ಜನರಿಗೆ ಬಹಳ ಅಭಿಮಾನ. ಇಂಥಾ ನಾಗರತ್ನಮ್ಮನ ಪಾಲಿಗೆ ಎಸ್‌ಕೆ ಕಂಪನಿಯವರು ವಕ್ಕರಿಸಿಬಿಟ್ಟರು. ಅವರ ಮಾತನ್ನು ನಂಬಿಕೊಂಡ ಈ ಟೈಲರಿಂಗ್ ಟೀಚರ್ 6 % ಕಮಿಷನ್ ಬರುತ್ತದೆ ಎಂಬ ಆಸೆಗೆ ಬಲಿಯಾಗಿ ತನ್ನ ಸುತ್ತಮುತ್ತ ನೂರಾರು ಜನರಿಂದ ಹಣ ಕಟ್ಟಿಸಿಬಿಟ್ಟರು. ಈಗ ಇವರೊಬ್ಬರ ಬ್ಯಾಲೆನ್ಸ್ ಮೊತ್ತವೇ ಸುಮಾರು 40 ಲಕ್ಷ ರೂಪಾಯಿಯಷ್ಟಾಗಿದೆ.

ನಿಗದಿತ ಅವಧಿ ಮುಗಿದಬಳಿಕ ಕಂಪನಿಯವರು ಹಣ ಪಾವತಿಸದೆ ನಾನಾ ಸಬೂಬು ಹೇಳಲು ಶುರು ಮಾಡಿದರು. ಇಂಟರ್‌ನೆಟ್ ಪ್ರಾಬ್ಲಮ್ ಅಂತಲೋ ಬಾಸ್ ಫಾರಿನ್‌ಗೆ ಹೋಗಿದ್ದಾರೆ ಅಂತಲೋ ಸಬೂಬು ಹೇಳಲು ಶುರು ಮಾಡಿದರು. ಹೀಗೆ ಸತಾಯಿಸುತ್ತಿದ್ದ ಕಂಪನಿಯ ನಡವಳಿಕೆ ಕಂಡು ಅನುಮಾನಗೊಂಡ ನಾಗರತ್ನಮ್ಮ ತನ್ನನ್ನು ಕಂಪನಿಗೆ ಪರಿಚಯಿಸಿದ್ದ ಉಮಾ ರಂಗಪ್ರಸಾದ್ ಎಂಬ ಡೈರೆಕ್ಟರ್ ಮನೆಗೆ ಹೋಗಿ ಕಳೆದ ಆಗಸ್ಟ್‌ನಲ್ಲೇ ಜೋರು ಗಲಾಟೆ ಮಾಡಿದಳು. ಹೀಗೆ ಜನರ ಒತ್ತಡ ಹೆಚ್ಚುತ್ತಿದ್ದಂತೆ ಇಂಥಾ ಬ್ಲೇಡ್ ದಂಧೆಯಲ್ಲಿ ಸಾಕಷ್ಟು ಪಳಗಿರುವ ಉಮಾ ಮತ್ತು ರಂಗಪ್ರಸಾದ್ ಕುಟುಂಬ ರಾತ್ರೋರಾತ್ರಿ ಮನೆ ಖಾಲಿ ಮಾಡಿಬಿಟ್ಟರು. ಅಂದಹಾಗೆ ಈ ಉಮಾದೇವಿ ಕೆಲ ವರ್ಷಗಳ ಹಿಂದೆ ತನ್ನ ಮನೆಯಲ್ಲಿ ಬಟ್ಟೆಹೊಲಿದು ಜೀವನ ಸಾಗಿಸುತ್ತಿದ್ದವಳು, ಈಕೆಯ ಗಂಡ ರಂಗಪ್ರಸಾದ್ ಆಟೋ ಓಡಿಸುತ್ತಿದ್ದ. ಈಗ ಈ ಖತರ್‌ನಾಕ್ ಜೋಡಿ ಕೋಟಿಗಳಿಗೆ ಬಾಳುವ ಕುಳಗಳು.



ಮತ್ತೊಂದು ಉದಾಹರಣೆ ನೋಡಿ.

ಚೆನ್ನಕೇಶವ ಎಂಬುವವರು ಎಲ್ ಅಂಡ್ ಟಿ ಕಂಪನಿಯಲ್ಲಿ ಕಾಂಟ್ರಾಕ್ಟ್ ಲೇಬರ್ ಆಗಿದ್ದಾರೆ. ಸಂಬಳ ಕಡಿಮೆ. ಆದರೆ ಜನಸಂಪರ್ಕವಿರುವ, ಸದಾ ಕ್ರಿಯಾಶೀಲವಾಗಿರುವ ವ್ಯಕ್ತಿ. ಯಾವತ್ತೂ ಇಂಥಾ ಬ್ಲೇಡ್ ಕಂಪನಿಗಳನ್ನು ನಂಬಿದವರಲ್ಲ, ಆದರೆ ಎಲ್ಲಿ ಎಡವಟ್ಟಾಯಿತೆಂದರೆ ಪರಿಚಯಸ್ಥರಾಗಿದ್ದ ಉಮಾ ಮತ್ತು ರಂಗಪ್ರಸಾದ್ ಎಂಬ ಖತರ್‌ನಾಕ್ ಜೋಡಿ ಸಭ್ಯಸ್ಥರಂತೆ ಕಾಣುತ್ತಿದ್ದರಿಂದ ಅವರನ್ನು ನಂಬಿಬಿಟ್ಟರು. ತಮ್ಮ ಬಂಧುಮಿತ್ರರಿಂದ ಡೈಲಿ ಪಿಗ್ಮಿ ಹಣ ಕಟ್ಟಿಸಲು ಶುರು ಮಾಡಿದರು. ಮೊದಲು ತಿಂಗಳಿಗೆ 3,000ದಿಂದ ಶುರುವಾಗಿ ಕೊನೆಕೊನೆಗೆ ತಿಂಗಳಿಗೆ 70,000 ರೂಪಾಯಿಗಳವರೆಗೂ ಕಟ್ಟಿಸಿದ್ದಾರೆ. ಇವರ ವ್ಯಾಪ್ತಿಯಲ್ಲಿ ಒಟ್ಟು ಸುಮಾರು 20 ಲಕ್ಷಕ್ಕೂ ಹೆಚ್ಚಿನ ಗಂಟು ವೀರೇಂದ್ರಬಾಬು ಅಂಡ್ ಗ್ಯಾಂಗ್ ಪಾಲಾಗಿದೆ. ಅದರಲ್ಲಿ ಕೂಲಿನಾಲಿ ಮಾಡೋರಿಂದ ಹಿಡಿದು ಬಸ್‌ಸ್ಟ್ಯಾಂಡ್‌ನಲ್ಲಿ ಬೂಟ್ ಪಾಲಿಶ್ ಮಾಡೋರವರೆಗೆ ಎಲ್ಲರೂ ಹಣ ಕಟ್ಟಿದ್ದಾರೆ.

ಹೀಗೆ ಇಡೀ ರಾಜ್ಯಾದ್ಯಂತ ಸುಮಾರು 7,000 ಏಜೆಂಟ್‌ಗಳು ಈ ವಂಚಕರ ಬಾಯಿಗೆ ಪ್ರತಿನಿತ್ಯ ಕೋಟ್ಯಂತರ ಹಣ ಸುರಿಯುತ್ತಿದ್ದರು. ಇದಕ್ಕೆ ಪ್ರತಿಯಾಗಿ ಕಂಪನಿ ಕೊಟ್ಟದ್ದೇನು ಗೊತ್ತೆ? ಒಂದು ಒಳ್ಳೇ ಪೇಪರ್‌ನಲ್ಲಿ ಬಾಂಡ್ ಪ್ರಿಂಟ್ ಮಾಡಿಸಿಕೊಟ್ಟಿದ್ದು ಮಾತ್ರ. ಆದರೆ ಈ ಕಳ್ಳರ ಕೂಟ ಬಂದ ಹಣದಲ್ಲಿ ಯಾರದ್ದೋ ದುಡ್ಡು ಎಲ್ಲಮ್ಮನ ಜಾತ್ರೆ ನಡೆಸಿಬಿಟ್ಟರು. ಸಿನಿಮಾ ತೆಗೆದು ತೋಪೆಬ್ಬಿಸಿದರು. ತಮ್ಮ ನಿವಾಸಗಳನ್ನು ಬೆಂಗಳೂರಿನ ನಂ.1 ಪ್ರತಿಷ್ಠಿತ ಬಡಾವಣೆ ಡಾಲರ್ಸ್ ಕಾಲನಿಗೆ ಶಿಫ್ಟ್ ಮಾಡಿದರು. ಐಷಾರಾಮಿ ಜೀವನ ನಡೆಸಿ ಮಜಾ ಉಡಾಯಿಸಿದರು. ಸ್ವಯಂಕೃಷಿ ಹೆಸರಿನಲ್ಲಿ ಒಂದು ಟಿವಿ ಚಾನೆಲ್‌ಅನ್ನು, ಒಂದು ಸಂಜೆ ಪತ್ರಿಕೆಯನ್ನು ಹಾಗೂ ಶುಭೋದಯ ಎಂಬ ದಿನಪತ್ರಿಕೆಯನ್ನೂ ಪ್ರಾರಂಭಿಸಿ, ತಮ್ಮ ಕಂಪನಿ ರಿಲಯನ್ಸ್ ಕಂಪನಿಯ ರೀತಿಯಲ್ಲಿ ಬಹಳ ವೇಗವಾಗಿ ಬೆಳೆಯುತ್ತಿದೆ ಎಂಬ ಭ್ರಮೆ ಬಿತ್ತಿದರು. ರಿಯಲ್ ಎಸ್ಟೇಟ್ ಅಂತಾ ಹೇಳಿ ತಮ್ಮ ಸ್ವಂತ ಹೆಸರುಗಳಲ್ಲಿ ಜಮೀನು, ಸೈಟುಗಳನ್ನು ಖರೀದಿಸಿಕೊಂಡರು. ಇಷ್ಟೆಲ್ಲಾ ಆದ ಮೇಲೆ ಮೆಚೂರಿಟಿಯಾದ ಬಾಂಡ್‌ಗಳಿಗೆ ಹಣ ಕೊಡುವವರು ಯಾರು? ಹೀಗಾಗಿ ಕಂಪನಿಯ ಡೈರೆಕ್ಟರ್‌ಗಳಲ್ಲೇ ಕಚ್ಚಾಟ ಶುರುವಾಯ್ತು.

ಇದೆಲ್ಲದರ ನಡುವೆ ವೀರೇಂದ್ರಬಾಬುವಿನ ಮತ್ತೊಂದು ರಂಗೀಲಾ ಅವತಾರ ಬೆಳಕಿಗೆ ಬಂತು. ಈ ರಂಗೀಲಾ ಬಾಬು ಜೊತೆ ಚಕ್ಕಂದಕ್ಕಿಳಿದಿದ್ದ ಎಸ್‌ಕೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಪಾರ್ವತಿ ಎಂಬ ಮಂಗಳೂರು ಮೂಲದ ಹುಡುಗಿ ಒಂದು ದಿನ ಇದ್ದಕ್ಕಿದ್ದಂತೆ ನಾಪತ್ತೆಯಾಗಿಬಿಟ್ಟಳು. ಪಾರ್ವತಿಯ ತಂದೆತಾಯಿಗಳು ವೀರೇಂದ್ರಬಾಬು ನಮ್ಮ ಮಗಳನ್ನು ಕಿಡ್ನಾಪ್ ಮಾಡಿದ್ದಾನೆ ಎಂದು ದೇವನಹಳ್ಳಿ ಸ್ಟೇಷನ್‌ನಲ್ಲಿ ಕಂಪ್ಲೈಂಟ್ ಕೊಟ್ಟರು.

ಅದೇ ಸಂದರ್ಭದಲ್ಲಿ ಈತ ಲವ್ ಮಾಡಿ ಮದುವೆ ಮಾಡಿಕೊಂಡಿದ್ದ ಮೊದಲ ಹೆಂಡತಿ ಚಂದ್ರಿಕಾ ಗಂಡ ವೀರೇಂದ್ರಬಾಬು ವರದಕ್ಷಿಣೆ ಕಿರುಕುಳ ಕೊಡುತ್ತಿದ್ದಾನೆಂದು ಯಲಹಂಕ ಪೊಲೀಸರಿಗೆ ದೂರು ಕೊಟ್ಟಳು. ಹೀಗೇ ಡಬಲ್ ಕ್ರಿಮಿನಲ್ ಕೇಸಿನಲ್ಲಿ ಫಿಟ್ ಆದ ಬಾಬು ಪಾರ್ವತಿಯೊಂದಿಗೆ ಹೈದರಾಬಾದ್‌ಗೆ ಹಾರಿಹೋಗಿ ಶೃಂಗಾರಕಾವ್ಯ ಶುರು ಮಾಡಿಕೊಂಡ. ಆವತ್ತಿನ ದಿನವೇ ಸ್ವಯಂಕೃಷಿಯ ಎಲ್ಲಾ ಏಜೆಂಟರೂ ವೀರೇಂದ್ರ ಬಾಬು ಹೈದರಾಬಾದ್‌ನಲ್ಲೇ ಇದ್ದಾನೆ ಎಂದು ಮಾಧ್ಯಮಗಳ ಎದುರು ಘಂಟಾಘೋಷವಾಗಿ ಘೋಷಿಸಿದ್ದರು. ಇದೆಲ್ಲಾ ನಡೆದದ್ದು ಏಪ್ರಿಲ್ ಮೊದಲ ವಾರದಲ್ಲಿ.

ಕಟ್ಟಿದ ಹಣ ವಾಪಸ್ ಕೊಡುತ್ತಿಲ್ಲವೆಂಬ ಸುದ್ದಿ ತಿಳಿಯುತ್ತಿದ್ದಂತೆ ಹಣ ಡಿಪಾಸಿಟ್ ಮಾಡಿದವರು ದುಡ್ಡು ಕಟ್ಟಿಸಿದ ಏಜೆಂಟರ ಬೆನ್ನು ಹತ್ತಿದರು. ನಮಗೆ ಯಾವ ಕಂಪನಿಯೂ ಗೊತ್ತಿಲ್ಲ, ನೀವೇ ನಮ್ಮ ಹಣ ವಾಪಸ್ ಕೊಡಬೇಕು ಅಂತಾ ಕೊರಳಪಟ್ಟಿ ಹಿಡಿದರು. ಕಮಿಷನ್ ಆಸೆಗೆ ಹೋಗಿ ಸಿಕ್ಕಿಹಾಕಿಕೊಂಡಿರುವ ಏಜೆಂಟ್‌ಗಳ ಗೋಳನ್ನು ಕೇಳಿಸಿಕೊಳ್ಳುವವರೇ ಗತಿಯಿಲ್ಲವಾಯಿತು. ಹೀಗೆ ನೂರಾರು ಏಜೆಂಟರು ಒಟ್ಟಾಗಿ ಸೇರಿ ಕಚೇರಿಗಳಿಗೆ ನುಗ್ಗಿದರು. ಉದ್ಧಟತನ ತೋರಿದ ಸಿಬ್ಬಂದಿಗಳಿಗೆ ತದುಕಿದರು. ಹೀಗೆ ಪ್ರತಿನಿತ್ಯ ರಾದ್ಧಾಂತ ಶುರುವಾಗಿ ಹೋಯ್ತು. ಮತ್ತೊಂದು ಕಡೆ ಕಚ್ಚಾಟದಲ್ಲಿ ತೊಡಗಿದ್ದ ಡೈರೆಕ್ಟರ್‌ಗಳು ಸಿಬ್ಬಂದಿಯ ಸಂಬಳವನ್ನು ಕೊಡಲಿಲ್ಲ, ಹೀಗೆ ಒಂದೊಂದೇ ಕಂಪನಿಗಳಿಗೆ ಬೀಗ ಬಿದ್ದು ಒಂದೇ ವಾರದಲ್ಲಿ ಎಲ್ಲಾ ಆಫೀಸ್‌ಗಳು ಮುಚ್ಚಿಕೊಂಡವು.

ಬೇರೆ ದಾರಿ ಕಾಣದೆ ಏಜೆಂಟುಗಳು ಕಳೆದ ಏಪ್ರಿಲ್ ಮೊದಲ ವಾರದ ಒಂದುದಿನ ಕೆಲವು ಟಿವಿ ಚಾನೆಲ್‌ನವರನ್ನು, ಪತ್ರಿಕೆಯವರನ್ನು ಜೊತೆಗೆ ಕರೆದುಕೊಂಡು ಡಾಲರ್ಸ್ ಕಾಲನಿಯಲ್ಲಿದ್ದ ಅಧ್ಯಕ್ಷ ಮುರಳಿ ಮನೆಗೆ ಬೆಳ್ಳಂಬೆಳಗ್ಗೆ ಆಟಕಾಯಿಸಿಕೊಂಡರು. ನಡುಗುತ್ತಲೇ ಸಮಜಾಯಿಷಿ ನೀಡಿದ ಮುರಳಿ ಹೇಳಿದ್ದೇನೆಂದರೆ, ವೀರೇಂದ್ರಬಾಬು ತಾನೇ ಎಲ್ಲಾ ವ್ಯವಹಾರಾನೂ ಕೈಗೆ ತೊಗೊಂಡು ಕಂಪನಿಯಲ್ಲಿ ನಾನಾ ಸಮಸ್ಯೆ ಮಾಡಿದ್ದಾನೆ. ಕಂಪನಿಯಲ್ಲಿ ಏನಾಗ್ತಾ ಇದೆ, ಎಷ್ಟು ಕಲೆಕ್ಷನ್ ಬಂದಿದೆ, ಯಾವ ದುಡ್ಡು ಎಲ್ಲಿಗೆ ಹೋಗ್ತಾ ಇದೆ ಅಂತಾ ಯಾವ ಲೆಕ್ಕಾನೂ ನಮಗೆ ಗೊತ್ತಾಗದ ಹಾಗೆ ಮಾಡಿಬಿಟ್ಟ. ಹಾಗಾಗಿ ಈ ಸಮಸ್ಯೆ ಬಂದಿದೆ. ಕಂಪನಿಯ ಕೆಲವು ಪ್ರಾಪರ್ಟಿಗಳನ್ನು ಮಾರಿ ಒಂದೇ ವಾರದಲ್ಲಿ ಬಾಕಿ ಇರೋ ಪೇಮೆಂಟ್ ಮಾಡ್ತೀವಿ ಅಂತಾ ರೀಲು ಬಿಟ್ಟಿದ್ದ. ನಂತರ ಕೆಲವು ಟಿವಿ ಚಾನೆಲ್‌ಗಳಲ್ಲಿ ಹಣ ಕೊಡುವ ಆಶ್ವಾಸನೆ ನೀಡಿ ಫ್ಲಾಶ್ ನ್ಯೂಸ್ ಹಾಕಿಸಿದ್ದ. ಅದನ್ನೇ ತೋರಿಸಿ, ಟಿವಿನಲ್ಲೇ ಬಂದುಬಿಟ್ಟಿದೆ ನಿಮ್ಮ ದುಡ್ಡು ವಾಪಸ್ ಬರುತ್ತೆ ಅಂತಾ ಪುಂಗಿ ಊದುತ್ತಾ ಏಜೆಂಟ್‌ಗಳು ಮತ್ತಷ್ಟು ದಿನ ದೂಡಿದರು. ಆದರೆ ಒಂದೇ ವಾರದಲ್ಲಿ ಹಣ ವಾಪಸ್ ಕೊಡಿಸುತ್ತೇನೆ ಎಂದ ಅಧ್ಯಕ್ಷ ಮುರಳಿ ಮಾಡಿದ ಘನಕಾರ್ಯ ಏನು ಗೊತ್ತೆ? ಎಲ್ಲರಿಗೂ ಚಳ್ಳೆಹಣ್ಣು ತಿನ್ನಿಸಿ ರಾತ್ರೋರಾತ್ರಿ ಮನೆ ಖಾಲಿ ಮಾಡಿಕೊಂಡು ತಾನೂ ಪರಾರಿಯಾಗಿಬಿಟ್ಟ.

ಅದುವರೆಗೆ ಇವರ ಒತ್ತಡಗಳಿಗೆ ಮಣಿದು ಪೊಲೀಸ್ ಕಂಪ್ಲೈಂಟ್ ಕೊಡದೇ ಬಕ್ರಾಗಳಾಗಿದ್ದ ಜನರಿಗೆ ಈಗ ಉಳಿದಿದ್ದು ಒಂದೇ ದಾರಿ. ಹಾಗಾಗಿ ಪೊಲೀಸ್ ಸ್ಟೇಷನ್‌ಗೆ ಹೋದರು. ಆದರೆ ಪೊಲೀಸರ ವರ್ತನೆ ಮಾತ್ರ ಗಾಯದ ಮೇಲೆ ಬರೆ ಎಳೆಯುವಂತಿತ್ತು. ಯಲಹಂಕ ಪೊಲೀಸರು ಹೆಡ್ ಆಫೀಸ್ ದೇವನಹಳ್ಳಿಯಲ್ಲಿದೆ, ನಾವು ಕೇಸು ತೆಗೆದುಕೊಳ್ಳುವುದಿಲ್ಲ ಎಂದುಬಿಟ್ಟರು. ದೇವನಹಳ್ಳಿಗೆ ಹೋದರೆ ಅಲ್ಲಿನ ಪೊಲೀಸರ ವರಸೆಯೇ ಬೇರೆ ಇತ್ತು. ಕಂಪ್ಲೈಂಟ್ ಕೊಡಲು ನಿಮ್ಮ ಬಳಿ ಯಾವ ಆಧಾರಗಳಿವೆ? ಏನೇನು ಡಾಕ್ಯುಮೆಂಟಿದೆ ಎಂದು ನೊಂದವರನ್ನೇ ವಿಚಾರಣೆಗೆ ಗುರಿ ಮಾಡಿದರು. ನಂತರ ಡಾಕ್ಯುಮೆಂಟುಗಳೇ ಸರಿಯಿಲ್ಲ, ನೀವು ರಿಸರ್ವ್‌ಬ್ಯಾಂಕ್ ಪರ್ಮಿಷನ್ ತೆಗೆದುಕೊಂಡಿಲ್ಲ ಎಂದು ಏನೇನೋ ಕುಂಟುನೆಪ ಹೇಳಿ ಸಾಗ ಹಾಕಿದರು. ಆದರೆ ಠಾಣೆಯ ಮುಂದೆ ಜನರು ಪಟ್ಟು ಬಿಡದೆ ಹೆಚ್ಚು ಹೆಚ್ಚು ಜಮಾಯಿಸಿ ಪ್ರತಿಭಟನೆಯ ರೂಪ ಪಡೆದುಕೊಂಡ ನಂತರವೇ ದೇವನಹಳ್ಳಿ ಪೊಲೀಸರು ಕೇಸು ದಾಖಲಿಸಿದ್ದು.

ಇದರ ಜೊತೆಗೆ ಇಲ್ಲಿ ಒಂದು ಅಂಶವನ್ನು ಗಮನಿಸಲೇಬೇಕು. ಈ 420 ಗಳು ಹೈದರಾಬಾದ್‌ನಲ್ಲೇ ಇದ್ದಾರೆಂದು ಎಲ್ಲಾ ಏಜಂಟ್‌ಗಳು ಸಾರಿಸಾರಿ ಹೇಳುತ್ತಿದ್ದರೂ ಪೊಲೀಸರಿಗೆ ಅವರನ್ನು ಪತ್ತೆ ಮಾಡಲು ಬರೋಬ್ಬರಿ ನಾಲ್ಕು ತಿಂಗಳು ಸಾಧ್ಯವಾಗಲೇ ಇಲ್ಲ! ಅದು ಹಾಗಿರಲಿ. ಹಲವು ಅನುಮಾನಗಳಿಗೆ ಆಸ್ಪದ ನೀಡುವ ಮತ್ತೊಂದು ಸ್ವಾರಸ್ಯಕರ ಅಂಶವೂ ಇದೆ.

ಅದೇನೆಂದರೆ ಈ ಕಳ್ಳರು ಅರೆಸ್ಟಾಗುವ ಕೆಲವೇ ದಿನಗಳಿಗೆ ಮೊದಲು ಈ ವೀರೇಂದ್ರಬಾಬು ಟಿವಿ9 ಗೆ ದೂರವಾಣಿ ಸಂದರ್ಶನ ಕೊಟ್ಟಿದ್ದ. ಆತ ಎಷ್ಟು ಧೈರ್ಯವಾಗಿ ವಾದ ಮಾಡುತ್ತಿದ್ದನೆಂದರೆ ಅದನ್ನು ಕೇಳಿದವರಿಗೆ ಕಂಪ್ಲೈಂಟ್ ಕೊಟ್ಟವರದೇ ತಪ್ಪಿರಬೇಕು ಅನಿಸುವಂತಿತ್ತು. ಆತ ಪದೇಪದೇ ಹೇಳಿದ ಮತ್ತೊಂದು ವಿಚಾರವೇನೆಂದರೆ ಜುಲೈ 15ರ ವೇಳೆಗೆ ಎಲ್ಲರ ಸಮಸ್ಯೆ ಸಾಲ್ವ್ ಮಾಡುತ್ತೇನೆ, ನಾನೇ ನಿಮ್ಮ ಎದುರಿಗೆ ಬಂದು ಟಿವಿ ಸಂದರ್ಶನ ಕೊಡುತ್ತೇನೆ, ತಲೆ ಮರೆಸಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂಬುದು. ಇದಾದನಂತರ ಈ ಕಳ್ಳರ ಕೂಟದ ಬಂಧನ ಹೈದರಾಬಾದ್‌ನಲ್ಲೇ ನಡೆದಿದೆ. ಕೆಲವು ದಿನಗಳಲ್ಲಿ ಅವರು ಜಾಮೀನಿನ ಮೇಲೆ ಹೊರಗಡೆ ಬರಲಿದ್ದಾರೆ. ತಾವು ಲಪಟಾಯಿಸಿರುವ ಕಳ್ಳಗಂಟಿನೊಂದಿಗೆ ಮತ್ತೆಲ್ಲೋ ಸೆಟ್ಲ್ ಆಗಿಬಿಡುತ್ತಾರೆ. ಆದರೆ ಹಣ ಕಳೆದುಕೊಂಡ ಅಮಾಯಕರಿಗೆ ನ್ಯಾಯ ಸಿಗುತ್ತದೆಯೆ? ಇಂಥಾ ಪಾಕಂಡಿಗಳಿಗೆ ಸೂಕ್ತ ಶಿಕ್ಷೆಯಾಗುತ್ತದೆಯೆ?

ನಾವು ಹೀಗೆ ಅನುಮಾನಪಡಲು ಸ್ಪಷ್ಟ ಕಾರಣವಿದೆ. ಎರಡೇ ತಿಂಗಳ ಹಿಂದೆ ಇಂಥದೇ ಮೊಜೀಲ್ ಎಂಬ ಬ್ಲೇಡ್ ಕಂಪನಿಯ ಶ್ರವಣ್ ಶರ್ಮಾ ಎಂಬ ನಯವಂಚಕ ಹೀಗೇ ಅರೆಸ್ಟಾಗಿ, ಒಂದೇ ವಾರದಲ್ಲಿ ಜಾಮೀನಿನ ಮೇಲೆ ಹೊರಬಂದು ಕಳ್ಳಗಂಟಿನೊಂದಿಗೆ ಆರಾಮಾಗಿದ್ದಾನೆ. ಹಣ ಕಳೆದುಕೊಂಡವರ ಬಾಯಿಗೆ ಮಣ್ಣುಬಿದ್ದಿದೆ. ಮಾಮೂಲಿಯಂತೆ ತನಿಖೆ ಪ್ರಗತಿಯಲ್ಲಿದೆ. ಸ್ವಯಂಕೃಷಿ ಕೇಸಿನಲ್ಲೂ ಅದೇ ನ್ಯಾಯ ಮರುಕಳಿಸಲಿದೆಯೆ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಟೆರರಿಸ್ಟ್ ನಟಿಗೂ ಜಗ್ಗೇಶ್‌ಗೂ ಎಲ್ಲಿಯ ನಂಟು ?



ಆ ಫಾರ್ಮ್‌ಹೌಸಿನ ಹೊರವಲಯದಲ್ಲಿ ಹೂತು ಹಾಕಿದ್ದ ಹೆಣಗಳ ಅವಶೇಷಗಳ ನಡುವೆ ಯಾವ ತಲೆಬುರುಡೆ ಅಥವಾ ಮೂಳೆ ಅವಳದ್ದಾಗಿರಬಹುದು?

ಉತ್ತರ ಮಹಾರಾಷ್ಟ್ರದ ನಾಸಿಕ್‌ನ ಇಗತ್‌ಪುರಿ ಫಾರ್ಮ್‌ಹೌಸಿನ ಹೊರಭಾಗದ ನಿರ್ಜನ ಪೊದೆಗಳ ಮಧ್ಯೆ ಹೂತುಹಾಕಲಾಗಿದ್ದ ಹೆಣಗಳನ್ನು ಅಗೆದು ತೆಗೆದ ಮುಂಬಯಿಯ ಕ್ರೈಮ್ ಬ್ರಾಂಚ್ ಮತ್ತು ಆ್ಯಂಟಿ ಟೆರರಿಸಮ್ ಸ್ಕ್ವಾಡ್(ಎಟಿಎಸ್)ನ ಏಳು ಮಂದಿ ಪೊಲೀಸ್ ಅಧಿಕಾರಿಗಳ ತಂಡಕ್ಕೆ ಕ್ಲಿಷ್ಟವಾಗಿ ಕಾಡಿದ ಪ್ರಶ್ನೆಯಿದು.

ಬಾಲಿವುಡ್ ಬೆಡಗಿ ಲೈಲಾಖಾನ್ ಕೊಲೆಯಾಗಿದ್ದಾಳೆ!

ಅವಳೊಬ್ಬಳೇ ಅಲ್ಲ, ಆಕೆಯ ತಾಯಿ ಸಲೀನಾ ಬೇಗಮ್, ಹಿರಿಯಕ್ಕ ಅಜ್ಮೇನಾ, ತಂಗಿ ಝುರಾ, ತಮ್ಮ ಇಮ್ರಾನ್ ಮತ್ತು ಇನ್ನೊಬ್ಬಳು ಸೋದರ ಸಂಬಂಧಿಯ ಸಮೇತ ಒಟ್ಟು ಆರು ಮಂದಿಯ ಇಡೀ ಕುಟುಂಬವನ್ನೇ ಬರ್ಬರವಾಗಿ ಟೆರರಿಸ್ಟರು ಮುಗಿಸಿದ್ದಾರೆ!

ಈ ರೀತಿ ನಟಿ ಲೈಲಾಖಾನ್‌ಳನ್ನು ಆಕೆಯ ಇಡೀ ಕುಟುಂಬದ ಸಮೇತ ಗುಂಡಿನ ಮಳೆಗರೆದು ಕೊಂದದ್ದು ಆಕೆಯ ಮಲತಂದೆ ಪರ್ವೀಜ್ ಠಕ್ ಎಂಬ ಕಾಶ್ಮೀರಿ ಭಯೋತ್ಪಾದಕ!

ವಿಕಟವೆಂದರೆ ಲೈಲಾಳ ತಾಯಿ ಸಲೀನಾ ಬೇಗಮ್‌ಗೆ ಠಕ್ ಮೂರನೇ ಗಂಡ ಮತ್ತು ಇಂಥದೊಂದು ಹತ್ಯಾಕಾಂಡಕ್ಕೆ ಕೈಜೋಡಿಸಿದ್ದು ಲೈಲಾಳ ಪ್ರಿಯಕರ ಅಫ್ಸನ್ ಖಾನ್ ಎಂಬ ಮುಂಬಯಿ ಬಿಲ್ಡರ್ ಮತ್ತು ತಾಯಿ ಸಲೀನಾಳ ಎರಡನೇ ಗಂಡ ಆಸಿಫ್ ಶೇಕ್!

ನಟಿ ಲೈಲಾಖಾನ್ ಹತ್ಯೆಯ ಹಿಂದೆ

ಮಗಳ ಪ್ರಿಯಕರನ ಜೊತೆ ಮಲ ತಂದೆಯರಿಬ್ಬರೂ ಸೇರಿಕೊಂಡು ತಾಯಿಯೊಂದಿಗೆ ಆಕೆಯ ಅಷ್ಟು ಮಕ್ಕಳನ್ನು ಕೊಂದಿದ್ದರ ಹಿಂದಿದ್ದದ್ದು ಮಾತ್ರ ಇಸ್ಲಾಮಿಕ್ ಭಯೋತ್ಪಾದಕ ಲಿಂಕು.

ಲೈಲಾಖಾನ್ ದಾವೂದ್ ಇಬ್ರಾಹಿಂನ ಡಿ ಕಂಪೆನಿಯ ಸಕ್ರಿಯ ಪಾಲುದಾರಳಷ್ಟೇ ಅಲ್ಲ ಲಷ್ಕರ್ ಎ ತೋಯ್ಬಾ (ಎಲ್‌ಇಟಿ)ಎಂಬ ಕಾಶ್ಮೀರಿ ಮತ್ತು ಹುಜಿ ಎಂಬ ಬಾಂಗ್ಲಾದೇಶಿ ಉಗ್ರ ಸಂಘಟನೆಗಳ ಜಾಲದೊಳಗೆ ಸಿಲುಕಿ ಬಿಟ್ಟಿದ್ದಳು ಮತ್ತು ಅದೇ ಆಕೆಯ ಅವಸಾನದ ಮೂಲವಾಯಿತು!

ಇಷ್ಟೆಲ್ಲವನ್ನೂ ಲೈಲಾಖಾನ್ ಅಲಿಯಾಸ್ ಲೈಲಾ ಪಟೇಲ್ ಉರ್ಫ್ ರೇಷ್ಮಾ ಪಟೇಲ್ ಎಂಬ ಬಾಲಿವುಡ್ ಬೆಡಗಿಯ ದಾರುಣ ಹತ್ಯೆಯ ಕುರಿತಂತೆ ಇಲ್ಲಿ ಪ್ರಸ್ತಾಪಿಸುವುದಕ್ಕೂ ಕಾರಣವಿದೆ. ಅದು ಕನ್ನಡ ಚಿತ್ರರಂಗ ಮತ್ತು ಗಾಂಧಿ ನಗರಕ್ಕೂ ಆಕೆಗೂ ಇದ್ದ ನಂಟು. ಎಲ್ಲಿಯ ಪಾಕಿಸ್ತಾನ, ಯಾವ ಲೈಲಾ, ಯಾವ ಭಯೋತ್ಪಾದಕ ಗುಂಪುಗಳು, ಎಲ್ಲಿಯ ಕನ್ನಡ ನಟ ಜಗ್ಗೇಶ್ ಮತ್ತು ಎಲ್ಲಿಯ ಮುಂಬಯಿ ಅಂಡರ್‌ವರ್ಲ್ಡ್?

ಈ ಎಲ್ಲಾ ರಂಗಗಳನ್ನು ಬೆಸೆದ ವಿಲಕ್ಷಣ ಕೊಂಡಿಯಂತಿದ್ದವಳು ಲೈಲಾಖಾನ್. 2011ರ ಫೆಬ್ರುವರಿ 7 ರಿಂದ ಅಂದರೆ ಇಲ್ಲಿಗೆ ಸರಿಸುಮಾರು ಒಂದೂವರೆ ವರ್ಷದಿಂದ ಏಕಾಏಕಿ ನಾಪತ್ತೆಯಾದ ಬಾಲಿವುಡ್ ನಟಿ ಲೈಲಾಖಾನ್ ಏನಾದಳು, ಎಲ್ಲಿಗೆ ಹೋದಳು ಎಂಬ ಬಗ್ಗೆ ಮುಂಬಯಿಯ ಟಿವಿ ಪತ್ರಿಕೆಗಳಷ್ಟೇ ಅಲ್ಲ, ಮುಂಬಯಿಯ ಆ್ಯಂಟಿ ಟೆರರಿಸಮ್ ಸ್ಕ್ವಾಡು, ಕ್ರೈಮ್ ಬ್ರಾಂಚು, ದೆಹಲಿಯ ಇಂಟಲಿಜೆನ್ಸ್ ಬ್ಯೂರೋ ಇತ್ಯಾದಿಯಾಗಿ ತಲೆಕೆಡಿಸಿಕೊಂಡಿದ್ದು ಅಷ್ಟಿಷ್ಟಲ್ಲ.

ಇಂಥವಳನ್ನು ಗಾಂಧಿನಗರಕ್ಕೆ ಕರೆತಂದದ್ದು ಜಗ್ಗೇಶ್.

ತಾವೇ ಕೋಟಿಗಟ್ಟಲೇ ಸುರಿದು ನಿರ್ಮಿಸಿ, ನಿರ್ದೇಶಿಸಿದ್ದ 'ಮೇಕಪ್' ಇನ್ನಿಲ್ಲದಂತೆ ನೆಲ ಕಚ್ಚಿದ್ದಾದರೂ ಅದು ಜಗ್ಗೇಶ್‌ರ ಮಹತ್ವಾಕಾಂಕ್ಷೆಯ ಚಿತ್ರವಾಗಿತ್ತು, ಜಗ್ಗೇಶ್ ಹೀರೋ ಪಾತ್ರದ ಜೊತೆಗೇ ಘಟವಾಣಿ ಹೆಂಗಸೊಬ್ಬಳ ಪಾತ್ರವನ್ನೂ ನಿರ್ವಹಿಸಿ ಅದಕ್ಕೆ ಹೀರೋಯಿನ್ ಆಗಿಸಿದ್ದು ಇದೇ ಲೈಲಾಳನ್ನು. ಜಗ್ಗೇಶ್ ಜೊತೆ ಕನ್ನಡದಲ್ಲಿ ಮೊದಲ ಬಾರಿಗೆ ಡುಯೆಟ್ ಹಾಡಿದ ಲೈಲಾ ತನ್ನ ಹೆಸರನ್ನು ಲೈಲಾ ಪಟೇಲ್ ಎಂದು ಬದಲಾಯಿಸಿಕೊಂಡಿದ್ದಳು. 'ಮೇಕಪ್' ಚಿತ್ರದಲ್ಲಿ ಸಾಕಷ್ಟು ಬಿಂದಾಸ್ ಆಗಿಯೇ ನಟಿಸಿದ್ದಳು. ಆಕೆಯ ಗ್ಲಾಮರ್, ಸೆಕ್ಸ್ ಅಪೀಲ್, ಮೈಮಾಟ ಮತ್ತು ವರ್ಚಸ್ಸನ್ನು ಕಂಡೇ ಜಗ್ಗೇಶ್ ಆಕೆಯನ್ನು ತನ್ನ ಹೀರೋಯಿನ್ ಆಗಿ ಹಾಕಿಕೊಂಡಿದ್ದರಾ ಅಥವಾ ಮುಂಬಯಿ ಅಂಡರ್‌ವರ್ಲ್ಡ್‌ನ ಯಾವ ಲಿಂಕಿನ ಮೂಲಕ ಆಕೆ ಕನ್ನಡಕ್ಕೆ ಕಾಲಿಟ್ಟಿದ್ದಳು?

ಹೀಗೊಂದು ಪ್ರಶ್ನೆ ಈಗ ಉದ್ಭವಿಸುತ್ತದೆಯೆಂದರೆ



ಜಗ್ಗೇಶ್‌ರ ಮೇಕಪ್ ಚಿತ್ರದಲ್ಲಿ ಲೈಲಾ ಪಟೇಲ್



ಬಿಕಿನಿ ಬೆಡಗಿ ಲೈಲಾ

ಅದಕ್ಕೆ ಲೈಲಾಖಾನ್ ಹಿಡಿದ ದಾರಿ, ಆಕೆಯ ನಿಗೂಢತೆ ಮತ್ತು ಪ್ರಕ್ಷುಬ್ಧ ಬದುಕಿನಲ್ಲೇ ಯಥೇಚ್ಛ ಅವಕಾಶಗಳಿದ್ದವು. ಮೂಲತಃ ಆಕೆ ಹುಟ್ಟಿದ್ದು ಪಾಕಿಸ್ತಾನದಲ್ಲಿ, ಅಲ್ಲೇ ವಿದ್ಯಾಭ್ಯಾಸ ಮುಗಿಸಿ ತಾಯಿ ಸಲೀನಾ ಬೇಗಮ್ ಜೊತೆ 2004ರ ಸುಮಾರಿಗೆ ಭಾರತಕ್ಕೆ ಬಂದವಳು ಲೈಲಾ. ಆಕೆಯ ತಾಯಿ ಸಲೀನಾ ಕೆಲಕಾಲ ಮಲೇಷಿಯಾದಲ್ಲಿದ್ದಳು. ಭಾರತೀಯ ಮೂಲದ ಮಲೇಷಿಯನ್ ಉದ್ಯಮಿ ನಾದಿರ್ ಪಟೇಲ್‌ನನ್ನು ಪ್ರೀತಿಸಿ ಮದುವೆಯಾದ ಸಲೀನಾಳ ಮೂವರು ಹೆಣ್ಣು ಮತ್ತು ಒಂದು ಗಂಡು ಮಕ್ಕಳ ಪೈಕಿ ಎರಡನೆಯವಳೇ ಲೈಲಾಖಾನ್!

ವಿಧಿಯೋ, ವಿಪರ್ಯಾಸವೋ ಪಾಕಿಸ್ತಾನವನ್ನು ತೊರೆದು ತಾಯಿ ಸಲೀನಾ ಜೊತೆ ಭಾರತಕ್ಕೆ ಬಂದ ಲೈಲಾ ಮದುವೆಯಾಗಿದ್ದು ಮುನೀರ್ ಖಾನ್ ಎಂಬ ಬಾಂಗ್ಲಾದೇಶಿ ಯುವಕನನ್ನು. ಅದೂ ಪ್ರೀತಿಸಿ ಮದುವೆಯಾಗಿದ್ದಳು. ಆದರೆ ಗಂಡ ಮುನೀರ್ 'ಹರ್ಕತ್ ಉಲ್ ಜೆಹಾದ್ ಅಲ್ ಇಸ್ಲಾಮಿ' ಅರ್ಥಾತ್ ಹುಜಿ ಎಂಬ ಬಾಂಗ್ಲಾದೇಶಿ ಇಸ್ಲಾಮಿಕ್ ಭಯೋತ್ಪಾದಕ ಸಂಘಟನೆಯ ಸಕ್ರಿಯ ಸದಸ್ಯನೆಂಬ ಸಂಗತಿ ಅರಿವಾಗುವ ಹೊತ್ತಿಗೆ ಕಾಲ ಮಿಂಚಿತ್ತು, ಅದೇ ಹೊತ್ತಿಗೆ ತಾಯಿ ಸಲೀನಾ ಮತ್ತು ತಂದೆ ನಾದಿರ್ ಪಟೇಲ್ ದಾಂಪತ್ಯದಲ್ಲಿ ಬಿರುಗಾಳಿಯೆದ್ದಿತು. ಸಲೀನಾಳ ಬದುಕಿನಲ್ಲಿ ಮತ್ತೊಬ್ಬನ ಪ್ರವೇಶವಾಗಿತ್ತು. ಆತ ಮುಂಬಯಿಯ ಹವಾಲಾ ದಂಧೆಕೋರ ಆಸಿಫ್ ಶೇಕ್!

ಮೊದಲ ಪತಿ ನಾದಿರ್ ಪಟೇಲ್‌ಗೆ ತಲಾಖ್ ಕೊಟ್ಟು ಆಸಿಫ್ ಶೇಕ್‌ನನ್ನು ಮದುವೆಯಾದ ತಾಯಿ ಸಲೀನಾಳ ಬದುಕಿಗೂ ಲೈಲಾಳ ಬಿಂದಾಸ್ ವ್ಯಕ್ತಿತ್ವಕ್ಕೂ ಹೆಚ್ಚು ವ್ಯತ್ಯಾಸವಿರಲಿಲ್ಲ, ಮೊದಲ ಗಂಡ ಮುನೀರ್ ಹಿಡಿತದಿಂದ ತಪ್ಪಿಸಿಕೊಳ್ಳಲು ಮುಂಬಯಿ ಅಂಡರ್‌ವರ್ಲ್ಡ್ ತೆಕ್ಕೆಗೆ ಬಿದ್ದಳು. ಅದು ಆಕೆಯನ್ನು ಮಾಡೆಲಿಂಗ್, ಬಾಲಿವುಡ್, ಗ್ಲಾಮರ್ ಲೋಕಕ್ಕೆ ಕರೆದೊಯ್ದಿತ್ತು, ದಾವೂದ್ ಇಬ್ರಾಹಿಂನ ಕರಾಳಹಸ್ತಗಳು ಬಾಲಿವುಡ್‌ನ ಬೇರಿನಾಳಕ್ಕೂ ವ್ಯಾಪಿಸಿ ಬಿಟ್ಟಿವೆ. ಯಾರದೋ ಹೆಸರಲ್ಲಿ, ಯಾರೋ ನಿರ್ದೇಶಕನ ಮೂಲಕ ಸೃಷ್ಟಿಯಾಗುವ ಕೆಲ ಹಿಂದಿ ಸಿನಿಮಾಗಳಿಗೆ ದುಬೈ ಮೂಲದ ಹವಾಲಾ ದುಡ್ಡು ಸದ್ದಿಲ್ಲದೆ ಹರಿದು ಬರುತ್ತದೆ. ಇಂಥದ್ದೇ ಚಿತ್ರವೊಂದಕ್ಕೆ ಹೀರೋಯಿನ್ನಾದವಳು ಲೈಲಾ. 2008ರಲ್ಲಿ ತೆರೆಕಂಡ 'ವಫಾ' ಚಿತ್ರದಲ್ಲಿ ಹಿರಿಯ ನಟ ರಾಜೇಶ್ ಖನ್ನಾನ ಎದುರು ಲೈಲಾ ನಾಯಕಿಯಾಗಿದ್ದಳು!

ಬಾಲಿವುಡ್‌ನ ಐಟಂ ಗರ್ಲ್ ರಾಕಿ ಸಾವಂತಳ ಖಾಸಾ ತಮ್ಮ ರಾಕೇಶ್ ಸಾವಂತ್ ನಿರ್ದೇಶಿಸಿದ್ದ 'ವಫಾ' ಹೇಳಿಕೊಳ್ಳುವಂತ ಹಿಟ್ ಚಿತ್ರವಲ್ಲದೆ ಹೋದರೂ ದುಬೈ, ಪಾಕಿಸ್ತಾನ ಸೇರಿದಂತೆ ದೇಶಾದ್ಯಂತ ಸಾಕಷ್ಟು ಹಣ ಬಾಚಿತ್ತು, ತುಂಬಾ ದಿನಗಳ ನಂತರ ರಾಜೇಶ್ ಖನ್ನಾ ನಟಿಸಿದ್ದು ಎಂಬ ಒಂದು ಕಾರಣವಾದರೆ ಮತ್ತೊಂದು ಲೈಲಾ ಎಂಬ ಬೆಡಗಿಯ ಬಿಂದಾಸ್ ನಟನೆ. ವಯಸ್ಸಾದ ಗಂಡನನ್ನು ವಂಚಿಸಿ ಆತನ ಕಾರ್ ಚಾಲಕನ ಜೊತೆ ಚಕ್ಕಂದವಾಡುವ ಕಾಮುಕ ಪತ್ನಿಯ ಪಾತ್ರಕ್ಕೆ ಲೈಲಾ ಹೇಳಿಮಾಡಿಸಿದಂತಿದ್ದಳು.

ಹೆಚ್ಚೂಕಮ್ಮಿ 15 ಕೋಟಿ ವೆಚ್ಚದಲ್ಲಿ ಸೃಷ್ಟಿಯಾದ 'ವಫಾ' ಲೈಲಾಳ ಮೈಮಾಟ ದಿಂದಾಗಿಯೇ ಬಾಕ್ಸ್ ಆಫೀಸ್ ದೋಚಿತ್ತು, ಅದೇ ಹೊತ್ತಿಗೆ ಲೈಲಾ ಕನ್ನಡದ 'ಮೇಕಪ್'

> ಹೆಚ್ಚೂಕಮ್ಮಿ 15 ಕೋಟಿ ವೆಚ್ಚದಲ್ಲಿ ಸೃಷ್ಟಿಯಾದ 'ವಫಾ' ಲೈಲಾಳ ಮೈಮಾಟ ದಿಂದಾಗಿಯೇ ಬಾಕ್ಸ್ ಆಫೀಸ್ ದೋಚಿತ್ತು. ಅದೇ ಹೊತ್ತಿಗೆ ಲೈಲಾ ಕನ್ನಡದ 'ಮೇಕಪ್' ಮೂಲಕ ಜಗ್ಗೇಶ್ ಎದುರು ಹೀರೋಯಿನ್ನಾದಳು. ಬಲ್ಲ ಮೂಲಗಳ ಪ್ರಕಾರ ಆಕೆಯನ್ನು ಹೀರೋಯಿನ್ ಮಾಡಲೆಂದೇ ಡಿ ಕಂಪೆನಿ ಆ ಪಾಟಿ ಬಂಡವಾಳ ಹೂಡಿತ್ತು. ಮೊದಲ ಪತಿ ನಾದಿರ್ ಪಟೇಲ್‌ನಿಂದ ತಲಾಖ್ ಪಡೆದು ಆಸಿಫ್ ಶೇಕ್ ಎಂಬ ಹವಾಲಾ ಕುಳನ ಕೈಹಿಡಿದಿದ್ದ ತಾಯಿ ಸಲೀನಾ ಬೇಗಮ್‌ಗೆ ದುಬೈ, ಮುಂಬಯಿ ಸೇರಿದಂತೆ ಅನೇಕ ಕಡೆ ಆಸ್ತಿಯಿತ್ತು. ಜೊತೆಗೆ ಅಂಡರ್ ವರ್ಲ್ಡ್ ಲಿಂಕ್, ಟೆರರಿಸ್ಟ್ ಗುಂಪುಗಳ ನೆಂಟಸ್ತಿಕೆಗೆ ಮಗಳು ಲೈಲಾ ಬಿದ್ದಾಗಿತ್ತು.

ಮೂಲಕ ಜಗ್ಗೇಶ್ ಎದುರು ಹೀರೋಯಿನ್ನಾದಳು. ಬಲ್ಲ ಮೂಲಗಳ ಪ್ರಕಾರ ಆಕೆಯನ್ನು ಹೀರೋಯಿನ್ ಮಾಡಲೆಂದೇ ಡಿ ಕಂಪೆನಿ ಆ ಪಾಟ ಬಂಡವಾಳ ಹೂಡಿತ್ತು. ಮೊದಲ ಪತಿ ನಾದಿರ್ ಪಟೇಲ್‌ನಿಂದ ತಲಾಖ್ ಪಡೆದು ಆಸಿಫ್ ಶೇಕ್ ಎಂಬ ಹವಾಲಾ ಕುಳನ ಕೈಹಿಡಿದಿದ್ದ ತಾಯಿ ಸಲೀನಾ ಬೇಗಮ್‌ಗೆ ದುಬೈ, ಮುಂಬಯಿ ಸೇರಿದಂತೆ ಅನೇಕ ಕಡೆ ಆಸ್ತಿಯಿತ್ತು. ಜೊತೆಗೆ ಅಂಡರ್ ವರ್ಲ್ಡ್ ಲಿಂಕ್, ಟೆರರಿಸ್ಟ್ ಗುಂಪುಗಳ ನೆಂಟಸ್ತಿಕೆಗೆ ಮಗಳು ಲೈಲಾ ಬಿದ್ದಾಗಿತ್ತು.

ಅದು 2009ರ ಕಾಲ. ಮುಂಬಯಿಯಲ್ಲಿ ನಡೆದ ಸ್ವಯಂಸೇವಾ ಸಂಸ್ಥೆಗಳ ಸಭೆಯೊಂದಕ್ಕೆ ತಾಯಿ ಸಲೀನಾ ಬೇಗಮ್ ಹೋಗಿದ್ದಾಗ ಭಾಷಣಕಾರನೊಬ್ಬ ಮಾತಿನ ಮಧ್ಯೆ ಕಾಶ್ಮೀರಿ ಉಗ್ರರನ್ನು ವಾಚಾಮಗೋಚರ ಹೀಯಾಳಿಸಿಬಿಟ್ಟ. ಅದೇನೆನ್ನಿಸಿತೋ ಸುಮ್ಮನಿರಲಾಗದ ಸಲೀನಾ ಕಾಶ್ಮೀರಿಗಳನ್ನು ಸಮರ್ಥಿಸಿಕೊಂಡು ಪ್ರತಿ ಭಾಷಣ ಮಾಡಿ ಕಾಶ್ಮೀರಿ ನಿಂದನೆಯನ್ನು ಖಂಡಿಸಿದಳು. ಬಹುಶಃ ದುರಂತವೆಂಬುದು ಆ ಮೂಲಕವೇ ಲೈಲಾ ಮತ್ತವ...



ತಾಯಿ ಸಲೀನಾ ಜೊತೆ ಲೈಲಾ ಸಹೋದ...

ತಾಯಿ ಸಲೀನಾಳ ರಾಶಿಗೆ ಕಾಲಿಟ್ಟಿತ್ತು, ಸಭೆ ಮುಗಿದದ್ದೇ ತಡ ಕಾಶ್ಮೀರಿ ಯುವಕನೊಬ್ಬ ಸಲೀನಾಳ ಕೈಕುಲುಕಿ, ಕಾಶ್ಮೀರಿಗಳ ಪರವಹಿಸಿದ್ದಕ್ಕೆ ಧನ್ಯವಾದ ಹೇಳಿದ. ಆತನೇ ಪರ್ವೇಜ್ ಇಕ್ಬಾಲ್ ಶಕ್!

ಆಜಾನುಬಾಹು, ಸ್ಪುರದ್ರೂಪಿ ಯುವಕ. ಆದೇನು ವ್ಯಾಮೋಹವೋ, ಆಕರ್ಷಣೆಯೋ 36ರ ಪರ್ವೇಜ್ ಶಕ್ ಮತ್ತು 56ರ ಸಲೀನಾ ಇಬ್ಬರೂ ತಂತಮ್ಮ ಮೊಬೈಲು ನಂಬರುಗಳನ್ನು ವಿನಿಮಯಿಸಿಕೊಂಡಿದ್ದು ಕ್ರಮೇಣ ಪ್ರೀತಿಗೆ ತಿರುಗಿ ಅದೇ ತಿಂಗಳಿನಲ್ಲಿ ಸಲೀನಾ ತನ್ನ ಎರಡನೇ ಗಂಡ ಆಸಿಫ್ ಶೇಕ್‌ನನ್ನು ತೊರೆದು ಕಾಶ್ಮೀರಿ ಪರ್ವೇಜ್ ಶಕ್‌ನನ್ನು ಮದುವೆಯಾದಳು. 56ರ ಸಲೀನಾಗೆ 36ರ ಹೊಸ ಗಂಡ. ಹೆಚ್ಚೂ ಕಮ್ಮಿ ತನ್ನ ಮೊದಲ ಮಗಳು ಅಜ್ಮೀನಾಳ ವಯಸ್ಸಿನದೇ ಪುರುಷನೊಬ್ಬನನ್ನು ತಾಯಿ ಸಲೀನಾ ಮದುವೆಯಾಗಿದ್ದಳು.

ಪರ್ವೇಜ್ ಶಕ್ ಕಾಶ್ಮೀರಿ ಉಗ್ರನೆಂಬುದು ಆಕೆಗೆ ಅರಿವಾಗುವ ಹೊತ್ತಿಗೆ ಕಾಲ ಮಿಂಚಿತ್ತು. ಕಾಶ್ಮೀರದ ಚಿನಾಬ್ ಕಣಿವೆಯ ಕಿಶ್ತ್‌ವರ್‌ನಿಂದ ಸರಿಸುಮಾರು 5ಕಿ.ಮೀ ದೂರದ ಚೋಡವಾ ಶರೀಫ್ ಎಂಬ ಹಳ್ಳಿಯವನಾದ ಪರ್ವೇಜ್ ಶಕ್‌ನ ಹಿನ್ನೆಲೆಯೇ ವಿಚಿತ್ರವಾಗಿತ್ತು. ಆತನ ತಂದೆ ಮುಹಮ್ಮದ್ ಅಮಿನ್‌ಖಾನ್ ವರ್ಷ ಮರಗೆಲಸದ ಬಡಗಿ. 8ನೇ ತರಗತಿಯವರೆಗೆ ತನ್ನ ಹಳ್ಳಿಯಲ್ಲೇ ಓದಿದ ಶಕ್ ಆನಂತರ ತಂದೆಯ ಕಾರ್ಪೆಂಟರ್‌ಗಿರಿಯ ಜೊತೆ ಕೈಜೋಡಿಸಿದ. ಆದರೆ ನಿರಾಶೆಯಿತ್ತಲ್ಲ; ಮರಗೆಲಸದಲ್ಲಿ ಭಾರೀ ಲಾಭವಿಲ್ಲ ಎಂದು ಗೊತ್ತಾಗಿದ್ದೇ ಕಿಶ್ತ್‌ವರ್‌ನಲ್ಲೊಂದು ಅನಾಥಾಶ್ರಮ ತೆರೆದಂತೆ ಮಾಡಿ ಅದರ ಹೆಸರಲ್ಲಿ ಬೇಕಾಬಿಟ್ಟಿ ದುಡ್ಡು ನುಂಗಿ ಕ್ರಮೇಣ ಅನಾಥಾಶ್ರಮವನ್ನು ಮುಚ್ಚಿ ಅರಣ್ಯ ಗುತ್ತಿಗೆದಾರನೆಂದು ಓಡಾಡಿಕೊಂಡಿದ್ದ.

2008ರಲ್ಲಿ ಕಾಶ್ಮೀರ ವಿಧಾನಸಭೆಗೆ ಚುನಾವಣೆ ಬಂತು. ಶಕ್ ಕಿಶ್ತ್‌ವರ್‌ನ ಇಂದಾರವಾಲ್ ಕ್ಷೇತ್ರದಿಂದ ಶರದ್ ಪವಾರ್‌ನ ಎನ್‌ಸಿಪಿ ಅಂದರೆ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ ಟಿಕೆಟ್ಟು ಗಿಟ್ಟಿಸಿ ಚುನಾವಣೆಗೆ ನಿಂತ. ಬಂದದ್ದು ಕೇವಲ 400 ಮತಗಳು. ಠೇವಣಿ ಹುಟ್ಟಲಿಲ್ಲ. ಆದರೆ ಸುಮ್ಮಲ್ಲೇ ಹುದ್ದೆಗೆ ಸ್ಪರ್ಧೆ ಎಂಬ ಹಣೆ ಪಟ್ಟಿಯಿತ್ತಲ್ಲ, ಚುನಾವಣೆಗೆ ನಿಂತಿದ್ದರಿಂದ ತನ್ನನ್ನು ಲಷ್ಕರ್ ಎ ತೋಯ್ಬಾ ಉಗ್ರರು ಕೊಂದು ಹಾಕುತ್ತಾರೆಂದು ಪೊಲೀಸ್ ಇಲಾಖೆಯಿಂದ 8 ಮಂದಿ ಗನ್‌ಮೆನ್‌ಗಳನ್ನು ಅಂಗರಕ್ಷಣೆಗೆಂದು ನೇಮಿಸಿಕೊಂಡು ಪುಢಾರಿ ಗೆಟಪ್ಪಿನಲ್ಲಿ ಓಡಾಡಿಕೊಂಡಿದ್ದ. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಕಿಶ್ತ್‌ವರ್ ಎಸ್.ಪಿ. ಹಸೀಬ್ ಮುಘಲ್ ನಿನ್ನ ಯೋಗ್ಯತೆಗೆ ಒಬ್ಬ ಗನ್‌ಮನ್ ಸಾಕಷ್ಟೇ ಸಾಕೆಂದು ಉಳಿದ ಏಳೂ ಬಂದೂಕುಧಾರಿ ಪೊಲೀಸರನ್ನು ವಾಪಸ್ಸು ಕರೆಸಿಕೊಂಡರು.

ಇದರಿಂದ ಮತ್ತಷ್ಟು ಕ್ರುದ್ಧನಾದ ಶಕ್ ಕಪಿಚೇಷ್ಟೆಯೊಂದಕ್ಕೆ ಕೈಯಿಟ್ಟ. ಅದೊಂದು ರಾತ್ರಿ ತನ್ನ ಗನ್‌ಮನ್‌ಗೆ ಸ್ವಲ್ಪತಿ ದೂರದ ಕಾಡಿನಿಂದ ಗುಂಡು ಹಾರಿಸುವಂತೆ ಹೇಳಿಕೊಟ್ಟು ತನ್ನ ಮನೆ ಮೇಲೆ ಉಗ್ರರ ದಾಳಿಯಾಗಿದೆ ಎಂದು ಪೊಲೀಸರಿಗೆ ಫೋನ್ ಮಾಡಿದ. ಧಾವಿಸಿ ಬಂದ ಪೊಲೀಸರಿಗೆ ಶಕ್ ಹೂಡಿದ್ದ ನಾಟಕ ಗೊತ್ತಾಯಿತು. ದೂರದಿಂದ ತನ್ನ ಎಕೆ 47 ರೈಫಲ್‌ನಿಂದ ಆಕಾಶಕ್ಕೆ ಗುಂಡು ಹಾರಿಸುತ್ತಿದ್ದುದು ಸ್ವತಃ ಆತನ ಗನ್‌ಮನ್ ಎಂಬುದು ಬಯಲಾಗಿತ್ತು. ತಕ್ಷಣವೇ ಶಕ್‌ನ ರಕ್ಷಣೆಗೆಂದು ನೇಮಿಸಿದ್ದ ಗನ್‌ಮನ್‌ನನ್ನು ಅಮಾನತ್ತಿನಲ್ಲಿಟ್ಟರು ಎಸ್‌ಪಿ ಹಸೀಬ್ ಮುಘಲ್.

ಇಷ್ಟಾಗಿದ್ದೇ ಮುಂಬಯಿಗೆ ವಲಸೆ ಬಂದ ಶಕ್ ತಾನು ಎನ್‌ಸಿಪಿ ನಾಯಕನೆಂದೂ, ಶರದ್ ಪವಾರ್‌ಗೆ ದೋಸ್ತನೆಂದೂ, ಸರ್ಕಾರಿ ಕೆಲಸ ಕಾಂಟ್ರಾಕ್ಟ್ ಕೊಡಿಸುತ್ತೇನೆಂದು ನೂರಾರು ಜನರನ್ನು ವಂಚಿಸಿದ. ಆತನ ವಿರುದ್ಧ ಪಂಜಾಬ್ ಮತ್ತು ಕಾಶ್ಮೀರದಲ್ಲಿ ವಂಚನೆ, ಫೋರ್ಜರಿ, ದರೋಡೆ, ಬ್ಲ್ಯಾಕ್‌ಮೇಲ್ ಇತ್ಯಾದಿ ಕೇಸುಗಳಿದ್ದವು. ತನಗಿಂತ 20 ವರ್ಷ ಹಿರಿಯಳಾದ, ತನ್ನ ವಯಸ್ಸಿನದ್ದೇ ಮಕ್ಕಳುಳ್ಳ ಸಲೀನಾ ಬೇಗಮ್‌ಳನ್ನು ಮದುವೆಯಾದ ಮೇಲಂತೂ ಆತನ ವರ್ತನೆಯೇ ಬದಲಾಯಿತು. ಅಪರೂಪಕ್ಕೊಮ್ಮೆ ಕಿಶ್ತ್‌ವರ್‌ಗೆ ಬರುತ್ತಿದ್ದ. ಬರುವಾಗಲೆಲ್ಲಾ ಹೊಸ ಹೊಸ ಕಾರುಗಳನ್ನು ತರುತ್ತಿದ್ದ. ಹಾಗೇ ಶಕ್ ತರುತ್ತಿದ್ದ ತರಹೇವಾರಿ ಕಾರುಗಳ ಪೈಕಿ ಮಹಾರಾಷ್ಟ್ರದ ರಿಜಿಸ್ಟ್ರೇಷನ್ನಿನ MH-02AY7867 ನಂಬರಿನ ಮಿತ್ಸುಬಿಷಿ ಔಟ್‌ಲ್ಯಾಂಡರ್ ಕಾರು ಮಾತ್ರ ಕಳೆದೊಂದು ವರ್ಷದಿಂದ ಆತನ ಮನೆಯೆದುರು ಅನಾಥವಾಗಿ ನಿಂತೇ ಇತ್ತು!


ಅದು 2011ರ ಸೆಪ್ಟಂಬರ್‌ನಲ್ಲಿ ನಡೆದ ದೆಹಲಿ ಹೈಕೋರ್ಟ್ ಬಾಂಬ್ ಸ್ಫೋಟದಲ್ಲಿ ಬಳಕೆಯಾದ ಕಾರು!

ಯಾವ ಲಷ್ಕರ್ ಉಗ್ರರಿಂದ ತನಗೆ ಪ್ರಾಣ ಬೆದರಿಕೆಯಿದೆಯೆಂದು ಪರ್ವೇಜ್ ಪೊಲೀಸ್ ಗನ್‌ಮನ್‌ಗಳ ರಕ್ಷಣೆ ಪಡೆದಿದ್ದನೋ ಅದೇ ಲಷ್ಕರ್ ಜಾಲಕ್ಕೆ ಆತ ಸಕ್ರಿಯ ಸದಸ್ಯನಾಗಿದ್ದ. 2011ರ ಸೆಪ್ಟಂಬರ್‌ನ ದೆಹಲಿ ಹೈಕೋರ್ಟ್ ಸ್ಫೋಟಕ್ಕೂ ಮುನ್ನ ಪರ್ವೇಜ್ ಲೈಲಾಳ ಇಗತ್‌ಪುರಿ ಫಾರ್ಮ್‌ಹೌಸಿನಲ್ಲೇ ಮೂವರು ಲಷ್ಕರ್ ಉಗ್ರರೊಂದಿಗೆ ಸ್ಫೋಟದ ರೂಪುರೇಷೆ ಹೆಣೆದಿದ್ದ. ಆ ಮೂವರು ಲಷ್ಕರ್ ಉಗ್ರರ ಪೈಕಿ ಪ್ರಮುಖನೇ ಡಾಕ್ಟರ್ ವಸೀಮ್. ಮೇಜರ್ ಯಾಸಿನ್ ಮತ್ತು ಮೇಜರ್ ಗುಲಾಮ್ ಆವತ್ತು ಪರ್ವೇಜ್ ಜೊತೆಗಿದ್ದ ಇನ್ನಿಬ್ಬರು. ದೆಹಲಿ ಸ್ಫೋಟದ ಕಾರ್ಯಾಚರಣೆಗೆಂದು ಬಳಸಿದ್ದ ಮೂರು ಕಾರುಗಳ ಪೈಕಿ ಸ್ಫೋಟಕಗಳನ್ನು ಸಾಗಿಸಿದ್ದು ಲೈಲಾಳ ಮಿತ್ಸುಬಿಷಿ ಔಟ್‌ಲ್ಯಾಂಡರ್‌ನಲ್ಲಿ ಎಂಬ ಮಾಹಿತಿ ಹೇಗೋ ಇಂಟಲಿಜೆನ್ಸ್ ಬ್ಯೂರೋ ಅಧಿಕಾರಿಗಳಿಗೆ ಸಿಕ್ಕಿತು.

ದೆಹಲಿ ಬ್ಲಾಸ್ಟ್ ನಂತರ ಮುಂಬಯಿಯಲ್ಲಿ ಮತ್ತೊಂದು ಬಾಂಬ್ ದಾಳಿಗೆ ಲಷ್ಕರ್ ಸಂಘಟನೆ ಅಣಿಯಾಗುತ್ತಿದೆಯೆಂದೂ ಅದಕ್ಕೆ ಬೇಕಾದ ಸ್ಫೋಟಕಗಳನ್ನು ಅದೇ ಮಿತ್ಸುಬಿಷಿಯಲ್ಲಿ ಮುಂಬಯಿಗೆ ತರಲಾಗುತ್ತಿದೆಯೆಂದೂ 2012ರ ಮೇ ತಿಂಗಳಿನಲ್ಲಿ ಮಾಹಿತಿ ಬಂದಿತ್ತು. ಆದರ ನಂಬರಿನ ಆಧಾರದ ಮೇಲೆ ಆ ಮಿತ್ಸುಬಿಷಿ ಯಾರಿಗೆ ಸೇರಿದೆಯೆಂದು ತಲೆಕೆಡಿಸಿಕೊಂಡ ಪೊಲೀಸರಿಗೆ ಅಚ್ಚರಿ ಕಾದಿತ್ತು. ಅದು ಬಾಲಿವುಡ್ ನಟಿ ಲೈಲಾಖಾನ್ ಅಲಿಯಾಸ್ ರೇಷ್ಮಾ ಪಟೇಲ್ ಹೆಸರಿನಲ್ಲಿತ್ತು.

ಆಗ ಲೈಲಾಖಾನ್ ಇತಿಹಾಸ ಕೆದಕಿ ಹೊರಟ ಆ್ಯಂಟಿ ಟೆರರಿಸಮ್ ಸ್ಕ್ವಾಡ್ ಪೊಲೀಸರಿಗೆ ಅದಕ್ಕಿಂತಲೂ ಅಚ್ಚರಿ ಎನಿಸಿದ್ದು ಕಳೆದ ಒಂದೂಕಾಲು ವರ್ಷದಿಂದ ಲೈಲಾಳ ಪತ್ತೆಯೇ ಇರಲಿಲ್ಲ. ಆಕೆಯ ತಂದೆ ಅಂದರೆ ಸಲೀನಾಳ ಮೊದಲ ಪತಿ ನಾದಿರ್ ಶಾ ಪಟೇಲ್ ಮುಂಬಯಿ ಹೊರವಲಯದ ಓಶಿವಾರಾ ಪೊಲೀಸ್ ಠಾಣೆಯಲ್ಲಿ ಲೈಲಾ ಸೇರಿದಂತೆ ತನ್ನ ನಾಲ್ವರು ಮಕ್ಕಳು ಮತ್ತು ವಿಚ್ಛೇದಿತ ಪತ್ನಿ ಸಲೀನಾ ಸೇರಿದಂತೆ ಆರು ಮಂದಿ ನಾಪತ್ತೆಯಾಗಿದ್ದರೆಂದು ದೂರೊಂದನ್ನು ದಾಖಲಿಸಿದ್ದ.

ದೆಹಲಿ ಹೈಕೋರ್ಟ್ ಸ್ಫೋಟಕ್ಕೆ ಬಳಕೆಯಾಗಿದ್ದ ಮಿತ್ಸುಬಿಷಿ ಗಾಡಿ ನಟಿ ಲೈಲಾಗೆ ಸೇರಿದ್ದು ಮತ್ತು ತನ್ನ ಇಡೀ ಕುಟುಂಬದ ಸಮೇತ ಆಕೆ ನಾಪತ್ತೆಯಾಗಿದ್ದು



ಪರ್ವೇಜ್‌ನ ಗ್ಯಾರೇಜಿನಲ್ಲಿ ಪತ್ತೆಯಾದ ಮಿತ್ಸುಬಿಷಿ

ಮುಂಬಯಿ ಪೊಲೀಸರು, ಕೇಂದ್ರದ ಐಬಿಯವರನ್ನು ಮತ್ತಷ್ಟು ಕಂಗಾಲಾಗಿಸಿತ್ತು. ಆದರೆ ಪೊಲೀಸರ ಪಾಲಿಗೊಂದು ಖುಷಿಯ ಮಾಹಿತಿಯಿತ್ತು. MH-02AY7867 ನಂಬರಿನ ಮಿತ್ಸುಬಿಷಿ ಕಾಶ್ಮೀರದ ಕಿಶ್ತ್‌ವರ್‌ನಲ್ಲಿ ಪತ್ತೆಯಾಗಿತ್ತು, ತಿಂಗಳುಗಟ್ಟಲೇ ಅನಾಥವಾಗಿ ಪರ್ವೇಜ್‌ನ ಮನೆ ಗ್ಯಾರೇಜಿನಲ್ಲಿ ನಿಂತೇ ಇದ್ದ ಮಿತ್ಸುಬಿಷಿಯ ಇತಿಹಾಸ ಕೆದಕಿ ಎಂದು ಜಮ್ಮುಕಾಶ್ಮೀರದ ಪೊಲೀಸರಿಂದ ಕೋರಿಕೆ ಬಂದಿತ್ತು.

ಅದೇಹೊತ್ತಿಗೆ ಫೋರ್ಜರಿ ಪ್ರಕರಣವೊಂದರಲ್ಲಿ ಸಿಕ್ಕಿಬಿದ್ದ ಪರ್ವೇಜ್ ಎಲ್ಲಿ ಕಾಶ್ಮೀರದ ಪೊಲೀಸರು ತನ್ನನ್ನು ಬಂಧಿಸುತ್ತಾರೋ ಎಂದು ನೇಪಾಳಕ್ಕೆ ಫರಾರಿಯಾಗಿದ್ದ. ಕಿಶ್ತ್‌ವರ್‌ನ ಡೆಪ್ಯೂಟಿ ಎಸ್.ಪಿ ಅಬ್ಬಾರ್ ಚೌಧರಿ ಆತನ ಬೆನ್ನಿಗೆ ಬಿದ್ದಿದ್ದರು. ಆತನನ್ನು ಹುಡುಕಿಕೊಂಡು ಆತನ ಮನೆಗೆ ಬಂದರೆ ಅಲ್ಲಿ ನಿಂತಿದ್ದ ಮಿತ್ಸುಬಿಷಿ ಗಾಡಿಯ ಹಿನ್ನೆಲೆ ಕೆದಕುವ ಕುತೂಹಲಕ್ಕೆ ಬಿದ್ದು ಲೈಲಾಳ ನಾಪತ್ತೆ ಆಕೆಯ ಗಾಡಿಯಲ್ಲೇ ಸ್ಫೋಟಕ ಸಾಗಿಸಿದ ಮಾಹಿತಿ ಎಲ್ಲವೂ ಒಂದೊಂದಾಗಿ ಹೊರಬಿದ್ದವು. ಪರ್ವೇಜ್ ಕೇವಲ ಲಷ್ಕರ್ ಉಗ್ರ ಮತ್ತು ಹವ್ಯಾಸಿ ಕ್ರಿಮಿನಲ್ ಮಾತ್ರವಲ್ಲದೆ ಆತ ಸಲೀನಾ ಎಂಬ ಹೆಂಗಸನ್ನು ಮುಂಬಯಿಯಲ್ಲಿ ಮದುವೆಯಾಗಿದ್ದಾನೆ ಮತ್ತು ಬಾಲಿವುಡ್ ನಟಿ ಲೈಲಾಗೆ ಆತ ಮಲತಂದೆಯಾಗಬೇಕೆಂಬ ಸಂಗತಿ ಕಾಶ್ಮೀರಿ ಪೊಲೀಸರಿಗೆ ಗೊತ್ತಾಗಿಹೋಯಿತು. ಹಾಗಂತ ಅದನ್ನು ತೋರಿಸಿಕೊಳ್ಳುವಂತಿಲ್ಲ. ಮಿತ್ಸುಬಿಷಿ, ಲೈಲಾ, ಪರ್ವೇಜ್‌ನ ಮುಂಬಯಿ ಸಂಸಾರ ಯಾವುದೂ ತಮಗೆ ಗೊತ್ತೇ ಇಲ್ಲ ಎಂಬಂತೆ ಕಿಶ್ತ್‌ವರ್‌ನ ಪೊಲೀಸ್ ವರಿಷ್ಠ ಅಬ್ಬಾರ್ ಚೌಧರಿ ಉಪಾಯವಾಗಿ ನೇಪಾಳದಲ್ಲಿದ್ದ ಪರ್ವೇಜ್‌ನನ್ನು ಸಂಪರ್ಕಿಸಿದ್ದಾರೆ.

ನಿನ್ನ ಮೇಲಿರುವುದು ಪುಡಿ ಫೋರ್ಜರಿ ಕೇಸು. ಕೋರ್ಟು ಒಂದೇದಿನಕ್ಕೆ ಜಾಮೀನು ಕೊಡುತ್ತದೆ. ಇದಕ್ಕೆಲ್ಲಾ ಹೆದರಿ ಓಡಿಹೋದರೆ ಅದು ನಿನ್ನ ವರ್ಚಸ್ಸಿಗೆ ಅವಮಾನ. ನೀನೇನೂ ಚಿಂತೆ ಮಾಡಬೇಡ. ಮಿಕ್ಕಿದ್ದೆಲ್ಲಾ ನಾನು ನೋಡ್ಕೋತೀನಿ ಬಂದುಬಿಡು...! ಎಂದು ಪರ್ವೇಜ್‌ನನ್ನು ನಂಬಿಸಿದ್ದಾರೆ. ಪೊಲೀಸರ ಕಾರಸ್ಥಾನ ಗೊತ್ತಾಗದೇ ನೇರವಾಗಿ ಕಿಶ್ತ್ ವರ್‌ನ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಅಬ್ಬಾರ್ ಚೌಧರಿಯವರ ಭೇಟಿಗೆ ಲೀಡರ್ ಗತ್ತಿನಲ್ಲಿ ಪರ್ವೇಜ್ ಬಂದಿದ್ದಾನೆ. ಪೊಲೀಸರಿಗೆ ಬೇಕಿದ್ದದ್ದೂ ಅದೇ.

ಹಾಗೇ ಜೂನ್ 21ಕ್ಕೆ ನೇಪಾಳದಿಂದ ಬಂದು ಕಿಶ್ತ್‌ವರ್ ಪೊಲೀಸರಿಗೆ ಶರಣಾದ ಪರ್ವೇಜ್ ಶಕ್ ತನಗರಿವಿಲ್ಲದೆಯೇ ಹೆಣೆದ ಬಲೆಗೆ ಬಿದ್ದಿದ್ದ. ಆಗ ಶುರುವಾದದ್ದೇ ಮಿತ್ಸುಬಿಷಿಯ ತನಿಖೆ. ಸತತ ಒಂದು ವಾರದ ಕಾಲ ಲಾಕಪ್ಪಿನಲ್ಲಿಟ್ಟು ಸಕಲ ಪೊಲೀಸ್ ವಿದ್ಯೆಗಳನ್ನೆಲ್ಲ ಬಳಸಿದ ನಂತರವೇ ಶಕ್ ಬಾಯಿಬಿಟ್ಟ. ಲೈಲಾಖಾನ್ ಕೊಲೆಯಾಗಿದ್ದಾಳೆ. ಆಕೆಯ ತಾಯಿ ಸಲೀನಾಳನ್ನು ನಾನೇ ಕೊಂದಿದ್ದೇನೆ. ಲೈಲಾಳ ಅಕ್ಕ ಅಜ್ಮೀನಾ, ತಂಗಿ ಝರಾ, ತಮ್ಮ ಇಮ್ರಾನ್ ಮತ್ತು ಲೈಲಾಳ ಸೋದರ ಸಂಬಂಧಿ ರೇಷ್ಮಾ ಸಗೀರ್ ಖಾನ್ ಅಲಿಯಾಸ್ ತಲ್ಲಿ ಎಂಬ 19ರ ಪೋರಿಯನ್ನು ಸೇರಿಸಿ ಆಕೆಯ ಇಗತ್‌ಪುರಿ ಫಾರ್ಮ್‌ಹೌಸಿನಲ್ಲಿ ಕೊಂದು ಹಾಕಿದ್ದೇನೆಂದು ಬಾಯಿಬಿಟ್ಟ.

ತಾಯಿ ಸಲೀನಾ ಮುದುಕಿಗೆ ಬಿದ್ದು ಮಾಡಿಕೊಂಡ ಯಡವಟ್ಟಿನ ಫಲವಾಗಿ ಇಡೀ ಲೈಲಾಳ ಕುಟುಂಬವೇ ನಿರ್ನಾಮವಾಗಿತ್ತು!

ಕೊಲ್ಲಲು ನಿಂತ ಭಯೋತ್ಪಾದಕರಿಗೆ ಶತ್ರುಗಳಷ್ಟೇ ಏಕೆ, ತನಗೆ ಪತ್ನಿ, ಮಲಮಕ್ಕಳು, ಸಂಬಂಧಿಕರು, ಅವರ ಪ್ರೀತಿ, ಋಣದ ಹಂಗೂ ಇರುವುದಿಲ್ಲ. ಪಾಪ ತಾಯಿ ಸಲೀನಾ ಮತ್ತು ಮಗಳು ಲೈಲಾಗಿದು ಅರ್ಥವಾಗುವ ಹೊತ್ತಿಗೆ ಅವರೇ ಬದುಕಿರಲಿಲ್ಲ.

● ರಾ. ಸೋಮನಾಥ್

ಜಗ್ಗೇಶ್ ಹೇಳಿದ್ದು

ಆಕೆ ಪಾಕಿಸ್ತಾನದವಳು, ಮುಸ್ಲಿಮ್ಳು ಅಂತ ಗೊತ್ತಾಗಿದ್ದೂ ಈಗ್ಲೇ ನೋಡೀ...!

ಪಾಪ, ಅವಳು ಕೊಲೆಯಾಗಿದ್ದು ಅಸ್ಸಾಗಿ ಎಂದು ಗೊತ್ತಾಗಿ ತುಂಬಾ ದುಃಖವಾಯಿತು. ಯಾರೋ ಆಕೆಯ ಬಗ್ಗೆ ತಪ್ಪು ಮಾಹಿತಿ ಕೊಟ್ಟಿದ್ದರು. ಅವಳು ಟೆರರಿಸ್ಟ್ ಅಂತೆ, ಕಾಶ್ಮೀರಿ ಉಗ್ರಗಾಮಿಗಳ ಜೊತೆಗೆ ಆಕೆಗೆ ಲಿಂಕ್ ಇತ್ತಂತೆ. ದಾವೂದ್ ಇಬ್ರಾಹಿಂ ಗ್ಯಾಂಗಿನವಳಂತೆ ಎಂದೆಲ್ಲಾ ಹೇಳಿ ನನ್ನ ತಲೆ ಕೆಡಿಸಿದ್ದು....!

ಆದರೆ 'ಮೇಕಪ್' ಶೂಟಿಂಗ್ ವೇಳೆ ಆಕೆಯ ವರ್ತನೆಯೇ ವಿಚಿತ್ರವಾಗಿತ್ತು, ಯಾರೊಂದಿಗೂ ಬೆರೆಯುತ್ತಿರಲಿಲ್ಲ, ಆಕೆಯನ್ನು ನನಗೆ ಪರಿಚಯಿಸಿದ್ದು ಹಿಂದಿಯ ಖ್ಯಾತ ಫೈಟ್ ಮಾಸ್ಟರ್ ಯಜ್ಞೇಶ್ ಶೆಟ್ಟಿ. 2002ರಲ್ಲಿ ನಾನು 'ಮೇಕಪ್' ಚಿತ್ರ ನಿರ್ಮಿಸಲು ಡೈರೆಕ್ಟರ್ ಸಿಂಗೀತಂ ಶ್ರೀನಿವಾಸರನ್ನು ಕೇಳಿಕೊಂಡಾಗ ಅದಕ್ಕೊಬ್ಬಳು ಹೀರೋಯಿನ್ ಹುಡುಕಿ ಅಂತ ಅವರೇ ಹೇಳಿದ್ದರು. ಹಿಂದಿಯ ನಟ ಗೋವಿಂದರನ್ನು ಆ ಚಿತ್ರದಲ್ಲಿ ಪಾತ್ರ ವಹಿಸುವಂತೆ ಕೇಳಲು ನಾನು ಫೈಟ್ ಮಾಸ್ಟರ್ ಯಜ್ಞೇಶ್ ಶೆಟ್ಟಿಯವರ ಮೂಲಕ ಪ್ರಯತ್ನಿಸುತ್ತಿದ್ದೆ. ಆಗ ಯಜ್ಞೇಶ್ ಶೆಟ್ಟಿಗೆ ನಿಮಗೆ ಹಿಂದಿಯಲ್ಲಿ ಯಾರಾದರೂ ಹೀರೋಯಿನ್ ಗೊತ್ತಾ? ಎಂದು ಕೇಳಿದಾಗ ಶೆಟ್ಟಿ ಸೂಚಿಸಿದ್ದೇ ಈಕೆಯನ್ನು.

ಆಗ ಈಕೆ ಪಾಕಿಸ್ತಾನದವಳು ಎಂದಾಗಲಿ, ಮುಸ್ಲಿಂ ಎಂದಾಗಲಿ ನನಗೆ ಗೊತ್ತೇ ಇರಲಿಲ್ಲ. ಯಜ್ಞೇಶ್ ಶೆಟ್ಟಿ ಆಕೆಯನ್ನು ಲೈಲಾ ಪಟೇಲ್ ಎಂದು ಪರಿಚಯಿಸಿದ್ದರು. ಅವರೇ ಆಕೆಯನ್ನು ನನ್ನ ಮನೆಗೆ ಕರೆತಂದಿದ್ದರು. ಆಕೆಯನ್ನು ನೋಡಿದ್ದೇ ನಾನು ಸಿಕ್ಕಾಪಟ್ಟೆ ದುಡ್ಡು ಕೇಳಿದ್ರೆ ಏನಪ್ಪಾ ಮಾಡೋದು, ಅಷ್ಟೆಲ್ಲಾ ದುಡ್ಡು ನನ್ನಿಂದ ಕೊಡಕ್ಕಾಗಲ್ಲ ಎಂದು ಯಜ್ಞೇಶ್‌ಗೆ ಗೋಗರೆದಿದ್ದೆ. ಅದಕ್ಕಾತ ನಿಮಗೆ ಎಷ್ಟು ಆಗುತ್ತೋ ಅಷ್ಟು ಕೊಡಿ ಎಂದು ಬಿಟ್ಟ. ಅಂತಿಮವಾಗಿ ಲೈಲಾ ಒಪ್ಪಿದ್ದು ಒಂದು ಲಕ್ಷಕ್ಕೆ!

ಕೊಟ್ಟ ಒಂದು ಲಕ್ಷದ ಸಂಭಾವನೆಗೆ ಲೈಲಾ ಅದೆಷ್ಟು ನಿಯತ್ತಾಗಿ ಶೂಟಿಂಗಿಗೆ ಬರುತ್ತಿದ್ದಳೆಂದರೆ ಯಾವತ್ತಿಗೂ ಅದು ಬೇಕು, ಇದು ಬೇಕು ಎಂದು ಬೇರೆ ಹೀರೋಯಿನ್‌ಗಳಂತೆ ಹಠ ಮಾಡಲೇ ಇಲ್ಲ. ಆ ಹೊತ್ತಿಗೆ ಆಕೆಯ ತಾಯಿ, ಅಕ್ಕ, ತಂಗಿ, ತಮ್ಮ ಎಲ್ಲರೂ ಶಿವಾನಂದ ಸ್ಟೋರ್ ಬಳಿಯಿದ್ದ ಬೆಂಗಳೂರು ಇಂಟರ್‌ನ್ಯಾಷನಲ್ ಹೊಟೇಲಿನಲ್ಲಿ ರೂಮು ಮಾಡಿದ್ದರು. ಊಟಕ್ಕೆ ಹೊರಗೆಲ್ಲೂ ಹೋಗದೆ ಹೋಟೆಲ್ ರೂಮಿನಲ್ಲೇ ಅಡುಗೆ ಮಾಡಿಕೊಳ್ಳುತ್ತಿದ್ದರು. ಆಕೆಯ ತಾಯಿಯ ಮಡಿವಂತಿಕೆ ನೋಡಿ ಬಹುಶಃ ಇವರ್‍ಯಾರೋ ಹಿಂದಿಯ ಬ್ರಾಹ್ಮಣರಿರಬೇಕೆಂದು ನಾನು ಲೆಕ್ಕ ಹಾಕಿದ್ದೆ.

ಶೂಟಿಂಗ್ ವೇಳೆಯೂ ಅಷ್ಟೇ, ಆಕೆಯ ತಾಯಿ, ಅಕ್ಕ ತಂಗಿ ಎಲ್ಲರೂ ಕುಟುಂಬ ಸಮೇತ ಪ್ರತ್ಯೇಕವಾಗಿ ಕೂರುತ್ತಿದ್ದರು. ಯಾರ ಜೊತೆಗೂ ಮಾತಾಡುತ್ತಿರಲಿಲ್ಲ. ಅದೇನೋ ಭೀತಿಯಲ್ಲಿ ಇರುತ್ತಿದ್ದಂತೆ ಚಿಂತೆ ಮಾಡುತ್ತಿದ್ದರು. ಅಪರೂಪಕ್ಕೊಮ್ಮೆ ಯಾರೋ ಒಬ್ಬ ಬಂದುಹೋಗುತ್ತಿದ್ದ, ಲೈಲಾ ಆತನನ್ನು ತನ್ನ ತಂದೆ ಎಂದು ಪರಿಚಯಿಸಿಕೊಟ್ಟಳು. ಎಲಾ ಇವ್ನ, ನೋಡಿದರೆ ತಾಯಿಗೆ ಇವನೇ ಮಗನಂಗೆ ಅವ್ನೆ. ಅದೆಂಗೆ ಗಂಡ ಆಗ್ತಾನೆ? ಎಂದು ನಾನು ಲೆಕ್ಕ ಹಾಕಿದ್ದೆ. ಈಗ ಇವನೇ ಇಡೀ ಕುಟುಂಬವನ್ನು ಮುಗಿಸಿದ್ದಾನೆಂಬ ಸುದ್ದಿ ಕೇಳಿ ನೋವಾಗುತ್ತದೆ. ಶೂಟಿಂಗ್ ಮುಗಿದ ನಂತರ ಅಪರ್ಣ ಚಿತ್ರಮಂದಿರದಲ್ಲಿ ಮೇಕಪ್ ಓಡುತ್ತಿತ್ತಲ್ಲ; ಆಗ ಇಡೀ ಕುಟುಂಬ ಸಮೇತ ಬಂದು ಸಿನೆಮಾ ನೋಡಿಕೊಂಡು ನನಗೊಂದು ಥ್ಯಾಂಕ್ಸ್ ಹೇಳಿ ಹೋಗಿದ್ದೇ ಕೊನೆ. ಆನಂತರ ಆಕೆ ಏನಾದಳು, ಇತ್ಯಾದಿ ಸುದ್ದಿಯೇ ಇಲ್ಲ. ಮತ್ತೆಂದೂ ಆಕೆಯನ್ನು ನೋಡಲಿಲ್ಲ. ಬಹುಶಃ ಮೆಕಪ್ ಆಕೆಯ ಎರಡನೇ ಚಿತ್ರವಿರಬೇಕು. ಅದಕ್ಕೂ ಮುನ್ನ ಹಿಂದಿಯಲ್ಲಿ ಯಾವುದೋ ಒಂದು ಚಿತ್ರವೊಂದಕ್ಕೆ ಆಕೆ ಹೀರೋಯಿನ್ನಾಗಿದ್ದಳಂತೆ.

ಇಷ್ಟು ಬಿಟ್ಟರೆ ಆಕೆಯ ಬಗ್ಗೆ ನನಗೇನೂ ಗೊತ್ತಿಲ್ಲ. ಪಾಪ ಆಕೆಗೆ ಹೀಗಾಗಬಾರದಿತ್ತು. ಆಕೆ ಮುಸ್ಲಿಂ ಅಂತ ಗೊತ್ತಾಗಿದ್ದು ಕೂಡ ಈಗಲೇ ನೋಡೀ...!

ಇದು ಲೈಲಾಖಾನ್ ಕುರಿತಂತೆ ಜಗ್ಗೇಶ್ ನೆನೆಸಿಕೊಂಡ ರೀತಿ.

ಜಗ್ಗೇಶ್ ಹೀರೋಯಿನುಗಳು ಯಾಕೆ ಹೀಗಾಗ್ತಾರೆ?

ಅದೇನು ಕರ್ಮವೋ ಗ್ರಹಚಾರವೋ ಅಥವಾ ಜಗ್ಗೇಶ್ ರಾಶಿಫಲವೇ ಸರಿಯಿಲ್ಲವೋ ಗೊತ್ತಿಲ್ಲ. ಯಾರೆಲ್ಲ ಚೀಪ್ ರೇಟಿನ ಮುಂಬಯಿ ಐಟಂಗಳನ್ನು ಗಾಂಧಿನಗರಕ್ಕೆ ಕರೆತಂದು ಜಗ್ಗೇಶ್ ಥೈ ತಕ ಕುಣಿದರೋ ಅಂಥ ನಟಿಯರೆಲ್ಲರದೂ ಇದೇ ಕತೆ. ಒಂದೋ ಮುಂಬಯಿ ಅಂಡರ್‌ವರ್ಲ್ಡ್ ನಂಟಿರುತ್ತದೆ ಅಥವಾ ಮುಸ್ಲಿಂ ಉಗ್ರ ಸಂಘಟನೆಗಳ ಲಿಂಕಿರುತ್ತದೆ. ಇದಕ್ಕೊಂದು ಪಕ್ಕಾ ಉದಾಹರಣೆ ಅಂತಿದ್ದರೆ ಅದು ದ್ರೋಣ ಮತ್ತು ನನ್ನಾಸೆಯ ಹೂವೆ ಚಿತ್ರದ ಹೀರೋಯಿನ್ ಮೋನಿಕಾ ಬೇಡಿ!

ಇವ್ಗೆ ಹತ್ತು ವರ್ಷದ ಹಿಂದೆ ಮುಂಬಯಿ ಸರಣಿ ಸ್ಫೋಟದ ಪ್ರಮುಖ ಆರೋಪಿ ಮತ್ತು ದಾವೂದ್ ಇಬ್ರಾಹಿಂನ ಬಲಗೈ ಬಂಟ ಅಬುಸಲೇಂ ಜೊತೆ ಮೋನಿಕಾ ಬೇಡಿ ಪೋರ್ಚುಗಲ್‌ನ ಲಿಸ್ಬನ್ ವಿಮಾನ ನಿಲ್ದಾಣದಲ್ಲಿ ಇಂಟರ್‌ಪೋಲ್ ಪೊಲೀಸರ ಕೈಗೆ ಸಿಕ್ಕಿಬಿದ್ದಳು. ಅಬು ಸಲೇಮ್ ಇವತ್ತಿಗೂ ಜೈಲಿನಲ್ಲಿದ್ದಾನೆ. ಸಾಕ್ಷ್ಯಾಧಾರಗಳಿಲ್ಲದೆ 2007 ರಲ್ಲಿ ಬಿಡುಗಡೆಯಾದ ಮೋನಿಕಾಳ ಸಿನಿಮಾ ಬದುಕೇ ನಾಶವಾಯಿತು.

ಟೆರರಿಸ್ಟ್ ಲಿಂಕಿದ್ದ ಮೋನಿಕಾ ಬೇಡಿಯನ್ನು ಜಗ್ಗೇಶ್ ತನ್ನ ಒಂದಲ್ಲ ಎರಡು ಚಿತ್ರಗಳಿಗೆ ಹೀರೋಯಿನ್ನಾಗಿಸಿದ್ದ. ಜಗ್ಗೇಶ್ ಜೊತೆ ಹಟೇಲ ಮತ್ತು ಬೇಡಕೃಷ್ಣ ರಂಗಿನಾಟ ಎಂಬ ಎರಡೂ ಚಿತ್ರಕ್ಕೆ ಹೀರೋಯಿನ್ನಾಗಿದ್ದ ಮತ್ತೊಬ್ಬ ಮುಂಬಯಿ ನಟಿ ಪಾಯಲ್ ಮಲಹೋತ್ರಾಳ ಹೆಸರು ಇನ್ನಾರೋ ಮುಂಬಯಿ ಘಾತಕಿಯ ಜೊತೆ ಕೇಳಿಬಂತು. ಈಗ ಲೈಲಾಖಾನ್‌ಳ ಸರದಿ. ಏಕೆ ಜಗ್ಗೇಶ್ ಮುಂಬಯಿ ಇಂಥ ಕ್ರಿಮಿನಲ್ಸ್ ನಂಟಿರುವ ಬೆಡಗಿಯರನ್ನೇ ಹುಡುಕಿಹುಡುಕಿ ತರುತ್ತಾರೆ?

ರೌಡಿಗಳು, ಡಾನ್‌ಗಳು, ಕ್ರಿಮಿನಲ್ಸ್, ದರೋಡೆದಾಟ, ಸ್ಟ್ರೀಟ್ ಫೈಟಿಂಗ್ ರೌಡಿಸಂ ಇತ್ಯಾದಿಗೆ ಕೈಯಿಟ್ಟು ದಿನಾ ಕೋರ್ಟು, ಪೊಲೀಸ್ ಸ್ಟೇಷನ್ ದರ್ಶನ ಕಾಣುವ ಜಗ್ಗೇಶ್ ಹುಚ್ಚಾಟವೇ ಅವರನ್ನು ಮುಂಬಯಿ ಸಹವಾಸದಲ್ಲಿ ಕೈಚಾಚುವಂತೆ ಮಾಡಿರಬೇಕು. ಇಲ್ಲದಿದ್ದರೆ ಏಕೆ ಜಗ್ಗೇಶ್ ಹೀರೋಯಿನುಗಳಿಗಷ್ಟೇ ಈ ಪಾಡು?

ಜಂಗಮ ಮಠ ನುಂಗುತ್ತಿದ್ದಾನೆ ಬಂಟರ ಭಂಡ!!

- ನಹುಷ


ಅದೊಂದು ಜಂಗಮ ಮಠ; ಲಿಂಗಾಯತರ ಪುರಾತನ ಧಾರ್ಮಿಕ ಸಂಸ್ಥಾನ. ಆ ಮಠ ವೀರಶೈವರು ತೀರಾ ವಿರಳವಾಗಿರುವ ಕರಾವಳಿಯ ಮಂಗಳೂರಿಂದ ಹದಿನೈದು ಕಿ.ಮೀ. ದೂರದ ಗುರುಪುರ ಎಂಬ ಹಳ್ಳಿಯಲ್ಲಿದೆ. ಗುರುಪುರದ ನಾಲ್ಕೈದು ಲಿಂಗಾಯತ ಕುಟುಂಬದವರು ಮತ್ತು ಹತ್ತಿರದ ಏಟ್ನ ಮತ್ತಿತರೆಡೆಯ ಲಿಂಗಾಯತರಷ್ಟೇ ಅಲ್ಲ, ಸ್ಥಳೀಯ ಹಿಂದೂ-ಮುಸ್ಲಿಮ್-ಕ್ರಿಸ್ಚಿಯನ್ ಸಮುದಾಯದವರೂ ಗೌರವಾದರದಿಂದ ಕಾಣುವ ಮಠವಿದು.

ಗುರುಪುರ ಜಂಗಮ ಮಠಕ್ಕೆ ಸುಮಾರು ನಾಲ್ಕು ನೂರು ಎಕರೆ ಜಮೀನು, ಅಪಾರ ಧನ-ಕನಕ-ಆಸ್ತಿ-ಪಾಸ್ತಿ ಇದೆ. ಗುರುಪುರದಲ್ಲಷ್ಟೇ ಅಲ್ಲ, ಮಂಗಳೂರು-ಕೊಡಗು-ಉಡುಪಿಯಲ್ಲೂ ಈ ಮಠದ ಜಾಗ-ಆಸ್ತಿಯಿದೆ. ಇಂಥ ಸಮೃದ್ಧ ಸಂಪತ್ತಿನ ಮಠದಲ್ಲಿ ಪೀಠಾಧಿಪತಿ ಆಗಿದ್ದವನು ಶಿವಪ್ರಕಾಶ್ ಎಂಬ ಸ್ವಾಮಿ. ಈ ಕಾವಿ ಜೀವಿ ಕಳೆದ ಏಪ್ರಿಲ್‌ನಲ್ಲಿ ದೇಹತ್ಯಾಗ ಮಾಡಿದರು. ಸಾಯುವ ಮುಂಚಿನ ಆರೆಂಟು ವರ್ಷ ಅನಾರೋಗ್ಯವೂ ಆತನನ್ನು ಬಾಧಿಸಿತ್ತು. ಲೌಕಿಕ ಲಾಲಸೆಯ ಸದ್ರಿ ಸ್ವಾಮೀಜಿಯ ಆ ಅಸಹಾಯಕ-ಅರಿವುಗೇಡಿ ದಿನಗಳಲ್ಲಿ ಗುರುಪುರದ ಗೋಲ್‌ಮಾಲ್ ಪುಢಾರಿ ದುರ್ಗಾಪ್ರಸಾದ್ ಶೆಟ್ಟಿ ಯಾನೆ ವರ್ಧಮಾನ ಶೆಟ್ಟಿ ಕಳ್ಳ ಬೆಕ್ಕಿನಂತೆ ಮಠದೊಳಗೆ ಓಡಾಡಿಕೊಂಡಿದ್ದ. ಶಿವಪ್ರಕಾಶ್ ಸ್ವಾಮಿಗೆ ಅದೇನು ಮೋಡಿ ಮಾಡಿದ್ದನೋ? ನೋಡುನೋಡುತ್ತಿದ್ದಂತೆ ಈ ಧೋಕಾಬಾಚಿ ದುರ್ಗಾಪ್ರಸಾದ್ ಮಠದ ದಿವಾಣನಂತಾಗಿ ಹೋದ! ಜಂಗಮ ಮಠದ ಅಷ್ಟೂ ಧರ್ಮ-ಕರ್ಮ, ಆಗು-ಹೋಗುಗಳನ್ನು ಈ ಬಂಟರ ಭಂಡನೇ ನಿಭಾಯಿಸಲು ಶುರುವಿಟ್ಟುಕೊಂಡ!!

ಶಿವಪ್ರಕಾಶ ಸ್ವಾಮಿಯ ದೌರ್ಬಲ್ಯಗಳನ್ನೇ ಬಂಡವಾಳ ಮಾಡಿಕೊಂಡು ಮಠವನ್ನು ತನ್ನ ರಿಯಲ್ ಎಸ್ಟೇಟ್ ದಂಧೆಯ ಅಡ್ಡೆಯಾಗಿಸಿಕೊಂಡಿದ್ದ ದುರ್ಗಾಪ್ರಸಾದ್ ಮಠದ ಭೂಮಿ-ಭಂಡಾರವನ್ನೆಲ್ಲ ಮಾವನ ಮನೆಯಿಂದ ಬಂದ ಬಳುವಳಿಯಂತೆ ನಾಜೂಕಾಗಿ ಅನುಭವಿಸಹತ್ತಿದ. ಜಂಗಮ ಮಠದ ಶಿವಪ್ರಕಾಶ ಸ್ವಾಮಿಗೂ ಬಂಟರ ಭಾನ್ಗಡಿ ಭೂಪ ದುರ್ಗಾಪ್ರಸಾದ್ ಶೆಟ್ಟಿಗೂ ಎತ್ತಣಿಂದೆತ್ತಣ ಸಂಬಂಧ ಎಂಬುದೇ ಕೊನೆವರೆಗೂ ನಿಗೂಢವಾಗೇ ಉಳಿದಿತ್ತು. ಆದರೆ ಯಾವಾಗ ಸ್ವಾಮಿ ಶಿವನ ಪಾದ ಸೇರಿದನೋ, ಆಗ ದುರ್ಗಾಪ್ರಸಾದ ದಗಾಕೋರ ಮಸಲತ್ತು, ಹಿಕಮತ್ತುಗಳು ಒಂದೊಂದಾಗಿ ಬಹಿರಂಗವಾಗ ತೊಡಗಿತು. 'ಗುತ್ತಿನ ಗತ್ತಿನ' ದುರ್ಗಾಪ್ರಸಾದ್ ತುಂಬ ನಾಜೂಕಾಗಿ ಸ್ವಾಮೀಜಿ ಸಂಗಮಾಡಿದ್ದೇ ಜಂಗಮ ಮಠದ ಕೋಟ್ಯಂತರ ರೂಪಾಯಿ ಜಮೀನಿನ ಆಕರ್ಷಣೆಯಿಂದಾಗಿತ್ತೆಂಬುದು ಸಾಕ್ಷ್ಯಾಧಾರ ಸಮೇತ ಸಾಬೀತಾಗಿಹೋಯ್ತು!

ದುರ್ಗಾಪ್ರಸಾದ್ ಯಾನೆ ವರ್ಧಮಾನ ಶೆಟ್ಟಿ ತನ್ನ ಅಕ್ರಮ ಸಾಮ್ರಾಜ್ಯ ವಿಸ್ತರಿಸುವ ಇರಾದೆಯಿಂದ ಗುರುಪುರದ ಜಂಗಮಮಠದ ಭೂಮಿ ಇಂಚಿಂಚಾಗಿ ಕಬಳಿಸುವ ಸ್ಕೆಚ್ ಹಾಕಿಕೊಂಡೇ ಆ ಮಠದೊಳಗೆ ಕಾಲಿಟ್ಟದ್ದ! ಶಿವಪ್ರಕಾಶ್ ಸ್ವಾಮಿಯನ್ನು ಯಾಮಾರಿಸಿ ಮಠದ ಭೂಮಿಗೆ ಸಂಬಂಧಿಸಿದ ದಾಖಲೆ-ಪತ್ರಗಳನ್ನು ತನ್ನಲ್ಲಿಟ್ಟುಕೊಂಡಿದ್ದ. ಶಿವಪ್ರಕಾಶ ಸ್ವಾಮಿ ಮೇಲೆ ದುರ್ಗಾಪ್ರಸಾದ್ ಶೆಟ್ಟಿ ಅದೆಂಥ ಹಿಡಿತ ಸಾಧಿಸಿದ್ದನೆಂದರೆ, ಆತ ಹೋದಲ್ಲೆಲ್ಲ ಮಠದ ಅಪಾರ ಬೆಲೆಬಾಳುವ ಭೂಮಿ ಬಿಕರಿ ಮಾಡಲು ಅನುಮತಿ ನೀಡುತ್ತ ಹೋದರು. ಸ್ವಾಮೀಜಿಯ ಸುಖಭೋಗಕ್ಕೆ ವ್ಯವಸ್ಥೆ ಮಾಡುತ್ತ ಆತ ಹೆಚ್ಚು-ಕಮ್ಮಿ ಒಂದು ನೂರು ಎಕರೆ ಜಮೀನು ಮಾರಿಬಿಟ್ಟಿದ್ದ. ಮಠದ ಜಾಗದಲ್ಲಿ ಅನಾದಿಕಾಲದಿಂದ ಸಣ್ಣ ಸೂರು ಕಟ್ಟಿಕೊಂಡು ವಾಸಿಸುತ್ತಿದ್ದ ಬುಡಕಟ್ಟು ಜನರು-ದಲಿತರು ಈತನ ಪಾಳೆಗಾರಿ ಪೊಗರಿಗೆ ನಲುಗಿಹೋದರು. ಅವರನ್ನೆಲ್ಲ ಬೆದರಿಸಿಯೇ ಒಕ್ಕಲೆಬ್ಬಿಸಿದ ದುರ್ಗಾ ಆ ಭೂಮಿ ಮಾರಾಟ ಮಾಡಿದ್ದಾನೆ.

ದುರ್ಗಾನ ಅಕ್ರಮ-ಅನ್ಯಾಯದ ಬಲವಂತ ಒಕ್ಕಲೆಬ್ಬಿಸುವಿಕೆ ವಿರುದ್ಧ ಗುರುಪುರದಲ್ಲಿ ಸಣ್ಣ-ಪುಟ್ಟ


ನಿಧನರಾದ ಶಿವಪ್ರಕಾಶ ಸ್ವಾಮಿಗಳು


ದುರ್ಗಾಪ್ರಸಾದ್ ಶೆಟ್ಟಿ (ವರ್ಧಮಾನ ಶೆಟ್ಟಿ)

ದುರ್ಗಾಪ್ರಸಾದ್ ಯಾನೆ ವರ್ಧಮಾನ ಶೆಟ್ಟಿ ತನ್ನ ಅಕ್ರಮ ಸಾಮ್ರಾಜ್ಯ ವಿಸ್ತರಿಸುವ ಇರಾದೆಯಿಂದ ಗುರುಪುರದ ಜಂಗಮಮಠದ ಭೂಮಿ ಇಂಚಿಂಚಾಗಿ ಕಬಳಿಸುವ ಸ್ಕೆಚ್ ಹಾಕಿಕೊಂಡೇ ಆ ಮಠದೊಳಗೆ ಕಾಲಿಟ್ಟಿದ್ದ! ಶಿವಪ್ರಕಾಶ್ ಸ್ವಾಮಿಯನ್ನು ಯಾಮಾರಿಸಿ ಮಠದ ಭೂಮಿಗೆ ಸಂಬಂಧಿಸಿದ ದಾಖಲೆ-ಪತ್ರಗಳನ್ನು ತನ್ನಲ್ಲಿಟ್ಟುಕೊಂಡಿದ್ದ. ಶಿವಪ್ರಕಾಶ ಸ್ವಾಮಿ ಮೇಲೆ ದುರ್ಗಾಪ್ರಸಾದ್ ಶೆಟ್ಟಿ ಅದೆಂಥ ಹಿಡಿತ ಸಾಧಿಸಿದ್ದನೆಂದರೆ, ಆತ ಹೋದಲ್ಲೆಲ್ಲ ಮಠದ ಅಪಾರ ಬೆಲೆಬಾಳುವ ಭೂಮಿ ಬಿಕರಿ ಮಾಡಲು ಅನುಮತಿ ನೀಡುತ್ತ ಹೋದರು. ಸ್ವಾಮೀಜಿಯ ಸುಖಭೋಗಕ್ಕೆ ವ್ಯವಸ್ಥೆ ಮಾಡುತ್ತ ಆತ ಹೆಚ್ಚು-ಕಮ್ಮಿ ಒಂದು ನೂರು ಎಕರೆ ಜಮೀನು ಮಾರಿಬಿಟ್ಟಿದ್ದ. ಮಠದ ಜಾಗದಲ್ಲಿ ಅನಾದಿಕಾಲದಿಂದ ಸಣ್ಣ ಸೂರು ಕಟ್ಟಿಕೊಂಡು ವಾಸಿಸುತ್ತಿದ್ದ ಬುಡಕಟ್ಟು ಜನರು-ದಲಿತರು ಈತನ ಪಾಳೆಗಾರಿ ಪೊಗರಿಗೆ ನಲುಗಿಹೋದರು. ಅವರನ್ನೆಲ್ಲ ಬೆದರಿಸಿಯೇ ಒಕ್ಕಲೆಬ್ಬಿಸಿದ ದುರ್ಗಾ ಆ ಭೂಮಿ ಮಾರಾಟ ಮಾಡಿದ್ದಾನೆ.

ಭೂದಾಹದ ವೀಲುನಾಮೆ!!

ಲಿಂಗಾಯತರ ಗುರುಪುರ ಮಠದ ಯಜಮಾನನಂತಾಡುತ್ತಿದ್ದ ಪ್ರಳಯಾಂತಕ 'ಡಿ' ಶೆಟ್ಟಿಯದು ಒಂದೇ ಗುರಿಯಾಗಿತ್ತು, ಹೇಗಾದರೂ ಮಾಡಿ ಮಠದ ಕೋಟ್ಯಂತರ ರೂಗಳ ಸುಮಾರು ಇನ್ನೂರು ಎಕರೆ ಭೂಮಿಯನ್ನು ರಿಯಲ್ ಎಸ್ಟೇಟ್ ಬಿಸಿನೆಸ್‌ನಿಂದ ಬಿಕರಿ ಮಾಡಿ, ಚರಸಂಪತ್ತು ಹೊಡೆದು ಹಣವಂತನಾಗುವ ದುರಾಸೆಗೆ ಆತ ಬಿದ್ದಿದ್ದ. ಹೀಗಾಗಿ ಆತ ಒಂದಲ್ಲ, ಎರಡೆರಡು ವೀಲುನಾಮೆ ತನ್ನ ಭೂದಾಹ ತಣಿಸಿಕೊಳ್ಳಲು ಅನುಕೂಲವಾಗುವ ಥರವೇ ಶಿವಪ್ರಕಾಶ್ ಸ್ವಾಮಿಯನ್ನು ಹೆದರಿಸಿ-ಬೆದರಿಸಿ, ರಮಿಸಿ, ಆತನಿಗೆ ಬೇಕುಬೇಕಾದ್ದು ಸಪ್ಲೈ ಮಾಡಿ ಪಳಗಿಸಿಕೊಂಡು ಬರೆಸಿಕೊಂಡಿದ್ದ. ಆದರೆ ಕಾನೂನುಪ್ರಕಾರ ಆ ವೀಲುನಾಮೆ ಬೋಗಸ್.

ಯಾಕೆಂದರೆ, ಯಾರದೇ ಅಧೀನದಲ್ಲಿ ಇಲ್ಲದ ಗುರುಪುರ ಜಂಗಮ ಮಠದ ಚರ-ಸ್ಥಿರ ಆಸ್ತಿಯನ್ನು ಸ್ವಾಮಿಯೊಬ್ಬ ತನ್ನ ಜೀವಿತ ಕಾಲದಲ್ಲಿ ತಾನೇ ರಚಿಸಿದ ಸಮಿತಿಗೆ ಪರಭಾರೆ ಮಾಡುವಂತೆಯೇ ಇಲ್ಲ. ಒಂದೊಮ್ಮೆ ಹಾಗೇನಾದರೂ ಮಾಡಿದರೂ ಅದು ಸುಪ್ರೀಂಕೋರ್ಟಿನ ತೀರ್ಪೊಂದರ ಪ್ರಕಾರ ಊರ್ಜಿತವೂ ಅಲ್ಲ. ತಮಿಳುನಾಡಿನ ಮಠ ಒಂದಕ್ಕೆ ಸಂಬಂಧಿಸಿದಂತೆ ಇಂಥದೊಂದು ತೀರ್ಪು ಸುಪ್ರೀಂಕೋರ್ಟ್ ಕೊಟ್ಟಿದೆ. ಆದರೂ ಈ ಹೆಡ್ಡ 'ಡಿ' ಶೆಟ್ಟಿ ಜಂಗಮ ಮಠದ ಸ್ವಾಮಿಯನ್ನು ಮರುಳು ಮಾಡಿ ಮಠದ ಆಸ್ತಿ ಸ್ವಾಹಾ ಮಾಡುವ ವೀಲುನಾಮೆ ಬರೆಸಿಕೊಂಡಿದ್ದಾನೆ. ಆ ಎಡವಟ್ಟು ಸ್ವಾಮಿಯೂ ತನ್ನ ಸುಖ ಲಾಲಸೆಗಾಗಿ 'ಡಿ' ಶೆಟ್ಟಿಯ ಕೈಗೊಂಬೆಯಂತಾಗಿಹೋಗಿದ್ದ.

ಈ ಅಕ್ರಮ ವೀಲುನಾಮೆಗಳಲ್ಲಿ ಆರು ಮಂದಿಯ ಹೆಸರು ಬರೆದಿದ್ದರು. ಅದರಲ್ಲಿ ಮೂವರು ಲಿಂಗಾಯತರು. ದುರ್ಗಾಪ್ರಸಾದ ಮತ್ತಿತರ ಇಬ್ಬರು ಸ್ಥಳೀಯರು. ವೀಲುನಾಮೆಯ ನಿಯಮಕ್ಕಾಗಿ ಅವರೆಲ್ಲರ ಹೆಸರು ಬರೆಯಲಾಗಿತ್ತು. ಅದರಲ್ಲಿ ಹೆಸರಿರುವ 'ಡಿ' ಶೆಟ್ಟಿ ಬಿಟ್ಟು ಉಳಿದ ಐವರಿಗೆ ತಮ್ಮ ಹೆಸರಲ್ಲಿ ಅಂಥದೊಂದು ಮಠದ [illegible] ಆಗುವ ವೀಲುನಾಮೆ ಇದೆ ಎಂಬುದೇ ಗೊತ್ತಿರಲಿಲ್ಲ.

ಮರಿಸ್ವಾಮಿಯನ್ನೇ ಓಡಿಸಿದ!

ಗುರುಪುರದ ಜಂಗಮ ಮಠದ ಹಿರಿಯ ಸ್ವಾಮಿ ಶಿವಪ್ರಕಾಶ್ ಪೀಠದಲ್ಲಿರುವಾಗಲೇ ಮುಲ್ಕಿ ಸಮೀಪದ ಕಾರ್ನಾಡಿನ ಗಣೇಶ್ ಎಂಬ ಲಿಂಗಾಯತ ಬಾಲಕನಿಗೆ ಮರಿ ಸ್ವಾಮಿಯಾಗಿ ದೀಕ್ಷೆ ಕೊಡಲಾಗಿತ್ತು. ಇದರಿಂದ ಹಿರಿಯ ಸ್ವಾಮಿಯನ್ನು ತನ್ನ ಹಿಡಿತಕ್ಕೊಳಪಡಿಸಿಕೊಂಡು ಕಾರುಬಾರು ಮಾಡುತ್ತಿದ್ದ ಅನಧಿಕೃತ ಪಾರುಪತ್ಯಗಾರ ದುರ್ಗಾಪ್ರಸಾದ್ ಶೆಟ್ಟಿ ತನ್ನ ಮಠ ನುಂಗುವ ಸಂಚು ಬುಡಮೇಲಾಗುವ ಭೀತಿಗೆ ಬಿದ್ದಿದ್ದ. ಆತ ತಕ್ಷಣಕ್ಕೆ ಸ್ವಾಮಿಯಿಂದ ಒಂದು ವೀಲುನಾಮೆ ಬರೆಸಿಕೊಂಡ. ಮಠದಲ್ಲಿ ತನ್ನದೇ ಅಂತಿಮ ವಾಣಿ ಎಂದು ಆ ವೀಲುನಾಮೆಯಲ್ಲಿ ಒಕ್ಕಣಿಕೆ ತುಂಬಿದ್ದ.


ಇದರಿಂದ ಆತನಿಗೆ ಆತಂಕ ನಿವಾರಣೆ ಆಗಲಿಲ್ಲ. ಮುಂದೊಂದು ದಿನ ಆ ಬಾಲಕ ಗಣೇಶ್ ಯಾನೆ ವಿರುಪಾಕ್ಷ ಸ್ವಾಮಿ ತನ್ನ ಮಾತು ಕೇಳದಿದ್ದರೆ ಫಜೀತಿ ಆಗುತ್ತದೆಂದು 'ಡಿ' ಶೆಟ್ಟಿ ದೂ(ರು)ರಾಲೋಚನೆಗೆ ಬಿದ್ದ. ಕಿರಿಯ ಸ್ವಾಮಿಯನ್ನು ಓಡಿಸುವ ಸ್ಕೆಚ್ ಹಾಕಿದ. ಗುರುಪುರದ ಮಠದ ಶಾಲೆ-ಹಿಂದೂ ಹಿರಿಯ ಪ್ರಾಥಮಿಕ ಶಾಲೆಗೆ ಹೋಗುತ್ತಿದ್ದ ಗಣೇಶನಿಗೆ ತನ್ನ ಪುಂಡ ಪಟಾಲಮ್‌ನಿಂದ ಸಮಾ ತದುಕಿಸಿದ. ಕಂಗಾಲಾದ ಬಾಲಕ ಶಾಲೆ ಬಿಟ್ಟೇ ಹೋದ. ಮಠದತ್ತಲೂ ತಲೆ ಹಾಕಲಿಲ್ಲ. ಮಠಕ್ಕೆ ಸೇರದ ಕೆಲವರ ಕಿತಾಪತಿಯಿಂದ ತಮ್ಮ ಮಗ ಮಠ ತೊರೆಯಬೇಕಾಯ್ತು ಎಂದು ಗಣೇಶನ ಪಾಲಕರು ಹೇಳಿದ್ದರು.

ಒಟ್ಟಿನಲ್ಲಿ ಹೀನ ಸುಳಿಯ ದುರ್ಗಾನ ಉದ್ದೇಶ ಈಡೇರಿತ್ತು. ಆ ಬಳಿಕ ಆತ ಸ್ವಾಮಿಯಿಂದ ಮತ್ತೊಂದು ವೀಲುನಾಮೆ ಬರೆಯಿಸಿಕೊಂಡ. ಅದರಲ್ಲಿನ ಒಕ್ಕಣೆಯಲ್ಲಿ 'ಡಿ' ಶೆಟ್ಟಿಗೆ ಗುರುಪುರದ ಮಠ, ಅದರಅನುಯಾಯಿ ಲಿಂಗಾಯತರ ಮೇಲೆ ಪ್ರಭುತ್ವ ಬರುವಂತಿತ್ತು.

ವಿರೋಧವೂ ವ್ಯಕ್ತವಾಗಿತ್ತು. ಅದೆಲ್ಲ ಆತ ವ್ಯವಸ್ಥಿತ ಸಾಮ-ಭೇದ-ದಂಡ ಪ್ರಯೋಗದಿಂದ ಹತ್ತಿಕ್ಕಿದ. ಆತನ ದಾದಾಗಿರಿಗೆ ಅಂಜಿದ ಅಸಹಾಯಕ ದಲಿತರು-ಗುಡ್ಡಗಾಡು ಮಂದಿ ಬಾಯಿಮುಚ್ಚಿ ಕೊಂಡು ಜಾಗ ಖಾಲಿ ಮಾಡಬೇಕಾಯ್ತು. ಒಂದೆರಡು ಲಿಂಗಾಯತ ಕುಟುಂಬಕ್ಕೆ ಚೂರು-ಪಾರು ಜಾಗ ಬಿಟ್ಟು ಕೊಟ್ಟು ಅವರ್ಯಾರೂ ಧ್ವನಿ ಎತ್ತದಂತೆ ಮಾಡಿದ ದುರ್ಗಾ ಕೆಲವರಿಗೆ ಕೋರ್ಟು ಕೇಸು, ಹೊಡಪೆಟ್ಟುಗಳ ಭಯ ಮೂಡಿಸಿ ಜಾಗ ವಶಪಡಿಸಿಕೊಂಡಿದ್ದ. ಸ್ವಲ್ಪ ಜೋರಿನವರಿಗೆ ಬಿಡಿಕಾಸು ಬೀಸಾಗಿ ಕಬ್ಜಾ ಪಡೆದುಕೊಂಡಿದ್ದ. ಈ ಜಾಗವನ್ನೆಲ್ಲ ಸ್ವಾಮಿಯ ಸಹಕಾರದಿಂದಲೇ ದುರ್ಗಾ ರಿಯಲ್ ಎಸ್ಟೇಟ್ ದಂಧೆ ಟ್ರಿಕ್ಕುಗಳ ಬಳಸಿ ಮಾರಾಟ ಮಾಡಿದ್ದಾನೆ. ಈ ಜಮೀನು ಮಾರಾಟದಿಂದ ಮಠವೇನೂ ಉದ್ಧಾರ ಆಗಲಿಲ್ಲ; ಸ್ವಾಮೀಜಿಗೆ ಊಟ-ತಿಂಡಿ, ಒಂದು ಮಾರುತಿ ಬಿಟ್ಟರೆ ಮತ್ತೇನೂ ಭಾಗ್ಯ ಬರಲಿಲ್ಲ. ಆದರೆ ಖದೀಮ ದುರ್ಗಾಪ್ರಸಾದ್ ಮಾತ್ರ ಕಳ್ಳ ಕುಬೇರನಂತಾಗಿ ಹೋದ.

ಶಿವಪ್ರಕಾಶ್ ಸ್ವಾಮಿ ನಿಧನರಾದಾಗ ದುರ್ಗಾಪ್ರಸಾದ್ ಶೆಟ್ಟಿ ನಡೆದುಕೊಂಡ ರೀತಿ-ನೀತಿ, ಆಡಿದ ಮಾತುಗಳು ಆತನ ಬಗ್ಗೆ ಊರವರಿಗೆ, ಲಿಂಗಾಯತ ಮುಖಂಡರಿಗೆ ತರತರದ ಸಂಶಯ ಮೂಡಿಸಿತ್ತು. ಸ್ವಾಮಿ ತೀರಿಕೊಂಡಾಗ ಶಿವಶರಣರು ಹನ್ನೊಂದನೇ ದಿನ ಉತ್ತರ ಕ್ರಿಯೆ ನಡೆಸಿದ್ದರು. ಇದಕ್ಕೆ ಪ್ರತಿಯಾಗಿ ದುರ್ಗಾ ತನ್ನ "ಶೆಟ್ಟಿ ಬಳಗ"ದಿಂದ 14 ನೇ ದಿನ ಉತ್ತರ ಕ್ರಿಯೆ ಮಾಡಿಸಿದ್ದಾನೆ. ತನ್ನ ಮಾತಿನಂತೆ ನಡೆಯುವಂತೆ ಸ್ಥಳೀಯ ಲಿಂಗಾಯತರ ಒಂದೆರಡು ಕುಟುಂಬಕ್ಕೆ ಧಮಕಿಯೂ ಹಾಕಿದ್ದಾನೆ. ಇದರಿಂದ ಊರಿನ ಸಕಲ ಜಾತಿ-ಧರ್ಮದವರಿಗೂ ದುರ್ಗಾನ ಒಗೆಗಿದ್ದ ಅನುಮಾನ ಇನ್ನಷ್ಟು ಹೆಚ್ಚಾಗಿದೆ; ಮಠದಲ್ಲಿ ಇಷ್ಟು ದಿನ ಸ್ವಾಮಿಯನ್ನು ಮುಂದಿಟ್ಟುಕೊಂಡು ದುರ್ಗಾಪ್ರಸಾದ್ ದುರಾಡಳಿತ ನಡೆಸಿದ್ದು ಖಾತ್ರಿಯಾಗಿದೆ. ಮುಂದೆ ಮಠವನ್ನು ದುರ್ಗಾ ತನ್ನ ಪ್ರೈವೇಟ್ ಲಿಮಿಟೆಡ್ ಕಂಪನಿ ಮಾಡಿಕೊಳ್ಳಲು ರಹಸ್ಯ ಕಾರ್ಯಾಚರಣೆ ನಡೆಸುತ್ತಿರುವುದೂ ಬಹಿರಂಗವಾಗಿದೆ. ಮಠಕ್ಕೆ ತನ್ನ ಆಜ್ಞಾನುಧಾರಿ 'ವಟು' ಒಬ್ಬನನ್ನು ಉತ್ತರಾಧಿಕಾರಿಯಾಗಿ ಮಾಡಿಕೊಂಡು ಮಠದ ನೆಲ ರಿಯಲ್ ಎಸ್ಟೇಟ್ ಬಿಸಿನೆಸ್‌ನಿಂದ ಮಾರಾಟ ಮಾಡಲು ದೂರ್ಗಾ ದೂ(ರು)ರಾಲೋಚನೆ ಮಾಡಿದ್ದ.

ಇದರಿಂದ ಕೆರಳಿದ ಬೆಂಗಳೂರು ಮೂಲದ ಸತೀಶ್‌ಕುಮಾರ್ ಎಂಬ ಲಿಂಗಾಯತ ತರುಣ ಮತ್ತು ಗುರುಪುರ ಸುತ್ತಲಿನ ಪ್ರಮುಖರು ದುರ್ಗಾನ ಹಿಕಮತ್ತುಗಳ ವಿರುದ್ಧ ತಿರುಗಿಬಿದ್ದಿದ್ದಾರೆ. ಮಠದ ವ್ಯವಹಾರದಿಂದ ಆತನನ್ನು ದೂರವಿಟ್ಟು ಇನ್ನಷ್ಟು ಮಠದ ಭೂಮಿ ಮಾರಾಟವಾಗದಂತೆ ನೋಡಿಕೊಳ್ಳಲು ಮಠದ ಒರಿಜಿನಲ್ ಅನುಯಾಯಿಗಳು ಪ್ಲಾನ್‌ವೊಂದನ್ನು ಹೆಣೆದಿದ್ದಾರೆ. ಅದರಂತೆ ಜಂಗಮ ಸಂಕುಲದ ವಟುವೊಬ್ಬನಿಗೆ ಮಠದ ಉತ್ತರಾಧಿಕಾರಿಯಾಗಿ ದೀಕ್ಷೆ ಕೊಡಲು ಸಿದ್ಧವಾಗಿದ್ದಾರೆ. ತನ್ನ ವಿರೋಧಿ ಪಡೆಯ 'ಹೋರಾಟ'ದಿಂದ ದುರ್ಗಾ ದಿಕ್ಕೆಟ್ಟುಹೋದ. ತಾನು ಸ್ವಾಮೀಜಿ ಜೀವಂತವಾಗಿದ್ದಾಗ ಬಲವಂತದಿಂದ ಬರೆಸಿಕೊಂಡಿಟ್ಟುಕೊಂಡಿದ್ದ ಒಂದಲ್ಲ, ಎರಡು ವೀಲುನಾಮೆ ಆಧಾರದಿಂದ ಎದುರಾಳಿಗಳ ಚಟುವಟಿಕೆಗೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾನೆ.



ಗುರುಪುರದ ಮಠ ಮತ್ತು ಶ್ರೀಗುರು ಚರಮೂರ್ತಿ ಶ್ರೀ ಚೆನ್ನಬಸಪ್ಪ ಸನ್ಯಾಸಿಗಳು

ಜೂನ್‌ನಲ್ಲಿ ದುರ್ಗಾನನ್ನು ಮಠದಿಂದ ದೂರಮಾಡುವ ಉದ್ದೇಶದಿಂದ ಸತೀಶ್‌ಕುಮಾರ್ ಬಳಗ ನಡೆಸಿದ ಸಭೆಯಲ್ಲಿ ದುರ್ಗಾ ಈ ತಡೆಯಾಜ್ಞೆ ಹಿಡಿಕೊಂಡು ಆರ್ಭಟಿಸಿದ್ದಾನೆ. ನನ್ನ ಹೊರತು ಈ ಮಠದಲ್ಲಿ ಯಾವುದೇ ವ್ಯವಹಾರ ನಡೆಯದು... ನಾನು ನೇಮಿಸುವ ಸ್ವಾಮಿಯೇ ಭವಿಷ್ಯತ್ತಿನಲ್ಲಿ ಮಠಾಧಿಪತಿ ಆಗಲಿದ್ದಾರೆ... ಶಿವಪ್ರಕಾಶ್ ಸ್ವಾಮಿಯ ಇಚ್ಛೆಯೂ ಇದೇ ಆಗಿತ್ತು... ನನಗೆ ಅವರು ಅಂಥದೊಂದು ಅಧಿಕಾರ ಕೊಟ್ಟು ಹೋಗಿ ದ್ದಾರೆ... ನೀವೇನಿದ್ದರೂ ನಾನು [illegible]..." ಎಂದು ಸಭೆಯಲ್ಲಿ ಸೇರಿದ್ದ ಲಿಂಗಾಯತರಿಗೆ ಪಟಾಯಿಸಿ ದ್ದಾನೆ.

ಆದರೆ ಬೇರೆ-ಬೇರೆ ಕಡೆಯಿಂದ ಬಂದಿದ್ದ ಲಿಂಗಾಯತರು ಮತ್ತು ದುರ್ಗಾನ ಅಸಲಿಯತ್ತ ಅರಿತಿರುವ ಊರಿನವರು ಒಟ್ಟಾಗಿ ಆತನಿಗೆ ಸೆಡ್ಡು ಹೊಡೆದಿದ್ದಾರೆ. "ನೀನು ತಂದಿರುವ ಇಂಜಂಕ್ಷನ್ ಅನ್ನು ನ್ಯಾಯಾಲಯದಲ್ಲೇ ಎದುರಿಸ್ತೇವೆ... ನಿನ್ನ ಬಣ್ಣ ಬಯಲಾಗಿಸ್ತೇವೆ... ನೀನು ಮಠಕ್ಕೆ ಅನ್ಯಾಯ ಮಾಡಿದ್ದೀಯಾ.... ಮಠದ ಜಾಗ ಕಬಳಿಸಿದ್ದೀಯಾ..... ನಿನ್ನ ಅವ್ಯವಹಾರದ ದಾಖಲೆ ನಮ್ಮಲ್ಲೂ ಇದೆ....." ಎಂದು ತಿರುಗೇಟು ಕೊಟ್ಟಿದ್ದಾರೆ. ಇದರಿಂದ ಈಯಪ್ಪ ಬೆಪ್ಪನಂತಾಗಿ ತಬ್ಬಿಬ್ಬು ಗೊಂಡಿದ್ದಾನೆ. ತನಗೆ ಜಂಗಮ ಸಂಸ್ಥಾನ ದಲ್ಲಿ ಎದುರಾಳಿಗಳು ಹುಟ್ಟಿಕೊಂಡರಲ್ಲ ಎಂದು ಬೆದರಿ ಓಡಿದ್ದಾನೆ! ಜಂಗಮ ಮಠದಲ್ಲಿ ನುಸುಳಿ ಅನಾಚಾರ ಮಾಡುತ್ತಿರುವ ದುರ್ಗಾಶೆಟ್ಟಿಗೆ ಆತನ ಸ್ವಜಾತಿ ಬಂಧುಗಳಾದ ಬಂಟರೇ ಕ್ಯಾಕರಿಸಿ ಉಗಿದ್ದಾರೆ. ಆದರೆ ಈತ "ಶೆಟ್ಟಿ ಗುತ್ತು ಬರ್ಕೆ"ಯವರನ್ನು ಎದುರು ಹಾಕಿಕೊಳ್ಳುವ ಧೈರ್ಯವಿಲ್ಲದೆ ಕೇಸನ್ನು ಮಾತ್ರ ಬಂಟೇತರರ ಮೇಲೆ ಹಾಕಿದ್ದಾನೆ. ಸ್ವಜಾತಿ ಬಂಟರ ಸಂಸ್ಥಾನವನ್ನಾಗಿ ಗುರುಪುರದ ಜಾಂಗಮ ಮಠ ಪರಿವರ್ತಿಸುವ ಟ್ರಿಕ್ಕು ಈತ ಮಾಡುತ್ತಿದ್ದಾನೆ. ಆದರೆ ಇದಕ್ಕೆ ಬಂಟರೆ ಅಡ್ಡ ನಿಂತಿದ್ದಾರೆ.

ತಾನೊಬ್ಬ ದೇವಧೂತ- ಸಭಗ ನೆಂಬಂತೆ ಪೋಸು ಕೊಡುತ್ತ ಗುರುಪುರ ಏರಿಯಾದಲ್ಲಿ ಅಂಡಲೆಯುತ್ತಿದ್ದ ಪುಂಡ ದುರ್ಗಾಪ್ರಸಾದ್ ಯಾನೆ ವರ್ಧಮಾನ ಶೆಟ್ಟಿಯ ಜಂಗಮ ಮಠ ನುಂಗುವ ಮಹಾ ಸಂಚೊಂದು ಈಗ ಜಗಜ್ಜಾಹೀರಾಗಿ ಹೋಗಿದೆ. ಡ್ಯಾಮೇಜು ಕಂಟ್ರೋಲ್‌ಗೆ ಆತ ತಿಪ್ಪರಲಾಗ ಹಾಕುತ್ತಿದ್ದಾನೆ. ಆದರೆ ದುರ್ಗಾನ ದಶಾವತಾರ ನೋಡಿದ ಜನ ಮಾತ್ರ ಆತನನ್ನು ನಂಬುತ್ತಿಲ್ಲ!! ಹತಾಶನಾಗಿರುವ ದುರ್ಗಾ ಗುರುಪುರ ಜಂಗಮಮಠಕ್ಕೆ ಉತ್ತರಾಧಿಕಾರಿ ತನ್ನವನೇ ಆಗಬೇಕೆಂಬ ಹಠಕ್ಕೆ ಬಿದ್ದಿದ್ದಾನೆ. ಲಿಂಗಾಯತರು ಈ ವಂಚಕನನ್ನು ಮಠಕ್ಕೆ ಕಾಲಿಡದಂತೆ ತಡೆಯಲು ಸರ್ವಸನ್ನದ್ಧರಾಗಿದ್ದಾರೆ. ದುರಹಂಕಾರಿ ದುರ್ಗಾನ ದೌಲತ್ತು- ಡಂಬಾಚಾರ ನೋಡಿದರೆ, ಗುರುಪುರದ ಜಂಗಮಮಠದ ಅಂಗಳ ರಣರಂಗ ಆಗುತ್ತದೇನೋ ಎಂಬ ಆತಂಕ ಎಂಥವರಿಗೂ ಮೂಡುತ್ತದೆ. ಜಿಲ್ಲಾಡಳಿತಕ್ಕೆ- ಪೊಲೀಸರಿಗೆ ಇದರ ಖಬರಿದೆಯಾ? ●

ಬಂಡಸಾಲೆಯಲ್ಲಿ 'ಭಂಡ' ಸಾಲೆ!

ಗುರುಪುರದ ಜಂಗಮ ಮಠಕ್ಕೆ ಗೆದ್ದಲಿನಂತೆ ಗಂಟು ಬಿದ್ದಿರುವ ಗಂಟುಕಳ್ಳ ದುರ್ಗಾಪ್ರಸಾದ್ ಶೆಟ್ಟಿ ಯಾನೆ ವರ್ಧಮಾನ ಶೆಟ್ಟಿ ಸ್ವಭಾವತಃ ಒಬ್ಬ ಅಡ್ಡಕಸುಬಿ. ಆತನ ದಶಾವತಾರಗಳೇ ಆತ ಪಳಗಿದ ವಂಚಕನೆಂಬುದು ಸಾರಿ-ಸಾರಿ ಹೇಳುತ್ತವೆ. ಸುಮಾರು 45 ವರ್ಷ ಪ್ರಾಯದ ಈ 'ಡಿ' ಶೆಟ್ಟಿ ಜನರನ್ನು ಮಾತಲ್ಲೇ ಮರಳು ಮಾಡಬಲ್ಲ ಬಿರಕಿ. ಮೊದಲು ವಾಮಂಜೂರು ಹಾಗು ಗುರುಪುರ-ಕೈಕಂಬದಲ್ಲಿ ಫೈನಾನ್ಸ್ ಆರಂಭಿಸಿ ಅಮಾಯಕರಿಗೆ ಭರ್ಜರಿ ಮಕಮಲ್ ಟೋಪಿಯೇರಿಸಿದ್ದ. ಸಣ್ಣ-ಪುಟ್ಟ ವ್ಯಾಜ್ಯ ಬಗೆಹರಿಸಿ ಕಮಿಷನ್ ಪಡೆಯುವ ಪುಡಿ ರೌಡಿಗಿರಿಯೂ ಈತನಿಗೆ ಕರತಲಾಮಲಕ. ಈತ ಮುಂಬೈನ ಪಂಚನಗರದಲ್ಲಿ ಟಿಂಬರ್ ಉದ್ಯಮ ನಡೆಸಿ ಅಲ್ಲೂ ಚಿಕೋಪಿ ಗಿರಾಕಿ ಎಂದು ಬಿರುದು ಪಡೆದಿದ್ದ. ಈತನಿಗೆ ಮುಂಬೈನಲ್ಲಿ ಟಿಂಬರ್ ಬಿಸಿನೆಸ್ ಹಾಕಿಸಿಕೊಟ್ಟಿದ್ದು ಈವತ್ತು ಬಿಜೈನಲ್ಲಿ 'ಪಾಪ್ಯೂಲರ್' ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಮಾಜಿ ಭೂಗತ ಪಾತಕಿ. ಇವತ್ತಿಗೂ ಆತನೊಂದಿಗೆ 'ಡಿ' ಶೆಟ್ಟಿಗೆ ದೋಸ್ತಿಯಿದೆ.

ಗುರುಪುರದ ಜಂಗಮ ಮಠದ ಆಸ್ತಿ ಕಬಳಿಸುವ ಹುನ್ನಾರದಿಂದಲೇ ಆತ ಶಿವಪ್ರಕಾಶ್ ಸ್ವಾಮಿಯ ಸಂಸರ್ಗ ಸಂಪಾದಿಸಿದ್ದ. ಈಗಾಗಲೇ ಮಠದ ಹಲವು ಎಕರೆ ಭೂಮಿ ಕದ್ದು ಮಾರಿರುವ 'ಡಿ' ಶೆಟ್ಟಿ ಕೋಟ್ಯಂತರ ರೂಪಾಯಿ ಜೇಬಿಗಿಳಿಸಿ ಐಷಾರಾಮಿ ಜೀವನ ನಡೆಸುತ್ತಿದ್ದಾನೆ. ಗುರುಪುರದ ಬಂಡಸಾಲೆ ಎಂಬಲ್ಲಿ ಮೂರು ವರ್ಷದ ಹಿಂದೆ ಪಾಳೆಗಾರಿ ಶೈಲಿಯಲ್ಲಿ ಭರ್ಜರಿ ಮನೆ ಕಟ್ಟಿಸಿದ್ದಾನೆ. ಇದು ಭವ್ಯ 'ಭಂಡಸಾಲೆ' ಅರ್ಥಾತ್ ಗುತ್ತಿನ ಗತ್ತಿನ ಮನೆ! ಇಂಥದೊಂದು ಆಡಂಬರದ ಮನೆ ಕಟ್ಟಿಸಿ ಊರಿಗೆಲ್ಲ ಒಣ ರುಬಾಬು ತೋರಿಸಬೇಕು, ಆ ಮನೆ ಸಿನಿಮಾ ಶೂಟಿಂಗ್‌ಗೆ ಯೋಗ್ಯವಾಗುವಂತೆ ಕಣ್ಣು ಕೋರೈಸಬೇಕೆಂಬುದು 'ಡಿ' ಶೆಟ್ಟಿಯ ಡರ್ಟಿ ಬಯಕೆ.

ಪ್ರಾಚೀನ ಶೈಲಿಯ ಹಂಚಿನ ಮನೆಯಿದು. ಕೋಟ್ಯಂತರ ರೂಪಾಯಿ ಮನೆಗೆ ಬಿದ್ದಿದೆ. ಲಕ್ಷಾಂತರ ರೂ.ಗಳ ಮರ ಬಳಸಲಾಗಿದೆ. ತಾನೊಬ್ಬ ಪರಂಪರೆ ರಕ್ಷಿಸುವ ಸದ್ಗೃಹಸ್ಥನೆಂದು ಬಿಂಬಿಸಿಕೊಳ್ಳಲು ಇಂಥ ಮನೆಯನ್ನು ಆತ ಕಟ್ಟಿಸಿದ್ದಾನಂತೆ. ಪುಣ್ಯಕ್ಕೆ ಈ ಮನೆ ಮುಂದೆ ಪುರಾತನ ಕುದುರೆ ಗಾಡಿ ಅಥವಾ ಎತ್ತಿನಗಾಡಿ ನಿಲ್ಲಿಸಿಲ್ಲ. ಗೃಹಪ್ರವೇಶದ ದಿನ ಒಂದು ಜೋಡಿ ಕಂಬಳದ ಕೋಣ ಮನೆ ಎದುರು ಕಟ್ಟಿಹಾಕಿಕೊಂಡಿದ್ದ 'ಡಿ' ಶೆಟ್ಟಿ. ಎರಡೆರಡು ಐಷಾರಾಮಿ ಕಾರು ಆತನ ಭಂಡಸಾಲೆಯಲ್ಲಿದೆ.

ಈತನಿಗೆ ಸದಾ ಪ್ರಚಾರದ ತೆವಲು. ಕಳೆದ ವರ್ಷ ಗುರುಪುರದಲ್ಲಿ ಆಮ್ಲ ಮಳೆ ಬಿದ್ದಿದೆ ಎಂದು ಮಾಧ್ಯಮದವರನ್ನು ಕರೆಸಿ ಸುದ್ದಿಯಾಗಿದ್ದ. ಕೆಲವು ವರ್ಷಗಳ ಹಿಂದೆ ದಕ್ಷಿಣ ಕನ್ನಡವನ್ನು ನರಹಂತಕ-ದರೋಡೆಕೋರ ರೇಪಿಸ್ಟ್ ರಿಪ್ಪರ್ ಚಂದ್ರನ್ ನಡುಗಿಸಿದ್ದ. ಆ ಹೊತ್ತಲ್ಲಿ ತನ್ನ ತಂದೆ ಆ ಚಂದ್ರನ್‌ಗೆ ಶೂಟ್ ಮಾಡಿದ್ದಾರೆಂದು ಈತ ಪ್ರಚಾರ ಪಡೆದಿದ್ದ. ತನ್ನ ತೋಟದಲ್ಲಿ ಬಿದ್ದಿದ್ದ ರಕ್ತದ ಕಲೆ ತೋರಿಸಿದ್ದ. ಆದರೆ ವಾಸ್ತವವಾಗಿ ಚಂದ್ರನ್ ಅಲ್ಲಿಗೆ ಬಂದಿರಲೇ ಇಲ್ಲ, ಬಂದಿದ್ದು ಪಾಪದ ನರಿ. ಗುಂಡು ತಾಗಿದ್ದೂ ಆ ನರಿಗೇ.

ತಮಾಷೆಯೆಂದರೆ ಈ 'ಡಿ' ಶೆಟ್ಟಿಗೆ ತಾನೂ ದೇವಮಾನವನಾಗುವ ತೆವಲು ಜೋರಾಗಿದೆ. ಚಿತ್ರದುರ್ಗದ ನಿತ್ಯಾನಂದ ಎಂಬ ಮಂತ್ರ-ತಂತ್ರವಾದಿ ತನ್ನ ಗುರು ಎಂದು ಹೇಳುವ ಈತನಿಗೆ ಭಜರಂಗಿ ಎಂಪಿ ನಳಿನಕುಮಾರ್ ಕಟೀಲ್, ಮಾಜಿ ಮಂತ್ರಿ ನಾಗರಾಜ ಶೆಟ್ಟಿಯಂಥ 'ರಂಗೀಲಾ ರಾಜ'ರೊಂದಿಗೆ ನಿಕಟ ನಂಟಿದೆ. ಹರಾಮಿ ಹಿಂದೂತ್ವವಾದಿಯಾದ 'ಡಿ' ಶೆಟ್ಟಿ ನಿತ್ಯಾನಂದನಿಂದ 'ದೀಕ್ಷೆ' ಪಡೆದು 'ವರ್ಧಮಾನ'ನಾಗಿದ್ದಾನೆ! ತುಂಬಾ ಸಂಭಾವಿತನಂತೆ ಪೋಸು ಕೊಡುವ ಈತನ ಕೈಯ್ಯಲ್ಲಿ ಕೆಜಿಗಟ್ಟಲೆ ತೂಕದ ಬಂಗಾರದ ಕಡಗ ಇರುತ್ತದೆ. ಸದಾ ಬಿಳಿ ಪಂಚೆ-ಬಿಳಿ ಅಂಗಿ ಹಾಕಿಕೊಂಡು ತನ್ನ ಕಪ್ಪು ಗುಣಧರ್ಮ ಮರೆಮಾಚಲು ಹವಣಿಸುವ ಈತನ ಹಣೆಯಲ್ಲಿ ನಾಮ ಇಲ್ಲದ ದಿನವೇ ಇಲ್ಲ. ಈ 'ಡಿ' ಶೆಟ್ಟಿ ಸ್ವತಃ ನಾಮಹಾಕಿಕೊಂಡರೆ ಯಾರಿಗೂ ತೊಂದರೆ ಇಲ್ಲ. ಆದರೆ ಹಳ್ಳಿಯ ಮುಗ್ಧರಿಗೂ ನಾಮ ಹಾಕುತ್ತಿದ್ದಾನೆ. ಅಷ್ಟೇ ಅಲ್ಲ, ಜಂಗಮ ಮಠಕ್ಕೂ ಹಂಗನಾಮ ಹಾಕಿದ್ದಾನೆಂಬುದೇ ದೊಡ್ಡ ದುರಂತ!!

ಯಾದಗಿರಿ ಎಸ್.ಪಿ. ವಿರುದ್ಧ ಐಜಿಪಿ ಕಂಪ್ಲೆಂಟ್!

ಯಾದಗಿರಿ ಜಿಲ್ಲೆಯ ಪೊಲೀಸ್ ಸೂಪರಿಂಟೆಂಡೆಂಟ್ ರೂಪಾ ಮೇಲೆ ಸಾಲುಸಾಲು ಆರೋಪಗಳು ಕೇಳಿಬರುತ್ತಿವೆ. ತೀರಾ ಇತ್ತೀಚೆಗೆ ಅವರ ಮೇಲೆ ಒಂದು ಲಿಖಿತ ಕಂಪ್ಲೆಂಟೇ ಪೊಲೀಸ್ ಮುಖ್ಯಸ್ಥರ ಬಳಿ ಹೋಗಿದೆ. ಒಂದು ಕಾಲಕ್ಕೆ ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮ್ ಬಿಜೆಪಿಯ ಸಾಧ್ವಿ ಗೆಟಪ್ಪಿನ ಉಮಾ ಭಾರತಿಯಂತಹ 'ಬೆಂಕಿ ಚೆಂಡ'ನ್ನೇ ಹುಬ್ಬಳ್ಳಿ ಕೋರ್ಟ್ ಕಟಕಟೆಯಲ್ಲಿ ನಿಲ್ಲಿಸಿ ಸುದ್ದಿ ಮಾಡಿದ್ದು ಇದೇ ರೂಪ. ಹುಬ್ಬಳ್ಳಿ ಈದ್ಗಾ ಕೇಸಿಗೆ ಸಂಬಂಧಿಸಿದಂತೆ ಉಮಾ ಭಾರತಿಯನ್ನು ಭೂಪಾಲ್‌ನಿಂದ ಎಸ್ಕಾರ್ಟ್ ಮಾಡಿತರುವಷ್ಟು ಗಟ್ಟಿಗಿತ್ತಿ ರೂಪಾ ಮೇಲಿನ ಸದ್ಯದ ಆರೋಪಗಳನ್ನು ಸುಲಭಕ್ಕೆ ತಳ್ಳಿ ಹಾಕಲು ಸಾಧ್ಯವಿಲ್ಲ, ಏಕೆಂದರೆ ರೂಪಾ ಅಶಿಸ್ತು ಅವಿಧೇಯತೆಯ ಕುರಿತು ರಾಜ್ಯ ಪೊಲೀಸ್ ಮುಖ್ಯಸ್ಥರಿಗೆ ದೂರು ನೀಡಿರುವುದು ಖುದ್ದು ಆಕೆಯ ಮೇಲಾಧಿಕಾರಿ, ಈಶಾನ್ಯ ವಿಭಾಗದ ಐ.ಜಿ.ಪಿ ಮೊಹಮದ್ ವಜೀರ್ ಅಹಮದ್.




ಐ.ಜಿ.ಪಿ ಮೊಹಮದ್ ವಜೀರ್ ಅಹಮದ್

ರೂಪಾ ರಾದ್ಧಾಂತ ಶುರುವಾಗಿರುವುದು ಕ್ವಾರ್ಟ್ರಸ್ ವಿಚಾರದಿಂದ. ಸರ್ಕಾರಿ ನಿಯಮದ ಪ್ರಕಾರ ಜಿಲ್ಲೆಯ ಕಾನೂನು ಸುವ್ಯವಸ್ಥೆಯ ಜವಾಬ್ದಾರಿ ಹೊತ್ತ ಎಸ್.ಪಿ ಎಂತಹುದೇ ತುರ್ತು ಪರಿಸ್ಥಿತಿಯಲ್ಲೂ ಸುಲಭಕ್ಕೆ ಲಭ್ಯವಾಗುವಂತೆ [illegible] ಕೇಂದ್ರದಲ್ಲೇ ನೆಲೆಸಿರಬೇಕು. ಅದಕ್ಕೆಂದೇ ಅವರಿಗೆ ಸರ್ಕಾರಿ ಮನೆಯನ್ನೂ ನೀಡಲಾಗುತ್ತೆ. ಅದೇರೀತಿ 2010ರಲ್ಲಿ ಯಾದಗಿರಿಯ ಎಸ್.ಪಿ ಯಾಗಿ ನೇಮಕವಾದ ರೂಪಾಗೂ ಅಲ್ಲಿಯೇ ಒಂದು ಮನೆ ನೀಡಲಾಗಿತ್ತು. ಆದರೆ ರೂಪಾರ ಗಂಡ ಐ.ಎ.ಎಸ್ ಅಧಿಕಾರಿ ಮನೀಶ್ ಮುದ್ಗಿಲ್‌ರನ್ನು ಸಕಾಲ ಯೋಜನೆಯ ಮೇಲೆ ಪಕ್ಕದ ಭೀಮರಾಯನಗುಡಿ ಎಂಬಲ್ಲಿ ನೇಮಿಸಿ ಅವರಿಗೂ ಒಂದು ಸರ್ಕಾರಿ ಕ್ವಾರ್ಟ್ರಸ್ ನೀಡಲಾಗಿದೆ. ಯಾದಗಿರಿ ಮತ್ತು ಭೀಮರಾಯನ ಗುಡಿ ನಡುವೆ ಹೆಚ್ಚೆಂದರೆ 40 ಕಿಲೋಮೀಟರ್‌ನ ಹಾದಿಯಷ್ಟೆ. ಇದೇ ಕಾರಣಕ್ಕೆ ರೂಪಾ ತನ್ನ ಯಾದಗಿರಿ ನಿವಾಸ ಬಿಟ್ಟು ಗಂಡನ ಜೊತೆ ಭೀಮರಾಯನ ಗುಡಿಯಲ್ಲೇ ವಾಸವಿದ್ದಾರೆ. ಎಸ್.ಪಿ ಮೇಡಮ್‌ಗೆ irregular ಎನ್ನುವ ಇಮೇಜ್ ಅಂಟಿಸಿರುವುದೇ ವಾಸ್ತವ್ಯದ ಈ ಸಣ್ಣ ಅಡ್ಜಸ್ಟ್‌ಮೆಂಟ್.

ಐ.ಎ.ಎಸ್ ಪತಿಯನ್ನು ಕೈಹಿಡಿದ ನಂತರ ಗಂಡಹೆಂಡತಿ ಇಬ್ಬರೂ ಇಷ್ಟು ಸನಿಹದಲ್ಲಿ ಕೆಲಸ ಮಾಡಿದ್ದು ಇದೇ ಮೊದಲಾದ್ದರಿಂದ ರೂಪಾ ತನ್ನ ಎಸ್.ಪಿ ಜವಾಬ್ದಾರಿಯನ್ನು ಕೊಂಚ ನಿರ್ಲಕ್ಷಿಸುತ್ತಿದ್ದಾರೆ ಎನ್ನುವ ಆರೋಪ ಆಗಿಂದಾಗ್ಗೆ ಕೇಳಿಬರುತ್ತಲೇ ಇತ್ತು. ಇತ್ತೀಚೆಗಂತೂ ಕಾರ್ಯದ ನಿಮಿತ್ತ ಸಾರ್ವಜನಿಕರು ಅವರನ್ನು ಭೇಟಿ ಮಾಡಲು ಹೋದಾಗಲೆಲ್ಲ 'ಮೇಡಮ್ ಅಲ್ಲಿದ್ದಾರೆ' ಎನ್ನುವ ಉತ್ತರವೇ ಸಿಗುವಂತಾಗಿತ್ತು. ಇಂತಹ ಒಂದೆರಡು ಪ್ರಕರಣಗಳು ಈಶಾನ್ಯ ವಿಭಾಗದ ಐ.ಜಿ.ಪಿ ವಜೀರ್ ಅಹ್ಮದ್‌ರ ಗಮನಕ್ಕೆ ಬಂದಿದ್ದವು. ಅದನ್ನು ಸರಿಪಡಿಸುವ ಸಲುವಾಗಿ ಐ.ಜಿ.ಪಿ ಅಹ್ಮದ್ ರೂಪಾರಿಗೆ ಹಲವಾರು ಬಾರಿ ಅಫಿಷಿಯಲ್ ಪತ್ರ ಬರೆದರೂ ಅದಕ್ಕವರು ಉತ್ತರಿಸುವ ಗೋಜಿಗೇ ಹೋಗಿರಲಿಲ್ಲ.

ಇದಕ್ಕೆ ಸರಿಯಾಗಿ ಜಿಲ್ಲೆಯಲ್ಲಿ ಕಾನೂನು ವ್ಯವಸ್ಥೆ ಸಡಿಲವಾಗಿರುವಂತಹ ಒಂದೆರಡು ಘಟನೆಗಳೂ ಜರುಗಿದ್ದವು. ರೂಪಾ ಅಧಿಕಾರ ವ್ಯಾಪ್ತಿಗೆ ಬರುವ ಮೋಟನಹಳ್ಳಿ ಎಂಬಲ್ಲಿನ ಗ್ರಾಮಪಂಚಾಯತಿ ಚೇರ್ಮನ್ ಚುನಾವಣೆಗೆ ಸಂಬಂಧಿಸಿದಂತೆ ಎರಡು ಪೊಲಿಟಿಕಲ್ ಪಾರ್ಟಿಗಳ ನಡುವಿನ ಸಂಘರ್ಷ ತಾರಕಕ್ಕೇರಿ ಒಬ್ಬ ಪಂಚಾಯ್ತಿ ಸದಸ್ಯನನ್ನೇ ಅಪಹರಿಸಲಾಗಿತ್ತು. ಅಂತಹ ಉದ್ವಿಗ್ನ ಸಂದರ್ಭದಲ್ಲಿ ಖುದ್ದು ಹಾಜರಿದ್ದು ನಿಭಾಯಿಸುವ ಬದಲು ಬೇಜವಾಬ್ದಾರಿಯಿಂದ ಆ ವ್ಯಾಪ್ತಿಯ ಸರ್ಕಲ್ ಇನ್ಸ್‌ಪೆಕ್ಟರ್‌ರನ್ನೂ ಕರೆದುಕೊಂಡು ಬಿಜಾಪುರದಲ್ಲಿ ನಡೆದ ವರ್ಕ್‌ಶಾಪ್‌ಗೆ ಹೋಗಿ ಕುಳಿತದ್ದು ಅವರನ್ನು ಅನುಮಾನಿಸು ವಂತೆ ಮಾಡಿತ್ತು.

ಅದೂಅಲ್ಲದೆ ಸುಮಾರು ಒಂದು ವರ್ಷದ ಹಿಂದಿನ ಕೊಲೆ ಪ್ರಕರಣವೊಂದರಲ್ಲಿ ಪ್ರಮುಖ ಆರೋಪಿಯಾಗಿದ್ದ ವ್ಯಕ್ತಿಯೊಬ್ಬನನ್ನು ಇದುವರೆಗೆ ಬಂಧಿಸಿರಲಿಲ್ಲ. ಪೊಲೀಸ್ ದಾಖಲೆಯಲ್ಲಿ ಆತ ನಾಪತ್ತೆ ಅಂತಲೇ ದಾಖಲಾಗಿತ್ತು. ಆದರೆ ದುರದೃಷ್ಟವಶಾತ್ ಪ್ರತಿಸ್ಪರ್ಧಿ ಗುಂಪಿನವರು ಇತ್ತೀಚೆಗಷ್ಟೆ ಅವನನ್ನು ಕೊಲೆ ಮಾಡಿದ್ದರು. ಆರೋಪಿಯೊಬ್ಬನನ್ನು ಬಂಧಿಸದೆ ಆತನ ಕೊಲೆಗೆ ಪರೋಕ್ಷವಾಗಿ ಕಾರಣವಾದ ಕರ್ತವ್ಯಲೋಪವೂ ರೂಪಾ ತಲೆಗೆ ಅಂಟಿಕೊಂಡಿದೆ.



ಐ.ಎ.ಎಸ್. ಪತಿ ಹಾಗೂ ಮಕ್ಕಳೊಂದಿಗೆ ರೂಪಾ

ಇಂತಹ ಸುಮಾರಷ್ಟು ಲೋಪಗಳನ್ನು ಹುಡುಕಿ ತೆಗೆದು ಅವುಗಳನ್ನೆಲ್ಲಾ ಪಟ್ಟಿ ಮಾಡಿ ರಾಜ್ಯ ಪೊಲೀಸ್ ಮುಖ್ಯಸ್ಥರಿಗೆ ಬರೋಬ್ಬರಿ ಐದು ಪುಟಗಳ ಸುದೀರ್ಘ ದೂರು ನೀಡಿರುವ ಐ.ಜಿ.ಪಿ ಸಾಹೇಬರು ಯಾದಗಿರಿಯಿಂದ ಕೂಡಲೇ ಅವರನ್ನು ತೆಗೆದುಹಾಕಬೇಕೆಂಬ ಮನವಿ ಮಾಡಿಕೊಂಡಿದ್ದಾರೆ.

ಇಲಾಖೆಯ ಮೇಲಾಟಗಳನ್ನು ಪಕ್ಕಕ್ಕಿಟ್ಟು ನೋಡಿದರೂ ರೂಪಾರಲ್ಲಿ ಮೊದಲಿನಷ್ಟು 'ಡ್ಯೂಟಿ ಸೆನ್ಸ್' ಉಳಿದಿಲ್ಲ ಎಂಬ ಅಭಿಪ್ರಾಯಗಳು ಸಾರ್ವಜನಿಕರಲ್ಲೂ ಕೇಳಿಬರುತ್ತಿವೆ. ಹೆಂಗಸೆಂಬ ಮಿತಿಯನ್ನೂ ಮೀರಿ ಐ.ಪಿ.ಎಸ್ ಪದವಿಗೇರುವ ಮೂಲಕ ಹಲವರಿಗೆ ಸ್ಫೂರ್ತಿಯಾಗಿದ್ದ ರೂಪಾ ಆರಂಭದಲ್ಲಿ ಖಡಕ್ ಆಫೀಸರ್ ಎಂಬ ನಿರೀಕ್ಷೆ ಮೂಡಿಸಿದ್ದು ಸುಳ್ಳಲ್ಲ. ಪ್ರಸ್ತುತ ಆರೋಪ, ಅಭಿಪ್ರಾಯಗಳನ್ನು ಗಮನಿಸಿದರೆ ಅವರು ಕೊಂಚ ಡೀವಿಯೇಟ್ ಆದಂತಿದೆ. ಅದನ್ನವರು ಸರಿಪಡಿಸಿಕೊಳ್ಳುವ ಮನಸ್ಸು ಮಾಡಿದರೆ ಒಳಿತು.

ಒಟ್ಟಿನಲ್ಲಿ ಜನರ ಕಂಪ್ಲೆಂಟ್ ಸ್ವೀಕರಿಸಿ ಸಮಸ್ಯೆ ಬಗೆಹರಿಸಬೇಕಾದ ಉನ್ನತ ಪೊಲೀಸ್ ಅಧಿಕಾರಿಗಳೆ ಹೀಗೆ ಕಂಪ್ಲೆಂಟ್ ಸುಳಿಯಲ್ಲಿ ಬಿದ್ದಿರುವುದು ವಿಪರ್ಯಾಸವೇ ಸರಿ. ಇಲಾಖೆ ಒಂದಷ್ಟು ಅಲರ್ಟ್ ಆಗಿ ತಪ್ಪು ಯಾರ ಕಡೆಯಿಂದಲೇ ಆಗಿದ್ದರೂ ಅದನ್ನು ಬಗೆಹರಿಸುವ ಪ್ರಯತ್ನ ಮಾಡದ ಹೊರತು ವಿವಾದ ಬಗೆಹರಿಯುವಂತೆ ಕಾಣುತ್ತಿಲ್ಲ.

● ಗಿರೀಶ್ ತಾಳಿಕಟ್ಟೆ

ರೂಪಾ ಪ್ರತಿಮಾತು



ಅತ್ತ ಐ.ಜಿ.ಪಿ ಅಹ್ಮದ್ ಪೊಲೀಸ್ ಮುಖ್ಯಸ್ಥರಿಗೆ ರೂಪಾ ವಿರುದ್ಧ ಲಿಖಿತ ದೂರನ್ನೇ ನೀಡಿದ್ದರೆ ರೂಪಾ ತನ್ನದೇನೂ ತಪ್ಪೇ ಇಲ್ಲವೆಂದು ಸಮರ್ಥಿಸಿ ಕೊಂಡಿದ್ದಾರೆ. 'ಐ.ಜಿ.ಪಿ ಸಾಹೇಬರಿಗೆ ಮಹಿಳಾ ಅಧಿಕಾರಿಗಳ ಮೇಲೆ ಪೂರ್ವಪೀಡಿತ ದೃಷ್ಟಿಕೋನವಿದೆ. ಅದರಲ್ಲೂ ನಾನು 'ಸ್ಟ್ರೇಟ್ ಫಾರ್ವರ್ಡ್' ಆಗಿರುವುದರಿಂದ ನನ್ನನ್ನು ಕಂಡರೆ ಅವರಿಗೆ ಮೊದಲಿನಿಂದಲು ಅಷ್ಟಕ್ಕಷ್ಟೆ. ಹಾಗಾಗಿ ಆರೋಪ ಮಾಡಿದ್ದಾರೆ. ಯಾದಗಿರಿಯಲ್ಲಿ ನನಗೆ ಕೊಟ್ಟಿರುವ ಮನೆ ವ್ಯವಸ್ಥಿತವಾಗಿಲ್ಲ, ಆದ್ದರಿಂದ ಹತ್ತಿರದಲ್ಲೇ ಇರುವ ನನ್ನ ಗಂಡನ ಜೊತೆಗಿದ್ದೇನೆ. ನಾನು ಭೀಮರಾಯನಗುಡಿಯಲ್ಲಿ ಇದ್ದರೂ ಪ್ರತಿ ದಿನ ಯಾದಗಿರಿಗೆ ಹೋಗಿಬರುತ್ತಿದ್ದೇನೆ. ಗಂಟೆಗಟ್ಟಲೆ ನನ್ನ ಆಫೀಸಿನಲ್ಲಿ ಕಳೆದು ಬರುತ್ತೇನೆ, ಕರ್ತವ್ಯಕ್ಕಂತು ಮೋಸ ಮಾಡಿಲ್ಲ, ನನ್ನ ಕೆಲಸದಲ್ಲಿ ಸದಾ ಮೂಗುತೂರಿಸುತ್ತಿದ್ದ ಐ.ಜಿ.ಪಿ ಅವರು ಹೂಡಿದ ಆಟ ಇದೆಲ್ಲ' ಎಂಬ ಅವರ ಮಾತಿನಲ್ಲೂ ಸ್ವಲ್ಪ ಸತ್ಯಾಂಶ ಇದ್ದಂತಿದೆ.





ಜಗತ್ತಿನಾದ್ಯಂತ ಕಂಗೊಳಿಸುತ್ತಿರುವ ಕನ್ನಡಿಗ ಸುದೀಪ್

ನಮ್ಮ ಲೋಕಲ್ ಹುಡುಗ ಸುದೀಪ್ ಇವತ್ತು 'ಈಗ' ಎಂಬ ತೆಲುಗು ಸಿನಿಮಾದ ಮೂಲಕ ಗ್ಲೋಬಲ್ ಮಟ್ಟದಲ್ಲಿ ಸುದ್ದಿ ಮಾಡುತ್ತಿದ್ದಾನೆ.

ಕನ್ನಡದ ಹುಡುಗನೊಬ್ಬ ಜಾಗತಿಕ ಮಟ್ಟದಲ್ಲಿ ಹೀಗೆ ಎಲ್ಲರ ಮೆಚ್ಚುಗೆ ಪಡೆಯುತ್ತಿರುವುದು ಇದೇ ಮೊದಲ ಬಾರಿ. ಇದು ನಿಜಕ್ಕೂ ಕನ್ನಡಿಗರೆಲ್ಲರಿಗೂ ಸಂತೋಷ ಕೊಡುವಂತಹ ವಿಷಯ.

ಎಸ್.ಎಸ್.ರಾಜಮೌಳಿ ನಿರ್ದೇಶನದ 'ಈಗ' ಚಿತ್ರದಲ್ಲಿ ಆ್ಯಂಟಿ ಹೀರೋ ಆಗಿ ನಟಿಸಿರುವ ಸುದೀಪ್‌ನ ನಟನಾ ಚತುರತೆ ಮತ್ತು ಕೌಶಲ್ಯವನ್ನು ನೋಡಿ ತೆಲುಗು ಚಿತ್ರರಂಗದ ಕಲಾವಿದರು ಆತನನ್ನು ಬಾಯ್ತುಂಬ ಹೊಗಳುತ್ತಿದ್ದಾರೆ. ನೆರೆಯ ತಮಿಳು ಚಿತ್ರರಂಗದ ಕಲಾವಿದರೂ ಈ ಸಿನಿಮಾದ 'ನಾನ್ ಈ' ಎಂಬ ತಮಿಳು ಅವತರಣಿಕೆಯನ್ನು ನೋಡಿ ಸುದೀಪ್‌ನ ನಟನೆಯನ್ನು ಮೆಚ್ಚಿಕೊಂಡಿದ್ದಾರೆ. ಕೇರಳದಲ್ಲಿ ಈಗ ಎರಡು ದೊಡ್ಡ ಮಲಯಾಳಂ ಸಿನಿಮಾಗಳು ಬಿಡುಗಡೆಯಾಗಿದ್ದರೂ ಆ ರಾಜ್ಯದಲ್ಲಿಯೂ ಈ ಚಿತ್ರದ 'ಈಚ' ಎಂಬ ಮಲಯಾಳಂ ಆವೃತ್ತಿಯು ಭರ್ಜರಿ ಪ್ರದರ್ಶನವನ್ನು ಕಾಣುತ್ತಿದೆ. ಅಷ್ಟೇ ಅಲ್ಲ, ಸಬ್‌ಟೈಟಲ್ಸ್‌ನೊಂದಿಗೆ ಮುಂಬೈ, ದೆಹಲಿ ಮತ್ತು ಇತರೆ ಹಿಂದಿ ಭಾಷಾ ಪ್ರದೇಶಗಳಲ್ಲಿ ಬಿಡುಗಡೆಗೊಂಡಿರುವ ಈ ಸಿನಿಮಾ ಹೌಸ್‌ಫುಲ್ ಪ್ರದರ್ಶನಗಳನ್ನು ಕಾಣುತ್ತಿದೆ. ಈ ಅಭೂತಪೂರ್ವ ಪ್ರತಿಕ್ರಿಯೆಯನ್ನು ಕಂಡು ಕೆಲವೇ ತಿಂಗಳಲ್ಲಿ ಈ ಚಿತ್ರವನ್ನು ಹಿಂದಿಯಲ್ಲಿ 3ಡಿ ರೂಪದಲ್ಲಿ 'ಮಖಿ' ಎಂದು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಇದೆಲ್ಲದರ ಮಧ್ಯೆ ಫೇಸ್‌ಬುಕ್‌ಗಳಲ್ಲಿ, ಟ್ವಿಟರ್‌ಗಳಲ್ಲಿ, ಎಲ್ಲಿ ನೋಡಿದರಲ್ಲಿ ಈ ಸಿನಿಮಾದೇ ಸುದ್ದಿ.

ಕಳೆದ ಶುಕ್ರವಾರ ಜಗತ್ತಿನಾದ್ಯಂತ 1,200ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆ ಕಂಡ ಈ ಸಿನಿಮಾ ಈಗ ಅಮೆರಿಕ ಮತ್ತು ಯೂರೋಪ್‌ಗಳಲ್ಲದೆ ಇದರ ತಮಿಳು ಅವತರಣಿಕೆ ಸಿಂಗಪೂರ್, ಮಲೇಷಿಯಾ ಮತ್ತು ಜಪಾನ್ ದೇಶಗಳಲ್ಲಿ ಅಭೂತಪೂರ್ವ ಜಯ ಸಾಧಿಸಿದೆ. ಅರಬ್ ದೇಶಗಳಲ್ಲೂ ಈ ಚಿತ್ರದ ಮಲಯಾಳಂ ಅವತರಣಿಕೆ ತೆರೆ ಕಂಡಿದ್ದು ಅಲ್ಲೂ ಒಳ್ಳೆಯ ಕಲೆಕ್ಷನ್ ಸಂಗ್ರಹಿಸಿದೆ.

ಏಕಕಾಲದಲ್ಲಿ ತೆಲುಗು ಮತ್ತು ತಮಿಳಿನಲ್ಲಿ ಸಿದ್ಧಗೊಂಡ ಈ ಸಿನಿಮಾ ಕರ್ನಾಟಕದಲ್ಲಿ ಏನಿಲ್ಲವೆಂದರೂ 10 ಕೋಟಿ ರೂ.ಗಳ ವ್ಯವಹಾರವನ್ನು ಮಾಡುವ ಸಾಧ್ಯತೆ ಕಾಣಿಸುತ್ತಿದೆ. ಇದು ಸುದೀಪ್ ನಾಯಕನಾಗಿ ಕನ್ನಡದಲ್ಲಿ ನಟಿಸಿದ ಚಿತ್ರಗಳಿಗಿಂತ ದೊಡ್ಡ ಮೊತ್ತ ಎಂಬುದನ್ನು ಯಾರೂ ಮರೆಯಬಾರದು.

ಈ ಚಿತ್ರವನ್ನು ಅಪಾರವಾಗಿ ಮೆಚ್ಚಿದವರಲ್ಲಿ ತಮಿಳಿನ ಸೂಪರ್‌ಸ್ಟಾರ್ ರಜನೀಕಾಂತ್ ಪ್ರಮುಖರು. ಮೊನ್ನೆ ಈ ಚಿತ್ರವನ್ನು ನೋಡಿದ ನಂತರ ರಜನಿಕಾಂತ್ ಅವರ ಮಗಳು [illegible] ಸುದೀಪ್, "ಮೈ ಪಪ್ಪಾ ವಾಂಟ್ಸ್ ಟು ಟಾಕ್ ಟು ಯು" ಎಂದು ತಂದೆ ರಜನಿಕಾಂತ್ ಅವರಿಗೆ ಫೋನ್ ಕೊಟ್ಟಳಂತೆ. ಆಗ ರಜನಿಕಾಂತ್ ಅವರು "ಇಲ್ಲಿಯವರೆಗೂ ವಿಲನ್ ಆಗಿ ನಟಿಸುವುದರಲ್ಲಿ ನಾನೇ ಅಪ್ರತಿಮ ಎಂದುಕೊಂಡಿದ್ದೆ, ಆದರೆ ನೀನು ನನಗಿಂತಲೂ ಚೆನ್ನಾಗಿ ನಟಿಸಿದ್ದೀಯ" ಎಂದು ಸುದೀಪ್‌ಗೆ ಹೇಳಿದರಂತೆ.

ರಾಮ್‌ಗೋಪಾಲ್ ವರ್ಮ ಎಂಬ ತೆಲುಗು-ಹಿಂದಿ ಸಿನಿಮಾಗಳ ನಿರ್ದೇಶಕ "ಈ ಸಿನಿಮಾ ನೂರು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಬಾಕ್ಸ್ ಆಫೀಸಿನಲ್ಲಿ ದೋಚುವುದು ನಿಶ್ಚಿತ. ಅಷ್ಟು ಹಣವನ್ನು ಸಂಪಾದಿಸಿದ ಮೊದಲ ತೆಲುಗು ಸಿನಿಮಾ ಎಂಬ ದಾಖಲೆಯಲ್ಲಿ ಇದು ನಿರ್ಮಿಸಲಿದೆ. ತೆಲುಗು ಮಾತ್ರವಲ್ಲದೆ ಬೇರೆ ಭಾಷೆಗಳಲ್ಲಿ ಇದು ಇನ್ನೂ ಹೆಚ್ಚು ಹಣವನ್ನು ಸಂಪಾದಿಸಲಿದೆ" ಎಂದು ಭವಿಷ್ಯ ನುಡಿದಿದ್ದಾರೆ.

ಮೊನ್ನೆ ಪೀಣ್ಯ [illegible] ರಾಕ್‌ಲೈನ್ ಮಾಲ್‌ನಲ್ಲಿ ಬೆಳಗಿನ ದೇಖಾವೆಯಲ್ಲಿ ಚಿತ್ರ ನೋಡಿದ ಕನ್ನಡದ ಕ್ರೇಜಿ ಸ್ಟಾರ್ ರವಿಚಂದ್ರನ್ ಹೊರಬಂದ ತಕ್ಷಣ ಸುದೀಪ್‌ಗೆ ಫೋನ್ ಮಾಡಿ ಅಭಿನಂದನೆಯನ್ನು ಸಲ್ಲಿಸಿದ್ದಾರೆ. 'ಈಗ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಬಾರಿಸುತ್ತಿದ್ದಂತೆ ಭಾರತದ ಕಲಾವಿದರೆಲ್ಲ ತಮ್ಮೆಲ್ಲ ಹಮ್ಮು-ಬಿಮ್ಮುಗಳನ್ನು ಬದಿಗಿಟ್ಟು ಸುದೀಪ್‌ನ ನಟನೆಯನ್ನು ಮೆಚ್ಚಿದ್ದಾರೆಂದರೆ ಅದು ಸುಮ್ಮನೆಯ ಮಾತಲ್ಲ. ಅಷ್ಟೇ ಅಲ್ಲದೆ, ಎಲ್ಲ ಭಾಷೆಯ ಸಿನಿಮಾ ವಿಮರ್ಶಕರೂ ಸುದೀಪ್ ನಟನೆಯನ್ನು ಶ್ಲಾಘಿಸಿದ್ದಾರೆ.

ಸುದೀಪ್ ನಟಿಸಿದ ಈ ಚಿತ್ರದ ಗೆಲುವು ಕನ್ನಡ ಚಿತ್ರರಂಗದಲ್ಲಿ ಹೊಸ ಚೇತನವನ್ನು ಸೃಷ್ಟಿಸಿದೆ. ಅದರಲ್ಲೂ ವಿಶೇಷವಾಗಿ ಸುದೀಪ್ ನಟಿಸುತ್ತಿರುವ ಚಿತ್ರಗಳಿಗಂತೂ ಮುಂಬರುವ ದಿನಗಳಲ್ಲಿ ಭಾರಿ ವ್ಯಾಪಾರವಾಗುವ

ಸುದೀಪ್ ನಟಿಸಿದ ಈ ಚಿತ್ರದ ಗೆಲುವು ಕನ್ನಡ ಚಿತ್ರರಂಗದಲ್ಲಿ ಹೊಸ ಚೇತನವನ್ನು ಸೃಷ್ಟಿಸಿದೆ. ಅದರಲ್ಲೂ ವಿಶೇಷವಾಗಿ ಸುದೀಪ್ ನಟಿಸುತ್ತಿರುವ ಚಿತ್ರಗಳಿಗಂತೂ ಮುಂಬರುವ ದಿನಗಳಲ್ಲಿ ಭಾರಿ ವ್ಯಾಪಾರವಾಗುವ ಸಾಧ್ಯತೆಯಿದೆ. ವಿಶೇಷವಾಗಿ ಸುದೀಪ್ ಗೆಳೆಯ ಶಂಕ್ರೇಗೌಡ ನಿರ್ಮಿಸುತ್ತಿರುವ 'ವರದನಾಯಕ' ಚಿತ್ರಕ್ಕಂತೂ ಅದ್ಭುತವಾದ ಓಪನಿಂಗ್ ಸಿಗಲಿದೆ. ಅಂದರೆ, ಶಂಕ್ರೇಗೌಡರ ಪಾಲಿಗೆ 'ವರದನಾಯಕ' ಖಂಡಿತವಾಗಿಯೂ ಒಂದು ಬಂಪರ್ ಬಹುಮಾನವಾಗಲಿದೆ. ಈ ಮಧ್ಯೆ ಮೊನ್ನೆಯಷ್ಟೇ ಆರಂಭವಾಗಿರುವ ಏಳು ಕೋಟಿ ರೂ. ಬಡ್ಜೆಟ್ಟಿನ 'ಬಚನ್' ಚಿತ್ರದ ನಿರ್ಮಾಣ ಶೈಲಿಯೇ ಬದಲಾಗಬಹುದು. ಏಕೆಂದರೆ, ಸುದೀಪ್ ಚಿತ್ರಗಳಿಗೆ ಇನ್ನು ಮುಂದೆ ತೆಲುಗು, ತಮಿಳು ಮತ್ತು ಮಲಯಾಳಂ ಭಾಷೆಗಳಿಂದ ಡಬ್ಬಿಂಗ್ ಖರೀದಿಗೆ ಅವಕಾಶವಿರುವುದರಿಂದ 'ಬಚನ್' ಚಿತ್ರವನ್ನು ಇನ್ನೂ ಅದ್ದೂರಿಯಾಗಿ ನಿರ್ಮಿಸುವ ಸಾಧ್ಯತೆಯಿದೆ.

ಬಡ್ಜೆಟ್ಟು ಏರಿತು, ಲಾಭ ಗಗನ ಮುಟ್ಟಿತು!

'ಮಗಧೀರ', 'ಮರ್ಯಾದೆ ರಾಮಣ್ಣ', 'ಸಿಂಹಾದ್ರಿ, 'ಯಮಗೊಂಡ' ಮತ್ತು 'ವಿಕ್ರಮಾರ್ಕುಡು' ಸೇರಿದಂತೆ ಹಲವಾರು ಹಿಟ್ ಸಿನಿಮಾಗಳನ್ನು ತೆಲುಗಿನಲ್ಲಿ ನೀಡಿರುವ, ಸೋಲನ್ನೇ ಕಂಡಿರದ ನಿರ್ದೇಶಕ ಎಂದೇ ಪರಿಗಣಿಸಲಾಗಿರುವ ರಾಜಮೌಳಿ ಅವರು ಎರಡು ವರ್ಷಗಳ ಹಿಂದೆ ಒಂದು ಚಿಕ್ಕ ಬಡ್ಜೆಟ್ಟಿನ ಸಿನಿಮಾ ಮಾಡುವುದಾಗಿ ನಿರ್ಧರಿಸಿದರು. ಆ ಚಿತ್ರಕ್ಕೆ ಸ್ಫೂರ್ತಿ ನೀಡಿದ್ದು ಅವರು ಚಿಕ್ಕಂದಿನಲ್ಲಿ ತಮ್ಮ ತಂದೆ ವಿಜಯೇಂದ್ರ ಪ್ರಸಾದ್ ಅವರಿಂದ ಕೇಳಿದ್ದ ಕತೆ.

ಆ ಕತೆಯು ಒಂದು ಪುಟ್ಟ ನೊಣ ಹೇಗೆ ತನಗಿಂತಲೂ ದೈಹಿಕವಾಗಿ ದೊಡ್ಡವನಾಗಿರುವ ಮಾನವನ ವಿರುದ್ಧ ಸೇಡು ತೀರಿಸಿಕೊಳ್ಳುತ್ತದೆ ಎಂಬುದನ್ನು ಕುರಿತದ್ದಾಗಿತ್ತು. ಆರಂಭದಲ್ಲಿ ಡಿಜಿಟಲ್ ಅಥವಾ ಕೈಯಲ್ಲಿ ಹಿಡಿಯುವ ಕ್ಯಾಮೆರಾಗಳನ್ನು ಬಳಸಿ ಕೇವಲ ಎರಡು ಕೋಟಿ ರೂಪಾಯಿಗಳಲ್ಲಿ ಮತ್ತು ನಾಲ್ಕೈದು ತಿಂಗಳಲ್ಲಿ ಈ ಚಿತ್ರವನ್ನು ಮುಗಿಸುವುದು ರಾಜಮೌಳಿ ಅವರ ಉದ್ದೇಶವಾಗಿತ್ತು.

ಆಗ ರಾಜಮೌಳಿ ಅವರ ಈ ಯೋಜನೆಗೆ ಸ್ಪಂದಿಸಿದವರು ಸಾಯಿ ಕೊರ್‍ರಾಪಟಿ ಎಂಬುವವರು. ಅದಕ್ಕೆ ಕಾರಣವೂ ಇತ್ತು, ಒಂದೆಡೆ ರಾಜಮೌಳಿ ಅವರು ಹಿಟ್ ಸಿನಿಮಾಗಳನ್ನು ನಿರ್ದೇಶಿಸಿದ್ದು, ಇನ್ನೊಂದೆಡೆ ಸಿನಿಮಾದ ಒಟ್ಟು ಬಡ್ಜೆಟ್ ಕೇವಲ ಎರಡು ಕೋಟಿ ರೂಪಾಯಿ ಆಗಿದ್ದದ್ದು.

ಆದರೆ ಈ ಸಿನಿಮಾದ ಕತೆ ರೂಪಗೊಳ್ಳುತ್ತಿದ್ದಾಗ ಇದರ ಬಡ್ಜೆಟ್ ಕೂಡ ಏರುತ್ತದೆ ಎಂದು ರಾಜಮೌಳಿ ಅವರಿಗೆ ಅರ್ಥವಾಯಿತು. ಈ ಕುರಿತು ಅವರು ಸಾಯಿ ಕೊರ್‍ರಾಪಟಿ ಅವರೊಂದಿಗೆ ಚರ್ಚಿಸಿದಾಗ ನಿರ್ಮಾಪಕ ಹಿಂಜರಿಯಲಿಲ್ಲ, ಈ ಚಿತ್ರವನ್ನು ಘೋಷಿಸಿದಾಗ ಇದರ ಒಟ್ಟು ಬಡ್ಜೆಟ್ ಎರಡು ಕೋಟಿಯಿಂದ ಎಂಟು ಕೋಟಿ ರೂಪಾಯಿಗಳಿಗೆ ಏರಿತ್ತು, ಆದರೂ ಸಾಯಿ ಧೃತಿಗೆಡದೆ ರಾಜಮೌಳಿ ಅವರಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು.

ನಟನೊಬ್ಬ ತನ್ನ ಎಲ್ಲಾ ಭಾವನೆಗಳನ್ನು ತನ್ನ ಕಣ್ಣುಗಳ ಮೂಲಕವೇ ಅಭಿವ್ಯಕ್ತಿ ಪಡಿಸುತ್ತಾನೆ. ಆದರೆ ಅಂತಹ ಭಾವನೆಗಳನ್ನು ಕಂಪ್ಯೂಟರ್‌ನಲ್ಲಿ ಸೃಷ್ಟಿಸಲಾಗುವ ನೊಣದಿಂದ ವ್ಯಕ್ತ ಪಡಿಸುವುದು ಹೇಗೆ ಎಂಬ ಪ್ರಶ್ನೆ ನಿರ್ದೇಶಕ ರಾಜಮೌಳಿ ಅವರಿಗೆ ಎದುರಾಯಿತು. ಆಗ ಅವರು ಒಂದು ಅನಿಮೇಶನ್ ಕಂಪನಿಗೆ ತಮ್ಮ ಕತೆಗೆ ಸೂಕ್ತವಾದ ನೊಣವನ್ನು ಸೃಷಿಸಲು ಹೇಳಿದರು. ಆ ಕಂಪನಿಯೋ ಈ ಕೆಲಸಕ್ಕೆಂದು ಆರು ತಿಂಗಳನ್ನು ತೆಗೆದುಕೊಂಡಿತಲ್ಲದೆ, ನಿರ್ಮಾಪಕ ಸಾಯಿ ಅವರ ಹತ್ತು ಕೋಟಿ ರೂಪಾಯಿಗಳನ್ನು ನುಂಗಿ ಹಾಕಿತು. ಇಷ್ಟೆಲ್ಲ ಆದ ಮೇಲೆ ಆ ಕಂಪನಿಯು ಕೊನೆಗೆ ವಿಕೃತವಾಗಿ ಕಾಣಿಸುತ್ತಿದ್ದ ನೊಣವನ್ನು ಕಂಪ್ಯೂಟರ್‌ನಲ್ಲಿ ಸೃಷ್ಟಿಸಿಕೊಟ್ಟಿತು.

ಅದನ್ನು ನೋಡಿ ರಾಜಮೌಳಿ ಅವರಿಗೆ ಆಘಾತವಾಯಿತು. ಎಷ್ಟರ ಮಟ್ಟಿಗೆಂದರೆ ಈ ಸಿನಿಮಾವನ್ನು ಆ ಹಂತದಲ್ಲೇ ಕೈಬಿಡುವುದೇ ವಾಸಿ ಎಂದೆನಿಸಿತು ಅವರಿಗೆ. ಆದರೆ ತಮ್ಮನ್ನು ನಂಬಿದ್ದ ನಿರ್ಮಾಪಕ ಸಾಯಿ ಅವರು ಅಷ್ಟು ಹೊತ್ತಿಗಾಗಲೇ ತಮ್ಮ ಜೇಬಿನಿಂದ ಹತ್ತು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದು ರಾಜಮೌಳಿಯವರ ಆತ್ಮ ಸಾಕ್ಷಿಯನ್ನು ತಾಗಿತು. ಹೇಗಾದರೂ ಮಾಡಿ ಈ ಸಿನಿಮಾದ ಯೋಜನೆಯ[illegible] ಕೈಬಿಡಬಾರದೆಂದು ಅವರು ನಿರ್ಧರಿಸಿದರು.

ಆಗ ಅವರು ಮತ್ತೊಂದು ಕಂಪನಿಗೆ ತಮ್ಮ ಕತೆಗೆ ಸೂಕ್ತವಾದ ನೊಣವ[illegible] ಸೃಷ್ಟಿಸುವ ಜವಾಬ್ದಾರಿಯನ್ನು ವಹಿಸಿದರು. ಆ ಕಂಪನಿಯವರು ಎರ[illegible] ತಿಂಗಳಲ್ಲೇ ರಾಜಮೌಳಿ ಅವರ ಕಲ್ಪನೆಗೆ ಸೂಕ್ತವಾದ ನೊಣವನ್ನು ಕಂಪ್ಯೂಟರ್‌ನ[illegible] ಸೃಷ್ಟಿಸಿಕೊಟ್ಟರು.

ಹೀಗೆ ಕತೆ ಮತ್ತು ಅದಕ್ಕೆ ಸೂಕ್ತವಾದ 'ನಟ' ನೊಣವನ್ನು ತಯಾರಿಸಿ[illegible] ನಂತರ ರಾಜಮೌಳಿ ಅವರಿಗೆ ಎದುರಾಗಿದ್ದು ಈ ಚಿತ್ರದ ತಾರಾಗಣದ ಪ್ರ[illegible] ಹುಡುಗ ಮತ್ತು ಹುಡುಗಿಯ ಪಾತ್ರಗಳಿಗೆ ಸುಲಭವಾಗಿ ಜನ ಆಯ್ಕೆಯಾದರು. ಆದರೆ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿ ರಚಿಸಲಾಗಿದ್ದ ಚಿತ್ರ[illegible] 'ಹೀರೋ' ನೊಣದ ವಿರುದ್ಧ 'ಆಂಟಿ ಹೀರೋ' ಆಗಿ ನಟಿಸಲು ಉತ್ತ[illegible] ನಟನ ಆಯ್ಕೆ ಅವರ ಮುಂದಿತ್ತು. ಆಗ ಅವರಿಗೆ ನೆನಪಾಗಿದ್ದು ರಾಮ್‌ಗೋಪಾಲ್ ವರ್ಮ ನಿರ್ದೇಶಿಸಿದ್ದ 'ರಾಣ್' ಎಂಬ ಹಿಂದಿ ಸಿನಿಮಾ. ಅದರ









ಸ್ಪೆಶಲ್ ಎಫೆಕ್ಟ್‌ನ ಮಜಾ


ಎಲ್ಲರ ಪ್ರಶಂಸೆ ಗಳಿಸಿರುವ 'ಈಗ' ಸಿನಿಮಾದ ವಿಶೇಷತೆ ಯಾವುದೆಂದರೆ ಇದರಲ್ಲಿರುವ ಸ್ಪೆಷಲ್ ಎಫೆಕ್ಟ್ಸ್ ...ನರ ಮನಸ್ಸನ್ನು ಸೂರೆಗೊಂಡಿರುವುದು.

ಈ ಚಿತ್ರದ ಕತೆಯ ಸಾರಾಂಶ ಇಷ್ಟೆ. ಒಬ್ಬ ಹುಡುಗ ಒಬ್ಬಳು ಹುಡುಗಿಯನ್ನು ಪ್ರೀತಿಸುತ್ತಿರುತ್ತಾನೆ. ಆದರೆ ...ಹುಕಾರನೂ, ಕೊಲೆಗಡುಕನೂ ಆಗಿರುವ ವಿಲನ್ ಕೂಡ ಅದೇ ಹುಡುಗಿಯನ್ನು ಪ್ರೀತಿಸಲಾರಂಭಿಸುತ್ತಾನೆ. ಆಕೆ ...ಹುಡುಗನನ್ನು ಪ್ರೀತಿಸುತ್ತಿರುವುದರಿಂದ ಆ ವಿಲನ್ ಆ ಹುಡುಗನನ್ನು ಸಾಯಿಸುತ್ತಾನೆ. ಆ ಹುಡುಗ ನೊಣದ ...ಪದಲ್ಲಿ ಮರುಜನ್ಮ ಪಡೆದು ಕ್ಲೈಮಾಕ್ಸ್‌ನಲ್ಲಿ ವಿಲನ್‌ನನ್ನು ಸಾಯಿಸುತ್ತಾನೆ.

ಇದರರ್ಥ ಸಿನಿಮಾದ 'ಹೀರೋ' ಆದ ನಟ ನಾಣಿ ಕೇವಲ ಇಪ್ಪತ್ತು ನಿಮಿಷಗಳ ಕಾಲ ತೆರೆಯ ಮೇಲೆ ...ಣಿಸಿಕೊಳ್ಳುತ್ತಾನೆ. ಆನಂತರ ಆತನ ಜಾಗವನ್ನು ಸ್ಪೆಷಲ್ ಎಫೆಕ್ಟ್ಸ್ ಮೂಲಕ ಸೃಷ್ಟಿಸಲಾಗಿರುವ ನೊಣ ...ಕ್ರಮಿಸಿಕೊಳ್ಳುತ್ತದೆ. ಮಾತ್ರವಲ್ಲ, 137 ನಿಮಿಷಗಳ ಅವಧಿಯ ಈ ಸಿನಿಮಾದಲ್ಲಿ ಈ ನೊಣವು ಸುಮಾರು 90 ...ಮಿಷಗಳ ಕಾಲ ಕಾಣಿಸಿಕೊಳ್ಳುತ್ತದೆ. ಒಂದು ಅರ್ಥದಲ್ಲಿ ಈ ನೊಣವೇ ಸಿನಿಮಾದ ಹೀರೋ.

ಈ ನೊಣದ ಸಾಹಸವನ್ನು ತಾಂತ್ರಿಕವಾಗಿ ರೂಪಿಸಲು 2,234 ಶಾಟ್‌ಗಳನ್ನು ಉಪಯೋಗಿಸಲಾಗಿದೆ. ಕಳೆದ ...ರ್ಷ ಬಿಡುಗಡೆಗೊಂಡಿದ್ದ ರಜನೀಕಾಂತ್ ನಟಿಸಿದ್ದ 'ಎಂದಿರನ್' (ರೋಬೋ) ಸಿನಿಮಾದಲ್ಲಿ 2,100 ಸ್ಪೆಷಲ್ ...ಫೆಕ್ಟ್ಸ್‌ಗಳನ್ನು ಬಳಸಲಾಗಿತ್ತು.

ಅಂದಹಾಗೆ ಹಿಂದಿಯ ಜನಪ್ರಿಯ ನಟ ಶಾರೂಖ್ ಖಾನ್ ನಟಿಸಿ ನಿರ್ಮಿಸಿದ್ದ 'ರಾ 1' ಎಂಬ ಸಿನಿಮಾದಲ್ಲಿ ...ಈಗ' ಸಿನಿಮಾಗಿಂತಲೂ ಹೆಚ್ಚಿನ ಸಂಖ್ಯೆಯ ಸ್ಪೆಷಲ್ ಎಫೆಕ್ಟ್ಸ್ ಶಾಟ್‌ಗಳಿದ್ದವು. ಆದರೂ ಆ ಸಿನಿಮಾ ಬಾಕ್ಸ್ ಆಫೀಸಿನಲ್ಲಿ ನೆಲಕಚ್ಚಿತ್ತು!





'ಈಗ' ಚಿತ್ರದ ಕನ್ನಡ ನಂಟು ಮತ್ತು ದುರಂತ

ಈಗ ಎಲ್ಲರ ಗಮನ ಸೆಳೆದಿರುವ 'ಈಗ' ಚಿತ್ರದ ನಂಟು ಅದರಲ್ಲಿ ಅದ್ಭುತವಾಗಿ ನಟಿಸಿರುವ ಕನ್ನಡ ಸಿನಿಮಾಗಳ ಹೀರೋ ಸುದೀಪ್‌ನೊಂದಿಗೆ ಅಂತ್ಯಗೊಳ್ಳುವುದಿಲ್ಲ, ಕರ್ನಾಟಕದೊಂದಿಗೆ ಇನ್ನೊಂದು ನಂಟು ಇದೆ. ಅದು ಆ ಸಿನಿಮಾದ ನಿರ್ದೇಶಕ ಎಸ್.ಎಸ್. ರಾಜಮೌಳಿ ಅವರಿಗೆ ಸಂಬಂಧಿಸಿದ್ದು.


ತೆಲುಗಿನಲ್ಲಿ ಈಗಾಗಲೇ ಹಲವಾರು ಹಿಟ್ ಸಿನಿಮಾಗಳನ್ನು ನೀಡಿರುವ ರಾಜಮೌಳಿ ಮೂಲತಃ ಕರ್ನಾಟಕದವರು. ಅವರ ತಂದೆ ವಿಜಯೇಂದ್ರ ಪ್ರಸಾದ್ ಕರ್ನಾಟಕದ ಬಿಜಾಪುರ ಜಿಲ್ಲೆಯವರು! ಅಷ್ಟೇ ಅಲ್ಲ, ವಿಜಯೇಂದ್ರ ಪ್ರಸಾದ್ ಈ ಹಿಂದೆ ಹಲವಾರು ಕನ್ನಡ ಸಿನಿಮಾಗಳಲ್ಲಿ ದುಡಿದವರು ಕೂಡ.

ಹಾಗೆಯೇ 'ಈಗ' ಚಿತ್ರಕ್ಕೆ ಸಂಗೀತ ನೀಡಿರುವ ಕೀರವಾಣಿ ಅವರೂ ಕನ್ನಡಿಗರೆ. ನಿರ್ದೇಶಕ ರಾಜಮೌಳಿ ಅವರಿಗೆ ದೊಡ್ಡಪ್ಪ ಆಗಿರುವ ಕೀರವಾಣಿ ಬಸವಣ್ಣನ ವಚನಗಳನ್ನು ಕ್ಯಾಸೆಟ್ ರೂಪದಲ್ಲಿ ಹೊರತಂದಿದ್ದಾರೆ.


ನಮ್ಮ ಚಿತ್ರರಂಗದ ಪರಿಸ್ಥಿತಿ ಎಂತಹದ್ದು ನೋಡಿ. ಇಲ್ಲೇ ಜನ್ಮವೆತ್ತ ಪ್ರತಿಭಾವಂತರಿಗೆ ತಮ್ಮ ಕೌಶಲ್ಯವನ್ನು ಪ್ರದರ್ಶಿಸಲು ಇಲ್ಲಿ ಅವಕಾಶವೇ ಇಲ್ಲದಂತಾಗಿದೆ. ಆದ್ದರಿಂದ ಅವರೆಲ್ಲ ಇತರೆ ಭಾಷೆಗಳ ಸಿನಿಮಾಲೋಕಗಳಲ್ಲಿ ಆಶ್ರಯ ಪಡೆಯುವಂತಾಗಿದೆ. ಅದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಹುದು. ಆ ಮಾತು ಸದ್ಯಕ್ಕೆ ಬದಿಗಿರಲಿ. ಹಾಗೆಯೇ ರಾಜಮೌಳಿ ಅವರ ಪ್ರತಿಭೆಯನ್ನು ಕುರಿತ ಮಾತೂ ಪಕ್ಕಕ್ಕಿರಲಿ.

ಕಳೆದ ಹತ್ತು ವರ್ಷಗಳಿಂದ ನಮ್ಮ ನಡುವೆಯೇ ಇದ್ದ ಸುದೀಪ್ ಎಂಬ ಕನ್ನಡದ ನಟ ಇವತ್ತು ಬೇರೆ ಭಾರತೀಯ ಭಾಷೆಗಳ ಸಿನಿಮಾ ವಿಮರ್ಶಕರಿಂದಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲೂ "ಭಾರತದ ಪ್ರತಿಭಾವಂತ ನಟರಲ್ಲಿ ಒಬ್ಬ" ಎಂಬ ಪ್ರಶಂಸೆಯನ್ನು ಪಡೆಯಲು ಆತನಿಗೆ ನೆರವಾಗಿದ್ದು ಯಾವುದೇ ಕನ್ನಡ ಸಿನಿಮಾವಲ್ಲ, ಬದಲಾಗಿ ಒಂದು ತೆಲುಗು ಸಿನಿಮಾ...

ಇದು ಕನ್ನಡನಾಡಿನ ದುರಂತವಲ್ಲದೆ ಮತ್ತಿನ್ನೇನು?



ಸಾಧ್ಯತೆಯಿದೆ. ವಿಶೇಷವಾಗಿ ಸುದೀಪ್ ಗೆಳೆಯ ಶಂಕ್ರೇಗೌಡ ನಿರ್ಮಿಸುತ್ತಿರುವ 'ವರದನಾಯಕ' ಚಿತ್ರಕ್ಕಂತೂ ಅದ್ಭುತವಾದ ಓಪನಿಂಗ್ ಸಿಗಲಿದೆ. ಅಂದರೆ, ಶಂಕ್ರೇಗೌಡರ ಪಾಲಿಗೆ 'ವರದನಾಯಕ' ಖಂಡಿವಾಗಿಯೂ ಒಂದು ಬಂಪರ್ ಬಹುಮಾನವಾಗಲಿದೆ. ಈ ಮಧ್ಯೆ ಮೊನ್ನೆಯಷ್ಟೇ ಆರಂಭವಾಗಿರುವ ಏಳು ಕೋಟಿ ರೂ. ಬಡ್ಜೆಟ್ಟಿನ 'ಬಚನ್' ಚಿತ್ರದ ನಿರ್ಮಾಣ ಶೈಲಿಯೇ ಬದಲಾಗಬಹುದು. ಏಕೆಂದರೆ, ಸುದೀಪ್ ಚಿತ್ರಗಳಿಗೆ ಇನ್ನು ಮುಂದೆ ತೆಲುಗು, ತಮಿಳು ಮತ್ತು ಮಲಯಾಳಂ ಭಾಷೆಗಳಿಂದ ಡಬ್ಬಿಂಗ್




ಪ್ರಖ್ಯಾತ ನಟ ಅಮಿತಾಭ್ ಬಚ್ಚನ್ ಎದುರು ನಟಿಸಿದ್ದ ಸುದೀಪ್ ಎಂಬ ಕನ್ನಡದ ನಟ ಎಲ್ಲರ ಗಮನವನ್ನಲ್ಲದೆ ರಾಜಮೌಳಿ ಅವರ ಗಮನವನ್ನೂ ಸೆಳೆದಿದ್ದ. ತನ್ನ ಸಿನಿಮಾದಲ್ಲಿ ಆರ್ಭಟಿಸುವ, ಅರಚುವ ವಿಲನ್ ಆಗಿರದೆ ಸೂಕ್ಷ್ಮವಾಗಿ ತನ್ನ ಆಶೆಗಳನ್ನು ನಿರೂಪಿಸುವ ಸಾಮರ್ಥ್ಯ ನಟ ಸುದೀಪ್‌ಗೆ ಇದೆ ಎಂಬುದು ಅವರಿಗೆ ಮನವರಿಕೆ ಆಗಿತ್ತು.

ಆದರೂ ರಾಜಮೌಳಿ ಅವರಲ್ಲಿ ಅನುಮಾನಗಳಿದ್ದವು. ಕನ್ನಡದಲ್ಲಿ ಹೀರೋ ಆಗಿರುವ, ಹಿಂದಿಯಲ್ಲಿ ಅಮಿತಾಭ್ ಅವರೊಂದಿಗೆ ನಟಿಸಿರುವ ಸುದೀಪ್ ತಮ್ಮ ಸಿನಿಮಾದಲ್ಲಿ 'ವಿಲನ್' ಆಗಿ ನಟಿಸಲು ಒಪ್ಪುತ್ತಾನೆಯೇ ಎಂದು. ಸುದೀಪ್ ಓರ್ವ ಸ್ಟಾರ್ ಆಗಿದ್ದರೂ ತನ್ನನ್ನು ಹೊಸ ಪ್ರಯೋಗಗಳಿಗೆ ಒಡ್ಡಿಕೊಳ್ಳುವ ಆಸಕ್ತಿ ಹೊಂದಿರುವ ವ್ಯಕ್ತಿ ಎಂಬ ಭರವಸೆಯಿಂದ ಅವರು ಸುದೀಪ್‌ನನ್ನು ಸಂಪರ್ಕಿಸಿದರು. ಚಿತ್ರದ ಕತೆ ಕೇಳುತ್ತಿದ್ದಂತೆ ಸುದೀಪ್ ಆ ಸಿನಿಮಾದಲ್ಲಿ ನಟಿಸಲು ಒಪ್ಪಿಕೊಂಡರು.

ಸಿನಿಮಾ ಮುಂದುವರಿಯುತ್ತಿದ್ದಂತೆ ಅದರ ಬಡ್ಜೆಟ್ ಕೂಡ ಏರಲಾರಂಭಿಸಿತು. ಆಗಿನ ಅಂದಾಜಿನ ಪ್ರಕಾರ ಇದಕ್ಕೆ ಒಟ್ಟು ಬೇಕಾದ ಹಣ ಮೂವತ್ತು ಕೋಟಿ ಆಗಿತ್ತು, ಅಷ್ಟೊಂದು ಹಣ ನಿರ್ಮಾಪಕ ಸಾಯಿ ಅವರ ಹತ್ತಿರವಿರಲಿಲ್ಲ, ಆಗ ಅವರು ತಮ್ಮ ಮಿತ್ರರಾದ ಸುರೇಶ್ ಬಾಬು ಅವರ ನೆರವು ಕೇಳಿದರು. ಮಾತ್ರವಲ್ಲ ತಮ್ಮ ಖಾಸಗಿ ಸ್ನೇಹಿತರ ನೆರವನ್ನೂ ಕೇಳಿದರು. ಅವರಿಗೆಲ್ಲ ರಾಜಮೌಳಿ ಅವರ ಕಲಾತ್ಮಕತೆಯಲ್ಲಿ ನಂಬಿಕೆ ಇದ್ದಿದ್ದರಿಂದ ಹಣ ಹೂಡಲು ಮುಂದಾದರು. ಅದೂ ಸಾಲದಿದ್ದಾಗ ನಿರ್ಮಾಪಕ ಸಾಯಿ ಅವರು ಮಾರುಕಟ್ಟೆಯಲ್ಲಿ ತಿಂಗಳಿಗೆ ಶೇ 1.5 ರಂತೆ ಸಾಲವನ್ನು ಎತ್ತಿದರು. ಕೊನೆಗೂ ಈ ಚಿತ್ರ ಸಂಪೂರ್ಣಗೊಳ್ಳಲು ಮೂವತ್ತು ಕೋಟಿ ರೂಪಾಯಿಗಳು ಬೇಕಾದವು...

ಇಷ್ಟೆಲ್ಲ ಸಾಹಸ ಪಟ್ಟಿದ ನಂತರ ಮೂವತ್ತು ಕೋಟಿಗಳಲ್ಲಿ ನಿರ್ಮಾಣವಾದ 'ಈಗ' ಎಂಬ ಚಿತ್ರ ಬಿಡುಗಡೆಗೊಂಡ ಮೊದಲ ಮೂರು ದಿನಗಳಲ್ಲೇ ತನ್ನ ಬಂಡವಾಳವನ್ನು ಹಿಂದೆ ಪಡೆದಿದೆ. ಮಾತ್ರವಲ್ಲ ಈ ಸಿನಿಮಾದ ಹಾಡುಗಳು, ಸ್ಯಾಟಲೈಟ್, ಸಿಡಿ ಮತ್ತು ಇತರೆ ಹಕ್ಕುಗಳು ಈಗಾಗಲೇ ಕೋಟ್ಯಾಂತರ ರೂಪಾಯಿಗಳಿಗೆ ಮಾರಾಟವಾಗಿದೆ.

ರಾಜಮೌಳಿ ಎಂಬ ನಿರ್ದೇಶಕನನ್ನು ನಂಬಿದ್ದಕ್ಕೆ ಸಾಯಿ ಎಂಬ ನಿರ್ಮಾಪಕ ಮೂವತ್ತು ಕೋಟಿಗಳಷ್ಟು ಬಂಡವಾಳವನ್ನು ಹೂಡಿ ಇವತ್ತು ಅದಕ್ಕಿಂತಲೂ ಹೆಚ್ಚು ಹತ್ತು ಕೋಟಿ ರೂಪಾಯಿಗಳಷ್ಟು ಲಾಭವನ್ನು ಗಳಿಸಿದ್ದಾರೆ...



ಖರೀದಿಗೆ ಅವಕಾಶವಿರುವುದರಿಂದ 'ಬಚನ್' ಚಿತ್ರವನ್ನು ಇನ್ನೂ ಅದ್ದೂರಿಯಾಗಿ ನಿರ್ಮಿಸುವ ಸಾಧ್ಯತೆಯಿದೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಇನ್ನು ಮುಂದೆ ಸುದೀಪ್ ಸಂಭಾವನೆ ಖಂಡಿತವಾಗಿಯೂ ಸಿಕ್ಕಾಪಟ್ಟೆ ಏರಲಿದೆ. ಅಂದರೆ, ಸದ್ಯಕ್ಕೆ ಕನ್ನಡ ಚಿತ್ರರಂಗದಲ್ಲಿ ಅತ್ಯಂತ ಹೆಚ್ಚು ಸಂಭಾವನೆಯನ್ನು ಪಡೆಯುತ್ತಿರುವ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಹತ್ತಿರ ಸುದೀಪ್ ತಲುಪಿದರೂ ಆಶ್ಚರ್ಯವಿಲ್ಲ.


ನೇರವಾಗಿ ಹೇಳುವುದಾದರೆ ಮುಂಬರುವ ದಿನಗಳಲ್ಲಿ ಸುದೀಪ್ ಕಾಲ್‌ಶೀಟ್ ಕನ್ನಡದ ನಿರ್ಮಾಪಕರಿಗೆ ಸಿಗುವ ಸಾಧ್ಯತೆಗಳು ಕಡಿಮೆಯೆಂದೇ ಕಾಣಿಸುತ್ತಿದೆ. ಏಕೆಂದರೆ, ತೆಲುಗು ಮತ್ತು ತಮಿಳು ಚಿತ್ರರಂಗದ ಅನೇಕ ನಿರ್ಮಾಪಕರು ಈಗಾಗಲೇ ಸುದೀಪ್ ಕಾಲ್‌ಶೀಟ್‌ಗಾಗಿ ಪ್ರಯತ್ನಿಸುತ್ತಿದ್ದಾರೆ. ಒಂದೇ ಒಂದು ಚಿತ್ರದ ಭರ್ಜರಿ ಜಯ ಸುದೀಪ್‌ರ ಅದೃಷ್ಟದ ಬಾಗಿಲನ್ನೇ ಬದಲಾಯಿಸಿಬಿಟ್ಟಿದೆ.

ಅದೇನೇ ಇದ್ದರೂ ಸುದೀಪ್ ಎಂಬ ನಮ್ಮ ಹುಡುಗ ಇಂದು ಗ್ಲೋಬಲ್ ಲೆವಲ್‌ನಲ್ಲಿ ವಿಜೃಂಭಿಸುತ್ತಿರುವುದು ಎಲ್ಲರೂ ಸಂತೋಷಪಡುವಂತಹ ಸಂಗತಿ ಎಂಬುದರ ಬಗ್ಗೆ ಎರಡು ಮಾತಿಲ್ಲ.

● ಶೆಣೈ

'ಬೋಲ್ ಬಚ್ಚನ್' ಮುಖಕ್ಕೆ ಇಕ್ಕಿದ 'ಈಗ'





ಜಗತ್ತಿನಾದ್ಯಂತ 'ಈಗ' ಸಿನಿಮಾ ಬಿಡುಗಡೆಯಾದ ದಿನದಂದೇ 'ಬೋಲ್ ಬಚ್ಚನ್' ಎಂಬ ಹಿಂದಿ ಸಿನಿಮಾ ಕೂಡ ಬಿಡುಗಡೆಗೊಂಡಿತು. ಆದರೆ 'ಈಗ' ಸಿನಿಮಾದಲ್ಲಿ ಸುದೀಪ್, ನಾಣಿ ಮತ್ತು ಸಮಂತ ತರಹದ ಯಾರೂ ಕೇಳಿರದ ನಟರಿದ್ದರೆ 'ಬೋಲ್ ಬಚ್ಚನ್' ಸಿನಿಮಾದಲ್ಲಿ ಅಜಯ್ ದೇವ್ಗನ್ ಮತು ಅಭಿಷೇಕ್ ಬಚ್ಚನ್ ತರಹದ ಪ್ರಮುಖ ಸ್ಟಾರ್‌ಗಳಿದ್ದಾರೆ. ಅಷ್ಟೇ ಅಲ್ಲ 'ಈಗ' ಅಮೆರಿಕದಲ್ಲಿ ಕೆಲವೇ ಚಿತ್ರಮಂದಿರಗಳಲ್ಲಿ ಪ್ರದರ್ಶನ ಕಂಡಿದ್ದರೆ 'ಬೋಲ್ ಬಚ್ಚನ್' ಕನಿಷ್ಠ 32 ಥಿಯೇಟರ್‌ಗಳಲ್ಲಿ ಬಿಡುಗಡೆಗೊಂಡಿತು. ಆದರೂ ಮೊದಲ ಮೂರು ದಿನಗಳಲ್ಲಿ 'ಈಗ' ಚಿತ್ರವು 'ಬೋಲ್ ಬಚ್ಚನ್' ಸಿನಿಮಾಗಿಂತಲೂ ಹೆಚ್ಚು ಹಣವನ್ನು ಅಮೆರಿಕದಲ್ಲಿ ಸಂಪಾದಿಸಿದೆ.

ಅಚ್ಚರಿಯ ಸಂಗತಿ ಯಾವುದೆಂದರೆ 'ಈಗ' ಎಂಬ ತೆಲುಗು-ತಮಿಳು ಚಿತ್ರದ ನಿರ್ದೇಶಕ ರಾಜಮೌಳಿ ಮತ್ತು 'ಬೋಲ್ ಬಚ್ಚನ್' ಎಂಬ ಹಿಂದಿ ಸಿನಿಮಾದ ನಿರ್ದೇಶಕ ರೋಹಿತ್ ಶೆಟ್ಟಿ - ಇವರಿಬ್ಬರೂ ಮೂಲತಃ ಕನ್ನಡಿಗರು!


ರಾಜಮೌಳಿ ಅವರ ತಂದೆ ವಿಜಯೇಂದ್ರ ಪ್ರಸಾದ್ ಹಲವು ವರ್ಷಗಳ ಹಿಂದೆ ಕನ್ನಡ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದರೆ ರೋಹಿತ್ ಶೆಟ್ಟಿ ಮಂಗಳೂರಿನಲ್ಲಿ ಜನಿಸಿದರಲ್ಲದೆ ಅವರ ತಂದೆ ಎಂ.ಬಿ.ಶೆಟ್ಟಿ ಅವರು ಹಿಂದಿ ಸಿನಿಮಾದಲ್ಲಿ ಫೈಟ್ ಮಾಸ್ಟರ್ ಶೆಟ್ಟಿ ಎಂದೇ ಖ್ಯಾತಿ ಗಳಿಸಿದವರು.

ಸಕಲೇಶಪುರ: ವರದಕ್ಷಿಣೆ ತನ್ನ ಹೆಂಡತಿಯನ್ನೇ ಕೊಂದ ಅಬ್ಬಾಸ್

ತರ್ಕಾಕ್ಕಾಗಿ ಯಾರನ್ನಾದರೂ ಕೊಲ್ಲುವುದು ಹಾಗಿರಲಿ. ಮನಸ್ಸಿಗೆ ನೋವನ್ನೂ ಮಾಡಬಾರದು ಎಂದು ಕುರಾನ್ ಹೇಳುತ್ತದೆ. ಆದರೆ ವರದಕ್ಷಿಣೆಯ ದಾಹಕ್ಕೆ ಬಿದ್ದ ಕೆಲವು ಸೈತಾನರು ಅಮಾಯಕ ಹೆಣ್ಣುಮಕ್ಕಳನ್ನು ಪ್ರತಿನಿತ್ಯ ಹಿಂಸಿಸುತ್ತಿದ್ದಾರೆ. ದಾರುಣವಾಗಿ ಕೊಲೆಗೈಯುತ್ತಿದ್ದಾರೆ. ಅಂಥಾ ಒಂದು ದಾರುಣ ಕೊಲೆ ಇತ್ತೀಚೆಗೆ ಸಕಲೇಶಪುರದ ಬಳಿ ನಡೆದುಹೋಗಿದೆ. ಆದರೆ ಪೊಲೀಸರು ಮಾತ್ರ ಇಂಥಾ ಕೊಲೆಯನ್ನು ಮುಚ್ಚಿಹಾಕಲು ಹೆಣಗಾಡಿ ಸೋತಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಕಳಸದ ಬಳಿಯ ಹಿರೇಬೈಲು ಗ್ರಾಮದ ನಿವಾಸಿ ಇಸ್ಮಾಯಿಲ್ ದಂಪತಿಗಳಿಗೆ 4 ಜನ ಹೆಣ್ಣುಮಕ್ಕಳು. ಗೌಡರ ತೋಟದಲ್ಲಿ ಕೂಲಿಗೆಲಸ ಮಾಡಿ ಜೀವನ ಸಾಗಿಸುವ ಈ ಬಡ ಕುಟುಂಬ ತಮ್ಮ ಹಿರಿಯ ಮಗಳಾದ ಶಾಕಿರಾಳನ್ನು 31-06-2012ರಲ್ಲಿ ಸಕಲೇಶಪುರದ ಕುದುಗರಹಳ್ಳಿಯ ಅಬ್ಬಾಸ್ ಅಲಿಯಾಸ್ ಪೈಂಟರ್ ಅಬ್ಬಾಸ್ ಎಂಬುವವನಿಗೆ ಮದುವೆ ಮಾಡಿಕೊಟ್ಟರು. ಈ ಅಬ್ಬಾಸ್ ಮೊದಲು ಪೈಂಟರ್ ಕೆಲಸ ಮಾಡುತ್ತಿದ್ದರಿಂದ ಅವನಿಗೆ ಅದೇ ಹೆಸರು ಉಳಿದುಬಿಟ್ಟಿದೆ. ನಂತರ ಆತ ಡ್ರೈವಿಂಗ್ ಕೆಲಸ ಮಾಡುತ್ತಿದ್ದ ಅದರ ಜೊತೆ ಇತರೆ ಡೀಲಿಂಗ್‌ಗಳನ್ನೂ ನಡೆಸುತ್ತಿದ್ದ ಎಂಬ ಸುದ್ದಿಯಿದೆ.

ಈ ಅಬ್ಬಾಸ್ ಮನೆಯವರು ಕೇಳಿದ ವರದಕ್ಷಿಣೆ ಎಷ್ಟು ಗೊತ್ತೆ? ಬರೋಬ್ಬರಿ 3 ಲಕ್ಷ ಹಣ ಮತ್ತು 40 ಪವನ್ ಬಂಗಾರ! ಕೂಲಿ ಕೆಲಸ ಮಾಡುವ ಇಸ್ಮಾಯಿಲ್ ಬಳಿ ಅಷ್ಟೊಂದು ಹಣ ಎಲ್ಲಿಂದ ಬರಬೇಕು? ಆದರೆ ಶಾಕಿರಾಳ ಒಬ್ಬ ಸೋದರ ಮಾವ ಸೌದಿಯಲ್ಲಿದ್ದಾರೆ, ಮತ್ತೊಬ್ಬ ಮಾವ ಯಾವುದೋ ಬ್ಯುಸಿನೆಸ್ ಮಾಡುತ್ತಾರೆ. ಅವರೇ ಮುಂದೆ ನಿಂತು ಮಾತುಕತೆ ಕುದುರಿಸಿ ವರದಕ್ಷಿಣೆಗಾಗಿ 30 ಪವನ್ ಚಿನ್ನ ಮತ್ತು 2 ಲಕ್ಷ ಹಣ ಕೊಟ್ಟು ಮದುವೆ ಮಾಡಿಕೊಟ್ಟಿದ್ದರು.


ಮದುವೆಯ ಸಂದರ್ಭದಲ್ಲಿ ನತದೃಷ್ಟ ಶಾಕಿರಾ ಮತ್ತಾಕೆಯ ಧನದಾಹಿ ಗಂಡ ಅಬ್ಬಾಸ್....

ಆದರೆ ಮದುವೆಯಾದ ಕೆಲವು ತಿಂಗಳಲ್ಲೇ ತಮ್ಮ ನಿಜಬಣ್ಣ ತೋರಿಸಿದ ಗಂಡ ಹಾಗೂ ಆತನ ಮನೆಯವರು ಕಿರುಕುಳ ಶುರು ಮಾಡಿಕೊಂಡರು. ನಮಗೆ ಇನ್ನೂ 10 ಪವನ್ ಚಿನ್ನ ಮತ್ತು ಒಂದು ಲಕ್ಷ ಹಣ ವರದಕ್ಷಿಣೆ ಬಾಕಿ ಬರಬೇಕಿದೆ, ಅದನ್ನು ತರದಿದ್ದರೆ ನಮ್ಮ ಮನೆಗೆ ಬರಬೇಡ ಎಂದು ಮುಗ್ಧ ಶಾಕಿರಾಳನ್ನು ತವರಿಗೆ ಅಟ್ಟಿದರು. ಆದರೆ ಬಡ ಇಸ್ಮಾಯಿಲ್‌ಗೆ ಇನ್ನೂ 3 ಮಂದಿ ಹೆಣ್ಣುಮಕ್ಕಳಿರೋದರಿಂದ ಆತ ಈ ಧನಪಿಶಾಚಿಗಳ ಬೇಡಿಕೆ ಈಡೇರಿಸುವ ಸ್ಥಿತಿಯಲ್ಲಿರಲಿಲ್ಲ. ಹೇಗೋ ಗಂಡನ ಮನೆಯವರನ್ನು ಅನುನಯಿಸಿ ಮಗಳನ್ನು ಕಳಿಸಿಕೊಟ್ಟಿದ್ದರು. ಹೀಗೆ ನಿತ್ಯವೂ ನರಕದ ಮನೆಯಲ್ಲಿ ಹೇಗೋ ಕಾಲದೂಡುತ್ತಿದ್ದ ಶಾಕಿರಾಳಿಗೆ ಒಂದು ಗಂಡು ಮಗುವೂ ಆಯಿತು. ಅಬ್ಬಾಸ್‌ನ ಕುಟುಂಬಕ್ಕೆ ಎಂಥ ಧನದಾಹ ಹಿಡಿದಿದೆಯೆಂದರೆ ಶಾಕಿರಾ ಗಂಡು ಮಗುವನ್ನು ಹಡೆದು ಒಂದೂವರೆ ತಿಂಗಳಾದರೂ ಮಗುವನ್ನು ನೋಡಲಿಕ್ಕಾದರೂ ಯಾರೂ ಸುಳಿಯಲೇ ಇಲ್ಲ, ಬದಲಿಗೆ ಅವರ ಡಿಮ್ಯಾಂಡ್ ಏನೆಂದರೆ ಬಾಕಿ ವರದಕ್ಷಿಣೆಯನ್ನು ತಂದುಕೊಟ್ಟರೆ ಮಾತ್ರ ಮತ್ತೆ ತಮ್ಮ ಮನೆಗೆ ನಿಮ್ಮ ಮಗಳಿಗೆ ಪ್ರವೇಶ ಎಂಬುದು. ಆದರೆ ಹೆಣ್ಣು ಹೆತ್ತವರು ಇವೆಲ್ಲವನ್ನೂ ಸಹಿಸಿಕೊಂಡು ಮತ್ತೆ ಪಂಚಾಯ್ತಿ ಮಾಡಿ ಮಗಳನ್ನು ಗಂಡನ ಮನೆ ಸೇರಿಸಿದ್ದರು.

ಶಾಕಿರಾಳ ಅತ್ತೆ ಅಪ್ಪಮಾ ಎಂಬ ಗಟಾಣಿ ಹೆಂಗಸು ಮೊದಲೇ ಬಡ್ಡಿ ವ್ಯಾಪಾರಿ. ಸುತ್ತಮುತ್ತಲ ಸಣ್ಣಪುಟ್ಟ ವ್ಯಾಪಾರಿಗಳಿಗೆ ಬಡಬಗ್ಗರಿಗೆ ಹಣ ನೀಡಿ ಶೇ. 10 ಬಡ್ಡಿ ಸುಲಿಯುವುದು ಆಕೆಯ ಕಾಯಕ. ಈಕೆ ಎಂಥ ಪಾಖಂಡಿಯೆಂದರೆ ತನ್ನ ಸ್ವಂತ ಮಗನಿಂದಲೂ ಬಡ್ಡಿ ವಸೂಲಿ ಮಾಡುತ್ತಾಳೆಂದು ಊರಿನ ಜನ ಹೇಳುತ್ತಾರೆ.

ಇತ್ತೀಚೆಗೆ ಶಾಕಿರಾಳ ಗಂಡ ಎಂಬ ಪ್ರಾಣಿ ಹೊಸವರಸೆ ಶುರು ಮಾಡಿಕೊಂಡಿದ್ದ. ಹೆಂಡತಿಯ ಬಂಗಾರವನ್ನೆಲ್ಲಾ ಮಾರಿ ಒಂದು ಇನ್ನೋವಾ ಕಾರು ಖರೀದಿಸಿದ್ದ. ಸಾಲದೆಂಬಂತೆ ಪ್ರೇಮಾ ಎಂಬ ವಯ್ಯಾರಿಯೊಬ್ಬಳನ್ನು ಜೊತೆಮಾಡಿಕೊಂಡು ಸುತ್ತಾಡಲು ಶುರುವಿಟ್ಟುಕೊಂಡಿದ್ದ. ಇಷ್ಟೆಲ್ಲಾ ನಡೆಯುತ್ತಿದ್ದರೂ ಅಸಹಾಯಕ ಶಾಕಿರಾ ಎಲ್ಲವನ್ನು ಸಹಿಸಿಕೊಂಡಿದ್ದಳು. ತಾನು ತವರಿಗೆ ಹೋಗಿ ಕೂತರೆ ಇನ್ನೂ ಮದುವೆ [illegible] ಭವಿಷ್ಯ ಏನೆಂಬುದೇ ಆಕೆಯ ಚಿಂತೆ. ಹೀಗಿದ್ದರೂ ಈ ಅಬ್ಬಾಸ್‌ನ ಸೈತಾನ ಕುಟುಂಬಕ್ಕೆ ಸಮಾಧಾನವಿರಲಿಲ್ಲ. ಶಾಕಿರಾಳನ್ನು ಮುಗಿಸಿ ಹೆಚ್ಚು ಗಂಟು ತರುವ ಮತ್ತೊಂದು ಹುಡುಗಿಯನ್ನು ಮದುವೆ ಮಾಡಿಸುವ ಸ್ಕೆಚ್ ಹಾಕಿಬಿಟ್ಟರು.

ಈ ಪಾತಕಿಗಳು ತನ್ನನ್ನು ಮುಗಿಸುವ ಸಂಚು ಮಾಡುತ್ತಿರುವ ಸುಳಿವು ದೊರಕಿದ್ದೇ ತಡ, ಶಾಕಿರಾ ತನ್ನ ಮಗುವನ್ನು ಎತ್ತಿಕೊಂಡು ಓಟ ಕಿತ್ತಳು. ಊರಿನ ಹೊರವಲಯದಲ್ಲಿ ಓಡುತ್ತಿದ್ದ ಶಾಕಿರಾಳನ್ನು ಬೆನ್ನುಹತ್ತಿ ಇನ್ನೋವಾ ಕಾರಿನಲ್ಲಿ ಬಂದ ಗಂಡ ಮತ್ತು ಮನೆಯವರು ಆಕೆಯನ್ನು ಎಳೆದುಕೊಂಡು ಕಾರಿನಲ್ಲಿ ಹಾಕಿಕೊಂಡು ಹೊರಟೇಬಿಟ್ಟರು. 06-06-2012ರ ಸಂಜೆ ಕುದುಗರಹಳ್ಳಿ ಗ್ರಾಮದ ಬಯಲಿನಲ್ಲಿ ಕ್ರಿಕೆಟ್ ಆಡುತ್ತಿದ್ದ ಮಕ್ಕಳು ಈ ಘಟನೆಯನ್ನು ಕಣ್ಣಾರೆ ಕಂಡಿದ್ದಾರೆ. ನಂತರ ಮನೆಗೆ ಬಂದ ಕೊಲೆಗಡುಕರು ಮಗುವನ್ನು ಪಕ್ಕದ ಮನೆಯಲ್ಲಿ ಬಿಟ್ಟು ಶಾಕಿರಾಳಿಗೆ ಹುಷಾರಿಲ್ಲ; ಆಸ್ಪತ್ರೆಗೆ ಹೋಗಿಬರುತ್ತೇವೆ ಎಂದು


ಜನರ ಪ್ರತಿಭಟನೆ...

ಮುಸ್ಲಿಮರಲ್ಲಿ ಹೆಚ್ಚುತ್ತಿರುವ ವರದಕ್ಷಿಣೆ ಪಿಡುಗು

ಈ ವರದಕ್ಷಿಣೆಯೆಂಬ ಅಮಾನವೀಯ ಪದ್ಧತಿ ಹೆಚ್ಚಾಗಿ ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲೇ ಇರುವುದು. ಅದರಲ್ಲೂ ಭಾರತದಲ್ಲಿ ಈ ಪಿಡುಗು ಇನ್ನೂ ಹೆಚ್ಚು. ಪ್ರಾಚೀನ ಕಾಲದಲ್ಲಿ ಮೇಲ್ಜಾತಿಗಳಿಗೆ ಸೀಮಿತವಾಗಿದ್ದ ವ್ಯಾಧಿ ಕ್ರಮೇಣ ಕೆಳಜಾತಿಗಳಿಗೂ ವ್ಯಾಪಿಸಿದೆ. ಇಸ್ಲಾಂ ಧಾರ್ಮಿಕ ಕಟ್ಟುಪಾಡುಗಳ ಪ್ರಕಾರ ವರದಕ್ಷಿಣೆ ನಿಷಿದ್ಧ. ಬದಲಿಗೆ ವರನ ಮನೆಯವರು ವಧುವಿಗೆ ಮೆಹರ್ ಎಂಬ ಹೆಸರಿನಲ್ಲಿ ದಕ್ಷಿಣೆ ಕೊಡುವ ಸಂಪ್ರದಾಯವಿದೆ. ಆದರೆ ಈ ಎಲ್ಲಾ ನೀತಿಗಳು ದಿನೇದಿನೇ ಅರ್ಥ ಕಳೆದುಕೊಳ್ಳುತ್ತಿದ್ದು ಕ್ರಮೇಣ ವರದಕ್ಷಿಣೆ ಭೂತ ಮುಸ್ಲಿಮರಲ್ಲೂ ಆಳವಾಗಿ ಬೇರುಬಿಟ್ಟಿದೆ. ಈ ವ್ಯಾಧಿಯ ಮುಂದುವರೆದ ಭಾಗವಾಗಿ ವರದಕ್ಷಿಣೆ ಕೊಲೆಗಳೂ ಸಹ ಹೆಚ್ಚುತ್ತಿರುವುದು ಆತಂಕಕಾರಿ ವಿಷಯ.

ಇದು ಅನಕ್ಷರಸ್ಥರಲ್ಲಿ ಮಾತ್ರವಲ್ಲದೆ ವಿದ್ಯಾವಂತರಲ್ಲಿ ಮತ್ತಷ್ಟು ಹೆಚ್ಚು. ಎರಡು [illegible] ಹಿಂದೆ ಬೆಂಗಳೂರಿನ ಬೈಯಪ್ಪನಹಳ್ಳಿಯಲ್ಲಿ ಶಬಾನಾ ಎಂಬ ಸಾಫ್ಟ್‌ವೇರ್ ಇಂಜಿನಿಯರ್‌ಳನ್ನು ಕೊಲೆ ಮಾಡಿದ ಗಂಡನೂ ಸಹ ಸಾಫ್ಟ್‌ವೇರ್ ಟೆಕ್ಕಿಯೇ ಆಗಿದ್ದ. ಕಳೆದ [illegible]ಬರ್‌ನಲ್ಲಿ ಮುಸ್ಲಿಮ್ ಬಾಹುಳ್ಯವಿರುವ ಕಾಶ್ಮೀರದಲ್ಲಿ ಶಾಜಿಯಾ ಎಂಬ ಹುಡುಗಿ [illegible]ಯಾದಳು. ವಿಶೇಷವೆಂದರೆ ಈಕೆ ಕಾಶ್ಮೀರ ಯೂನಿವರ್ಸಿಟಿಯಲ್ಲಿ ಟಾಪ್ ರ್‍ಯಾಂಕ್ [illegible] ಪ್ರತಿಭಾನ್ವಿತ ವಿದ್ಯಾರ್ಥಿನಿ. ಹೀಗೆ ಈ ಪಿಡುಗು ಉನ್ನತ ವ್ಯಾಸಂಗ ಮಾಡಿದವರನ್ನೂ ಒಳಗೊಂಡು ಇಡೀ ಸಮುದಾಯವನ್ನು ಆವರಿಸಿರುವುದು ವಾಸ್ತವ ಸತ್ಯ.

ಆದರೆ ಪರಿಸ್ಥಿತಿ ಹೀಗಿರುವಾಗ ಹಿಂದೂ ಸಂಸ್ಕೃತಿಯ ಪ್ರಭಾವದಿಂದ ಮಾತ್ರ ಹೀಗಾಗುತ್ತಿದೆಯೆಂಬ ಸಬೂಬು ಹೇಳಿ ಕಾಲಹರಣ ಮಾಡುತ್ತಿರುವ ಸೋಗಲಾಡಿ ಗುರುಗಳು ತಮ್ಮ ಸಮುದಾಯವನ್ನು ತಿದ್ದುವ ಕಡೆ ಗಮನ ಹರಿಸಬೇಕು. ಇಲ್ಲವಾದರೆ ಅವರು ಮಾಡುವ ವ್ಯರ್ಥ ಉಪದೇಶಗಳಿಗೆ ಯಾವ ಅರ್ಥವಿರುತ್ತದೆ ಹೇಳಿ?

ಉಡುಪಿಯಲ್ಲೊಂದು ಜಾತಿಮುಕ್ತ ಸಂಬಂಧ ವೇದಿಕೆ

ಕಳೆದ 65 ವರ್ಷಗಳ ಇತಿಹಾಸದಲ್ಲಿ ನಮ್ಮ ಸಮಾಜದಲ್ಲಿ ಹಲವು ಪ್ರಗತಿಪರ ಚಳವಳಿಗಳು ನಡೆದಿವೆ. ಸಾಹಿತ್ಯದಲ್ಲಿ ಮೇಲ್ಜಾತಿಯವರ ಯಜಮಾನಿಕೆಯನ್ನು ಪ್ರಶ್ನಿಸಿ ಮೈಸೂರಿನಲ್ಲಿ ಬರಹಗಾರರ ಒಕ್ಕೂಟ ಅಸ್ತಿತ್ವಕ್ಕೆ ಬಂದಿತ್ತು, ನಂತರ ಬಂಡಾಯ ಮತ್ತು ದಲಿತ ಸಾಹಿತ್ಯ ಚಳವಳಿಗಳು ನಡೆದವು. ಪ್ರೊ.ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ರೈತ ಚಳವಳಿಯೂ ರೂಪುಗೊಂಡಿತು. ಅದೇರೀತಿ 80ರ ದಶಕದಲ್ಲಿ 'ಲಂಕೇಶ್ ಪತ್ರಿಕೆ' ಅಸ್ತಿತ್ವಕ್ಕೆ ಬಂದು ಹಲವರು ಮೈ ಚಳಿ ಬಿಟ್ಟು ಬರೆಯಲು ಪ್ರಾರಂಭಿಸಿದರು. 'ಪ್ರಗತಿ ರಂಗ' ಎನ್ನುವ ರಾಜಕೀಯ, ಸಾಂಸ್ಕೃತಿಕ ವೇದಿಕೆ ಅಸ್ತಿತ್ವಕ್ಕೆ ಬಂದು ಹಲವು ತರುಣ - ತರುಣೆಯರು ಸಮಾಜದಲ್ಲಿ ಜನಪರ ಬದಲಾವಣೆ ತರುವ ಕನಸು ಕಂಡರು.

ಈ ಎಲ್ಲಾ ಪ್ರಗತಿಪರ ಚಳವಳಿಗಳ ಪರಿಣಾಮವಾಗಿ ಹಲವರಲ್ಲಿ ಜಾತಿ ಮುಕ್ತ ಮನಸ್ಸು ರೂಪುಗೊಂಡಿತು. ಹಲವು ಜಾತ್ಯತೀತ ವಿವಾಹ ಸಂಬಂಧಗಳು ನಡೆದವು. ಮುಖ್ಯವಾಗಿ ಲೋಹಿಯಾವಾದ ಮತ್ತು ಜಯಪ್ರಕಾಶ್ ನಾರಾಯಣರ ಸಮಾಜವಾದಿ ಆಂದೋಲನದಿಂದ ಹಲವಾರು ಯುವಕರು ಅನಿಷ್ಟ ಜಾತಿ ಪದ್ಧತಿಯನ್ನು ನಾಶ ಮಾಡಬೇಕು ಎನ್ನುವ ಆದರ್ಶದಿಂದಲೇ ಜಾತ್ಯತೀತ ವಿವಾಹಗಳನ್ನು ಮಾಡಿಕೊಂಡರು. ಈ ಪ್ರಕ್ರಿಯೆ ಈಗಲೂ ಮುಂದುವರಿಯುತ್ತಿದೆ.

ಹೀಗೆ ಜಾತ್ಯತೀತ ವಿವಾಹ ಮಾಡಿಕೊಂಡವರ ಮಕ್ಕಳು ಈಗ ದೊಡ್ಡವರಾಗುತ್ತಿದ್ದಾರೆ. ಅವರಿಗೆ ಆರೋಗ್ಯಪೂರ್ಣ ಭವಿಷ್ಯವನ್ನು ರೂಪಿಸುವುದು ಎಲ್ಲರ ಕರ್ತವ್ಯವಾಗಿದೆ. ಹಾಲಿ ಸಮಾಜವನ್ನು ನೋಡಿದರೆ ಈಗಲೂ ಜಾತಿ, ಮತ-ಮೂಢನಂಬಿಕೆಗಳು ಕಡಿಮೆ ಆದ ಹಾಗೆ ಕಾಣುವುದಿಲ್ಲ, ಆದ್ದರಿಂದ ಜಾತ್ಯತೀತತೆಯ ಹೆಸರಿನಲ್ಲೇ ಹಲವರು ಸಂಘಟಿತರಾಗಿ ತಮ್ಮ ತಾತ್ವಿಕ ನೆಲೆಯನ್ನು ಸಮಾಜಕ್ಕೆ ಗಟ್ಟಿದನಿಯಲ್ಲಿ ಹೇಳುವುದಕ್ಕೆ ಮುಂದಾಗಿದ್ದಾರೆ. ಸದ್ಯದ ಕೋಮು ವೈಷಮ್ಯದ ಸಂದರ್ಭದಲ್ಲಿಯೂ ಈ ಜಾತ್ಯತೀತ ನಿಲುವು ಅತ್ಯಂತ ಅನಿವಾರ್ಯ ಆಗಿದೆ.

ಈ ಸದುದ್ದೇಶದಿಂದ ಉಡುಪಿಯಲ್ಲಿ 'ಜಾತಿಮುಕ್ತ ಸಂಬಂಧ ವೇದಿಕೆ'ಯನ್ನು ರಚಿಸಲಾಗಿದೆ. ಈಗಾಗಲೇ ಅಂತರಜಾತಿ, ಅಂತರಮತೀಯ ವಿವಾಹವಾದವರು ಮಾತ್ರವಲ್ಲ, ಮುಂದೆ ಅಂತಹದೇ ವಿವಾಹ ಸಂಬಂಧ ಆಗ ಬಯಸುವವರೂ ಈ ವೇದಿಕೆಯ ಸದಸ್ಯರಾಗಬಹುದು. ಅಂತಹ ವಿವಾಹಗಳಿಗೆ ಕಾನೂನಿನ ಮತ್ತು ನೈತಿಕ ಬೆಂಬಲವನ್ನು ಕೊಡಬೇಕೆಂದು ವೇದಿಕೆ ನಿರ್ಧರಿಸಿದೆ.

ಅಂತರಜಾತಿ, ಅಂತರಮತೀಯ ವಿವಾಹ ಮಾಡಿಕೊಂಡಿರದಿದ್ದರೂ ಮಾನಸಿಕವಾಗಿ, ತಾತ್ವಿಕವಾಗಿ ಜಾತಿ ಮುಕ್ತರಾಗಿದ್ದವರೂ ಈ ವೇದಿಕೆಯ ಸದಸ್ಯರಾಗಬಹುದು. ಉದಾಹರಣೆಗೆ, ಉಡುಪಿಯಲ್ಲಿ ಜಿ.ರಾಜಶೇಖರ್, ಕೆ.ಫಣಿರಾಜ್, ಸಿರಿಲ್ ಮಥಾಯಿಸ್, ಶ್ರೀಧರ ಭಟ್, ಸುರೇಶ್ ಭಟ್ ಬಾಕ್ರಬೈಲು, ಗೋಪಾಲ ಬಿ.ಶೆಟ್ಟಿ, ದಿನಕರ ಬೆಂಗ್ರೆಯಂತವರೂ ಈ ವೇದಿಕೆಯ ಸದಸ್ಯರಾಗಿದ್ದಾರೆ.

ಈ ವೇದಿಕೆಯ ಹಲವು ಧ್ಯೇಯ ಧೋರಣೆಗಳು ಹೀಗಿವೆ:

* ಮುಖ್ಯವಾಗಿ ಈಗಾಗಲೇ ಅಂತರ್ಜಾತೀಯ / ಅಂತರ್ಮತೀಯ ವಿವಾಹವಾಗಿರುವ ದಂಪತಿಗಳು ಹಾಗೂ ಅವರ ಮಕ್ಕಳೆಲ್ಲಾ ಈ ವೇದಿಕೆಯ ಸದಸ್ಯರಾಗಬಹುದು. ಜಾತಿ, ಮತಗಳ ಸಂಕುಚಿತತೆ ಮೀರಿ, ಪ್ರೇಮಿಸಿ ಮದುವೆ ಆಗಬಯಸುವ ಯುವಕ - ಯುವತಿಯರೂ ಈ ವೇದಿಕೆಯ ಸದಸ್ಯರಾಗಬಹುದು. ವಿವಾಹ ಸಂಬಂಧವನ್ನು ಹೊರತುಪಡಿಸಿ, ಇತರ ಜಾತಿಮುಕ್ತ ಸಾಮಾಜಿಕ ಸಂಬಂಧ ಬಯಸುವವರು-ಜಾತ್ಯತೀತತೆ, ಕೋಮು ಸೌಹಾರ್ದ ಬಯಸುವ ಸಹೃದಯರೂ ಈ ವೇದಿಕೆಯ ಸದಸ್ಯರಾಗಬಹುದು.

* ಸದಸ್ಯರ ಹಿತಾಸಕ್ತಿಯನ್ನು ಕಾನೂನುರೀತ್ಯಾ, ಸಂವಿಧಾನರೀತ್ಯಾ ರಕ್ಷಿಸುವುದು ಈ ವೇದಿಕೆಯ ಗುರಿ.

* ಅಂತರ ಜಾತಿ/ ಅಂತರ್ಮತೀಯ ವಿವಾಹವನ್ನು ಸರಳವಾಗಿ ಆಯೋಜಿಸಲು 'ವೇದಿಕೆ' ಬದ್ಧವಾಗಿರುತ್ತದೆ.

ಮೈಸೂರಿನಲ್ಲಿ ದಿ. ಪ್ರೊ. ರಾಮದಾಸ್ ಮತ್ತು ಚಿಕ್ಕಮಗಳೂರು-ಶೃಂಗೇರಿಯಲ್ಲಿ ಪರಿಸರ ಹೋರಾಟಗಾರ ಕಲ್ಕುಳಿ ವಿಠಲ ಹೆಗ್ಡೆಯಂತವರು ಹಲವು ಅಂತರ್ಜಾತಿ ವಿವಾಹಗಳನ್ನು ನಡೆಸಿ, ಬೆಂಬಲಿಸಿದ್ದಾರೆ. ಅದೇರೀತಿ ಬೆಂಗಳೂರಿನಲ್ಲಿನ ನಟರಾಜ್ ಹುಳಿಯಾರ್ ಅವರ ಸಂಗಡಿಗರು, ಶಿವಮೊಗ್ಗದ ನಾಗಭೂಷಣ್ ಮತ್ತು ಸಂಗಡಿಗರು, ಹಾಗೇನೇ ದಾವಣಗೆರೆಯಲ್ಲಿ ಜಾತಿವಿನಾಶ ವೇದಿಕೆ ಇವೆ. ಆ ವೇದಿಕೆಗಳ ಜೊತೆ ಉಡುಪಿಯ ಈ ವೇದಿಕೆ ಸಹಭಾಗಿತ್ವವನ್ನು ಬಯಸುತ್ತದೆ.

ಆಗಸ್ಟ್ 12 ರ ಭಾನುವಾರ ಬೆಳಗ್ಗೆ 10 ರಿಂದ ಸಂಜೆ 5 ರ ತನಕ ಉಡುಪಿಯ ಎಂ.ಜಿ.ಎಂ. ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ರಾಜ್ಯ ಮಟ್ಟದ ಸಮಾವೇಶವನ್ನು ವೇದಿಕೆ ಹಮ್ಮಿಕೊಂಡಿದೆ.

ಈ ವೇದಿಕೆಯ ಸಂಚಾಲಕರಾಗಿ ಹಯವದನ ಮೂಡುಸಗ್ರಿ ಅಯ್ಕೆ ಆಗಿದ್ದಾರೆ.

ಈ ಜಾತಿಮುಕ್ತ ಸಂಬಂಧ ವೇದಿಕೆ ಯಶಸ್ವಿ ಆಗಲಿ ಮತ್ತು ಜಾತಿಯನ್ನು ಮೀರಿದ ಸಮಾಜವನ್ನು ನಿರ್ಮಿಸುವಲ್ಲಿ ಗೆಲುವು ಸಾಧಿಸಲಿ ಎಂಬುದು ಎಲ್ಲಾ ಪ್ರಗತಿಪರರ ಆಶಯ.



ಹೋದವರು ಶಾಕಿರಾಳ ಹೆಣದೊಂದಿಗೆ ವಾಪಸ್
ರರು. ಶಾಕಿರಾಳಿಗೆ ಹಾರ್ಟ್‌ಅಟ್ಯಾಕ್ ಆಗಿ
ಹೋದಳು ಎಂಬ ಅವರ ಮಾತನ್ನು ಇಡೀ ಊರಿನಲ್ಲಿ
ಊ ನಂಬುವ ಸ್ಥಿತಿಯಲ್ಲಿರಲಿಲ್ಲ. ಶಾಕಿರಾಳ ತಂದೆಗೆ
ಶೋಕವಾರ್ತೆಯನ್ನು ಫೋನ್ ಮಾಡಿ ತಿಳಿಸಿದ್ದು
ಪಕ್ಕದ ಮನೆಯವರೇ ಹೊರತು ಈ ಸೈತಾನರಲ್ಲ.
ಸ್ಥಳಕ್ಕೆ ಬಂದ ತಂದೆತಾಯಿಗಳು ಶಾಕಿರಾಳ ದೇಹದ
ಹಸಿಹಸಿ ಗಾಯಗಳಿರುವುದನ್ನು ಕಣ್ಣಾರೆ ಕಂಡರು.
ಕೈ ಹಾಗೂ ತುಟಿಗಳ ಮೇಲೆ ಗಾಯಗಳಿದ್ದವು.
ಮಿಂದ ರಕ್ತ ಒಸರಿತ್ತು. ಬಾಯಿಂದ ಕಪ್ಪನೆಯ ನೀರು
ಮುತ್ತಿತ್ತು. ನೋಡಿದ ಕೂಡಲೇ ಇದೊಂದು
ಯೆಂದು ಶಾಲಾಬಾಲಕರಿಗೂ ತಿಳಿಯುವಂತಿತ್ತು.
ಗಿ ಶಾಕಿರಾಳ ತಂದೆತಾಯಿಗಳು ಸೀದಾ ಸಕಲೇಶಪುರ
ೀಸ್ ಠಾಣೆಗೆ ದೂರು ಕೊಡಲು ಹೋದರು.

ದರೆ ಬಡ ಇಸ್ಮಾಯಿಲ್‌ನನ್ನು ಕಂಡಿದ್ದೇ ಗಣೇಶ್
ಇನ್ಸ್‌ಪೆಕ್ಟರ್ ದೂರು ತೆಗೆದುಕೊಳ್ಳಲು
ರಿಸಿಬಿಟ್ಟ. ಬದಲಿಗೆ ಬಂದವರ ಮೇಲೆಯೇ
ಡಿದ. ಕೊಲೆಯಾಗಿದ್ದನ್ನು ನೀನು ನೋಡಿದ್ದೀಯಾ?
ಏನಿದೆ? ಎಂಬಿತ್ಯಾದಿ ತಲೆಹರಟೆ ಪ್ರಶ್ನೆಗಳನ್ನು
ನೇ ಹೊರತು ದೂರು ದಾಖಲಿಸಿಕೊಳ್ಳಲು ಸುತರಾಂ
ಇಲ್ಲ. ಆ ನಂತರ ಶವವಿದ್ದ ಸ್ಥಳಕ್ಕೆ ಭೇಟಿ
ಾಗಲೂ ಸಹ, ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿದ್ದ
ದ ಆರೋಪಿಗಳನ್ನು ರಕ್ಷಿಸಿ ಅವರನ್ನು ಸೀದಾ
ಏರಿಸಿಕೊಂಡು ಠಾಣೆಗೆ ತಂದು ಕೂರಿಸಿಕೊಂಡ.
ಬರೆದುಕೊಟ್ಟಿರೋ ಕಂಪ್ಲೇಂಟ್ ಸರಿಯಿಲ್ಲ. ನಾನು
ದಂತೆ ಬರೆದುಕೊಟ್ಟರೆ ಮಾತ್ರ ಕೇಸು
ಕೊಳ್ಳುತ್ತೇನೆ ಎಂದು ನಾನಾ ಷರತ್ತು ವಿಧಿಸಿದ.
ರಿನಲ್ಲೇ ಕೊಲೆಯಾದ ಶವ ಇದ್ದರೂ ದೂರು
ಸದೆ ಅಪರಾಧಿಗಳ ಪರ ವಕಾಲತ್ತು ವಹಿಸುವ
ಖೂಳರಿಗೆ ಯಾತರಲ್ಲಿ ಹೊಡೆದರೂ ಪಾಪವಿಲ್ಲ.

ಘೋರ ಪಾತಕದ ಸುದ್ದಿ ಸುತ್ತಮುತ್ತಲ
ಗಳಿಗೂ ಹರಡಿ ಪೋಸ್ಟ್‌ಮಾರ್ಟಂ ಮಾಡುತ್ತಿದ್ದ
ಮು ಎದುರು ಸಾವಿರಾರು ಸಂಖ್ಯೆಯಲ್ಲಿ ಜನರು
ಯಿಸಿದರು. ಹಲವು ಮಹಿಳಾ ಸಂಘಗಳ
ಧಿಗಳೂ ಬಂದರು. ಅಪರಾಧಿಗಳನ್ನು ರಕ್ಷಿಸುತ್ತಿರುವ
ಪೊಲೀಸರ ವಿರುದ್ಧ ಒಂದು ಪ್ರತಿಭಟನೆಯನ್ನೇ
ಭಿಸಿದರು. ಈ ಹೋರಾಟದಲ್ಲಿ ಹಿಂದೂ ಮುಸ್ಲಿಂ
ಭೇದಭಾವವಿಲ್ಲದೇ ಎಲ್ಲ ಧರ್ಮೀಯರು
ಕೊಂಡರು. ರೊಚ್ಚಿಗೆದ್ದ ಜನರು ರಾಷ್ಟ್ರೀಯ
ರಿಯನ್ನು ಬಂದ್ ಮಾಡಲು ಮುಂದಾದಾಗ
ರ್ಯವಾಗಿ ರಂಗಪ್ರವೇಶ ಮಾಡಿದ ಜಿಲ್ಲಾ ಎಸ್‌ಪಿ
ಶ್ ಸಿಂಗ್ ಕೇಸು ದಾಖಲಿಸಿಕೊಳ್ಳುವಂತೆ
ಶಿಸಿದರು. ಅನಂತರವೇ ಈ ನೀಚ ಇನ್ಸ್‌ಪೆಕ್ಟರ್
ಯಲ್ಲದೆ ಐಪಿಸಿ 498ಎ, 304ಬಿ, 302ರಡಿ ಕೇಸು
ಲಿಸಿದ್ದು. ಅಪರಾಧಿಗಳ ಪರವಾಗಿ ಇಷ್ಟು ಬದ್ಧತೆಯನ್ನು
ರಲು ಇನ್ಸ್‌ಪೆಕ್ಟರ್ 50 ಸಾವಿರ ಕಾಣಿಕೆ
ದ್ದಾನೆಂದು ಪ್ರತಿಭಟನಾಕಾರರು ಸಕಲೇಶಪುರದ
ಗಳಲ್ಲೆ ಸಾರಿಬಿಟ್ಟಿದ್ದಾರೆ.

ಇಂಥಾ ಘೋರವನ್ನು ಕಂಡು ಈ ಬಡಪಾಯಿಗಳ
ಲಕ್ಕೆ ಹಲವಾರು ಸಹೃದಯಿ ನಾಗರಿಕರು ನಿಂತಿದ್ದಾರೆ.
ಂದ ಅಬ್ಬಾಸ್ ಎಂಬುವವರ ಸಹಾಯದಿಂದ
ಸಂಸ್ಥೆ ಅಶೋಕ್ ಮತ್ತು ಅಂದಿನ ಸಿಎಂ ಸದಾನಂದ
ರಿಗೂ ದೂರು ಕೊಟ್ಟಿದ್ದರು. ಜನರ ಒತ್ತಾಯದ ಫಲವಾಗಿ
ಾತುಕ ಗಂಡ, ಆತನ ತಾಯಿ ಅವ್ವಮ್ಮಾ ಹಾಗೂ
ಸಮ್ಮ ಎಂಬುವವರು ಸದ್ಯ ಜೈಲು ಸೇರಿದ್ದಾರೆ.
11 ತಿಂಗಳ ಕೂಸು ಅನಾಥವಾಗಿ ಅಜ್ಜಿ ಮನೆ
. ಶಾಕಿರಾಳ ಸಾವಿಗೆ ನ್ಯಾಯ ದೊರಕುವುದಾದರೆ
. ಶಾಕಿರಾಗಳು ಜೀವಂತವಾಗಿ ಉಳಿಯುತ್ತಾರೆ.

● ವರದಿಗಾರ



ಸೋಲಿನ ಭೀತಿಯಲ್ಲಿ ಚೆಡ್ಡಿ ಶಾಸಕ ಹರೀಶ

ಹರಿಹರ ವಿಧಾನಸಭಾ ಕ್ಷೇತ್ರದ ಪರಿಸ್ಥಿತಿ ಶೋಚನೀಯವಾಗಿದೆ. ಹಾಗೆ ನೋಡಿದರೆ ಹರಿಹರವೆಂಬುದೇ ವಿಚಿತ್ರ ಮತಕ್ಷೇತ್ರ. 1952ರಿಂದ ಸಿದ್ಧವೀರಪ್ಪನಂತಹ ಘಟಾನುಘಟಿಯೂ ಇಲ್ಲಿಂದ ಸರಣಿ ಗೆಲುವು ಸಾಧಿಸಲು ಬಿಡದಷ್ಟು ವಿಶಿಷ್ಟವಾದದ್ದು. ಇಲ್ಲಿಂದ ಒಮ್ಮೆ ಗೆದ್ದವರು ಮತ್ತೆ ಗೆಲ್ಲುವ ಭರವಸೆ ಕಳೆದುಕೊಳ್ಳುವುದೇ ಹೆಚ್ಚು.

ಹಾಲಿ ಚೆಡ್ಡಿ ಶಾಸಕ ಬಿ.ಪಿ.ಹರೀಶನ ಪಾಡೂ ಇವತ್ತು ಅದೇ ಆಗಿದೆ.

ಈ ಹಿಂದೆ ಜೆಡಿಎಸ್‌ನಿಂದ ಶಿವಪ್ಪ ಮತ್ತು ಕಾಂಗ್ರೆಸ್‌ನಿಂದ ಡಾ. ವೈ.ನಾಗಪ್ಪ ಹರಿಹರದಿಂದ ಗೆದ್ದಿದ್ದರು. ಆದರೆ ಮುಂಗೋಪಿ ಶಿವಪ್ಪನ ಸಿಡುಕುತನವನ್ನು ಮತ್ತು ನಾಗಪ್ಪನವರ ನಿಷ್ಕ್ರಿಯತನವನ್ನು ಕಂಡು ಮತದಾರರು ರೋಸಿಹೋಗಿದ್ದರು. ಆಗ ಅವರಿಗೆ ಆಶಾದಾಯಕವಾಗಿ ಕಂಡಿದ್ದೇ ಎಡಪಂಥೀಯ ನಾಯಕ ದಿವಂಗತ ಬಸವನಗೌಡರ ಮಗ ಹರೀಶ.

ಇದಕ್ಕೂ ಮುನ್ನ ಇದೇ ಹರೀಶ ಎರಡು ಬಾರಿ ಇದೇ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದ. ಜೊತೆಗೆ ಜೆಡಿಎಸ್ ಮತ್ತು ಕಾಂಗ್ರೆಸ್ ಎಂಬ ಎರಡೂ ಪ್ರಮುಖ ಪಾರ್ಟಿಗಳ ಅಂಗಳದಲ್ಲಿ ಕುಣಿದು ಸುಸ್ತಾಗಿದ್ದ. 2004ರ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ಚುನಾವಣಾ ಕಣಕ್ಕಿಳಿದ. ಅಷ್ಟೊತ್ತಿಗಾಗಲೇ ಮಾಜಿ ಮಂತ್ರಿಗಳಾದ ಶಿವಪ್ಪ ಮತ್ತು ನಾಗಪ್ಪರ ಮಾರಿಗೆ ಬೇಸತ್ತಿದ್ದ ಮತದಾರರು ಹರೀಶನನ್ನು ಗೆಲ್ಲಿಸಿದರು.

2008ರ ಚುನಾವಣೆಯ ಸಂದರ್ಭದಲ್ಲಿ ಯಡಿಯೂರಪ್ಪ ಪರವಾದ ಗಾಳಿ ಹರಿಹರವನ್ನು ಆವರಿಸಿತ್ತು. ಯಡ್ಡಿಯ ಜಾತಿ ದೊಂಬರಾಟದಿಂದಾಗಿ ಈ ಕ್ಷೇತ್ರದಲ್ಲಿ ಪ್ರಭಾವ ಬೀರುವ ಸಾಧುಲಿಂಗಾಯತರು ಮತ್ತು ಪಂಚಮಸಾಲಿ ಲಿಂಗಾಯತರು ಹರೀಶನನ್ನು ಬೆಂಬಲಿಸಿದರು. ಪರಿಣಾಮವಾಗಿ ಹರೀಶ ಮತ್ತೊಮ್ಮೆ ಗೆದ್ದ. ಹೀಗೆ ಸತತ ಎರಡನೆ ಬಾರಿಗೆ ಗೆಲ್ಲುವ ಮೂಲಕ ಹರೀಶ ಹರಿಹರ ವಿಧಾನ ಸಭಾ ಕ್ಷೇತ್ರದಲ್ಲಿ ದಾಖಲೆಯನ್ನೇ ನಿರ್ಮಿಸಿದ.

ಆದರೆ ಎರಡನೆ ಬಾರಿಗೆ ಗೆದ್ದ ಕ್ಷಣದಿಂದಲೇ ಹರೀಶ ಕೆಟ್ಟು ಹೋಗಲು ಪ್ರಾರಂಭಿಸಿದ. ಹಿಂದೊಮ್ಮೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯಿಂದ ತನ್ನ ರಾಜಕಾರಣವನ್ನು ಪ್ರಾರಂಭಿಸಿದ್ದ ಹರೀಶ ಕೋಮುವಾದಿ ಬಿಜೆಪಿಯ ಎಲ್ಲಾ ಅನಿಷ್ಟಗಳನ್ನು ಮತ್ತು ಜಾತಿ ಬುದ್ಧಿಯನ್ನು ಮೈಗೂಡಿಸಿಕೊಂಡ.

ಶಾಸಕನಾಗಿ ಹರೀಶ ಹರಿಹರವನ್ನು ಉದ್ಧಾರ ಮಾಡುವುದನ್ನೆ ಮರೆತ. ಬದಲಾಗಿ ಯಡಿಯೂರಪ್ಪನ ಪಕ್ಕಾ ಚೇಲಾ ಆಗಿ ರೂಪಾಂತರಗೊಂಡು ಯಡ್ಡಿ ಉಗುಳಿದ ಜಾತಿಮಂತ್ರವನ್ನೇ ಹರೀಶ ಕಂಠಪಾಠ ಮಾಡಿಕೊಂಡು ಮಠಮಾನ್ಯಗಳಿಗೆ ದೀರ್ಘದಂಡ ನಮಸ್ಕಾರ ಹಾಕತೊಡಗಿದ.

ಆಗ ಮುಖ್ಯಮಂತ್ರಿ ಆಗಿದ್ದ ಯಡಿಯೂರಪ್ಪನ ಕುರ್ಚಿ ಮಿಸುಕಾಡಿದಾಗಲೆಲ್ಲ ಹರೀಶನ ಚಿತ್ತ ವಿಕಲಗೊಳ್ಳುತ್ತಿತ್ತು. ಪರಮ ಜಾತಿವಾದಿಯಂತೆ ಹರಿಹರದ ಬೀದಿಗಳಲ್ಲಿ "ಈ ರಾಜ್ಯದಲ್ಲಿ ವೀರಶೈವರಿಗೆ ಅನ್ಯಾಯವಾಗುತ್ತದೆ" ಎಂದು ಬೊಂಬಡಾ ಬಜಾಯಿಸತೊಡಗಿದೆ. ಅಷ್ಟೇ ಅಲ್ಲ, ಯಡ್ಡಿಗೆ ಕಂಟಕ ಎದುರಾದಾಗಲೆಲ್ಲ ಹರೀಶ ಹರಿಹರದಿಂದಲೇ ಮಾಯವಾಗಿ ಐಶಾರಾಮಿ ರೆಸಾರ್ಟ್‌ಗಳಲ್ಲಿ ಬಚ್ಚಿಟ್ಟುಕೊಳ್ಳುತ್ತಿದ್ದ. ಇದು ಯಾವ ಮಟ್ಟಕ್ಕೆ ಹೋಯಿತೆಂದರೆ ಒಮ್ಮೆ ಕೆಲವರು 'ನಮ್ಮ ಶಾಸಕ ನಾಪತ್ತೆ ಆಗಿದ್ದಾನೆ. ಆತನನ್ನು ಹುಡುಕಿಕೊಡಿ' ಎಂದು ಪ್ರತಿಭಟನೆ ಮಾಡಿದ್ದರು.

ಕ್ಷೇತ್ರದ ಅಭಿವೃದ್ಧಿಗೆಂದು ಬಂದ ಅನುದಾನದಲ್ಲಿ ಹರೀಶ ಕಮಿಶನ್ನು ಗಿಮಿಶನ್ನು ಎಂದು ಕೈಚಾಚಲಿಲ್ಲ ನಿಜ. ಆದರೆ ಭ್ರಷ್ಟ ಯಡ್ಡಿ ಮತ್ತು ಗಣಿಕಳ್ಳ ರೆಡ್ಡಿಗಳು ಹಾಕಿದ ಹಾಸಿನ ಕಾಳು ಆಯ್ದುಕೊಳ್ಳುತ್ತಲೇ ನೂರಾರು ಕೋಟಿಯ ಸರದಾರನಾದ.

ಹರೀಶ ಹೀಗೆ ಯಡ್ಡಿ-ರೆಡ್ಡಿಗಳೊಂದಿಗೆ ರೆಸಾರ್ಟ್ ರಾಜಕೀಯದಲ್ಲಿ ಮುಳುಗಿದ್ದಾಗ ಹರಿಹರ ಕ್ಷೇತ್ರ ಗೊತ್ತು ಗುರಿ ಇಲ್ಲದ ಪ್ರದೇಶದಂತಾಯಿತು. ಅಧಿಕಾರಿಗಳು ಸಾರ್ವಜನಿಕರ ನೆತ್ತಿಯ ಮೇಲೆ ಸವಾರಿ ಮಾಡತೊಡಗಿದರು. ನಾಗರಿಕರನ್ನು ಕುರಿಗಳೆಂದೇ ಭಾವಿಸಿ ಲಂಗೂಲಗಾಮಿಲ್ಲದೆ ಮೆರೆಯತೊಡಗಿದರು. ಅದರಲ್ಲೂ ತಹಶೀಲ್ದಾರ್ ನಜ್ಮ ಎಂಬ ಮಹಿಳೆ ಮರಳು ದಂಧೆಯ ಮಾಫಿಯಾದೊಂದಿಗೆ ಕೈಜೋಡಿಸಿದಳು. ಅದರ ಗಣಿಗಾರಿಕೆಯಷ್ಟೆ ಆಮದನಿ ತರುವ ಮರಳು ದಂಧೆ ಎಗ್ಗಿಲ್ಲದೆ ನಡೆಯಲಾರಂಭಿಸಿತು. ಹರಿಹರದಿಂದ ಮಹಾರಾಷ್ಟ್ರ, ತಮಿಳುನಾಡು, ಕೇರಳ, ಮಂಗಳೂರು, ಬೆಂಗಳೂರಿಗೂ ಮರಳು ರವಾನೆಯಾಗತೊಡಗಿತು. ಒಂದು ಲೋಡು ಮರಳು 80 ಸಾವಿರ ರೂಪಾಯಿಗಳಿಗೆ ಮಾರಾಟವಾಗ ತೊಡಗಿತು. ತಹಶೀಲ್ದಾರ್ ನಜ್ಮಾ ತನ್ನ ಜವಾಬ್ದಾರಿಯನ್ನು ಮರೆತು ಮರಳು ಮಾರಾಟದ ದಲ್ಲಾಳಿಯಾದಳು. ಮರಳು ದಂಧೆಯಿಂದಾಗಿ ಹರಿಹರದ ಜೀವನಾಡಿಯಾದ ತುಂಬಭದ್ರಾ ನದಿಯ ಗರ್ಭ ವಿಕೃತಗೊಳ್ಳತೊಡಗಿತು. ತನ್ನನ್ನು ಗೆಲ್ಲಿಸಿದ ಕ್ಷೇತ್ರದಲ್ಲಿ ಇಷ್ಟೆಲ್ಲಾ ನಡೆಯುತ್ತಿದ್ದರೂ ಹರೀಶ ತನಗೂ ಇದ್ಯಾವುದಕ್ಕೂ ಸಂಬಂಧವೇ ಇಲ್ಲದಂತಿದ್ದ.

ಹಾಗೆ ನೋಡಿದರೆ ಹರೀಶ ಕ್ಷೇತ್ರದಲ್ಲಿ ಭ್ರಷ್ಟ ಎಂದು ಅನಿಸಿಕೊಳ್ಳದಿದ್ದರೂ ಪರಮ ಜಾತಿವಾದಿಯ ಪಟ್ಟ ಕಟ್ಟಿಕೊಂಡ. ಯಡಿಯೂರಪ್ಪನೆಂಬ ಮೂಲಭೂತವಾದಿಯ ಸಹವಾಸದಿಂದ ಹರೀಶ ಕೆಟ್ಟು ಕೆರ ಹಿಡಿದು ಹೋದ ಎನ್ನುವ ಗಾದೆಯ ಮಾತು ಈಗ ಹರಿಹರದಲ್ಲಿ ಮನೆ ಮಾತಾಗಿದೆ. ಹರಿಹರದ ಆಡಳಿತಯಂತ್ರವೇ ಎಕ್ಕುಟ್ಟಿ ಹೋಗಿದೆ. ಸಾರ್ವಜನಿಕರ ಪಾಡು ನಾಯಿ ಪಾಡಾಗಿದೆ. ಇಂಥಾ ದಾರುಣ ಸ್ಥಿತಿಯನ್ನು ಹರಿಹರ ಎಂದೂ ಕಂಡಿರಲಿಲ್ಲ. ಹರೀಶ ನಿಂದಾದರೂ ಹರಿಹರ ಉದ್ಧಾರ ಆಗಬಹುದೆಂಬ ಮತದಾರರ ಕನಸು ಭಗ್ನಗೊಂಡಿದೆ. ಹರೀಶನ ಜಾತಿ ಆರ್ಭಟಕ್ಕೆ ಖುದ್ದು ಲಿಂಗಾಯತರೇ ನಿಬ್ಬೆರಗಾಗಿದ್ದಾರೆ.


ಇವತ್ತು ಹರಿಹರದ ಮತದಾರರು ಹೊಸ ಚುನಾವಣೆಗೆ ಕಾಯುತ್ತಿದ್ದಾರೆ. ಬೇರೆ ಯಾತಕ್ಕೂ ಅಲ್ಲ, ಮುಂದಿನ ಬಾರಿ ಹರೀಶನಿಗೆ ಮಂಗಳಾರತಿ ಆತನಿಗೆ ಪಾಠ ಕಲಿಸಲೆಂದು!


ಇದು ಈಗ ಸ್ಪಷ್ಟವಾಗಿ ಗೋಚರಿಸುತ್ತಿರುವುದರಿಂದ ವಿರೋಧ ಪಕ್ಷಗಳಲ್ಲಿ ಹಲವರು ಚುರುಕಾಗಿದ್ದಾರೆ. ಆದರೆ ದುರಂತ ಯಾವುದೆಂದರೆ ವಿರೋಧ ಪಕ್ಷಗಳಲ್ಲಿನ ಸ್ಥಿತಿಯೂ ಈಗ ಚೆನ್ನಾಗಿಲ್ಲದಿರುವುದು.

ಸ್ಥಳೀಯ ಜೆಡಿಎಸ್‌ನಲ್ಲಿ ಬಿರುಕುಗಳು ಮೂಡಿವೆ. ಜೆಡಿಎಸ್‌ನ ಮಾಜಿ ಶಾಸಕ ಹಿಟ್ಲರ್ ಪ್ರವೃತ್ತಿಯ ಶಿವಪ್ಪ ಈಗ ಮೆತ್ತಗಾಗಿದ್ದಾರೆ. ಅವರ ಮಗ ಶಿವಶಂಕರ ತನ್ನ ತಂದೆಯ ನಾಜಿ ರಾಜಕಾರಣವನ್ನು ಮುಂದುವರೆಸಲು ಪ್ರಯತ್ನಿಸುತ್ತಿದ್ದಾನೆ. ಈ ಹಿಂದೆ ಒಮ್ಮೆ ಪದವೀಧರ ಕ್ಷೇತ್ರದಿಂದ ಗೆದ್ದಿದ್ದ ಈತ ಆಗ ಕಡಿದು ಕಟ್ಟೆಹಾಕಿದ್ದು ಏನೇನೂ ಇಲ್ಲ. ಆದ್ದರಿಂದಲೇ ಆತ ಒಮ್ಮೆ ವಿಧಾನಸಭೆಗೆ ಸ್ಪರ್ಧಿಸಿ ಠೇವಣಿಯನ್ನೂ ಕಳೆದುಕೊಂಡು ಸುಸ್ತಾಗಿದ್ದ. ಆದರೆ ರಾಜಕೀಯದ ಆಶೆ ಅವನನ್ನು ಬಿಟ್ಟಿಲ್ಲ. ಆದ್ದರಿಂದ ಶಿವಶಂಕರ ಬರುವ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಹರಿಹರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ತಯಾರಿ ನಡೆಸಿದ್ದಾನೆ.

ಆತನ ತಂದೆ ಶಿವಪ್ಪ ಈಗ ಸುಸ್ತಾಗಿದ್ದಾರೆ. ಹರಿಹರದ ಬೀದಿಗಳಲ್ಲಿ ನಡೆದಾಡಿ ತಮ್ಮ ಮಗನ ಪರವಾಗಿ ಮತಯಾಚಿಸುವ ಸ್ಥಿತಿಯಲ್ಲೂ ಅವರಿಲ್ಲ. ಅಪ್ಪನ ಅನಾರೋಗ್ಯವನ್ನೇ ಸಿಂಪಥಿಯಾಗಿ ಪರಿವರ್ತಿಸುವ ಪ್ಲಾನು ಶಿವಶಂಕರನದು. ಜೊತೆಗೆ ಶಿವಪ್ಪನ ಮನೆಯಲ್ಲಿ ಒಡೆದುಹೋದ ರಾಜಕಾರಣದ ಸೂತಕವಿದೆ. ಅವರ ಕಿರಿ ಮಗ ನಾಗರಾಜ ಈಗ ಬಿಜೆಪಿಯಲ್ಲಿ ಕಳಾಸುತ್ತಿದ್ದಾನೆ. ಮಾತ್ರವಲ್ಲ ಜೆಡಿಎಸ್‌ನಲ್ಲೇ ಶಿವಪ್ಪ ಮತ್ತು ಶಿವಶಂಕರನ ವಿರುದ್ಧ ಪ್ರತಿಸ್ಪರ್ಧಿಗಳು ಹುಟ್ಟಿಕೊಂಡಿದ್ದಾರೆ.


ಕೆ.ಕೆ.ರಫೀಕ್ ಎಂಬುವವರು ಜೆಡಿಎಸ್ ಟಿಕೆಟಿಗೆ ಪ್ರಯತ್ನ ಶುರು ಹಚ್ಚಿದ್ದಾರೆ. ಶಿವಪ್ಪ ಮತ್ತವರ ಮಕ್ಕಳ ಸರ್ವಾಧಿಕಾರ ರಾಜಕೀಯ ಬಲ್ಲ ದೇವೇಗೌಡರಿಗೂ ಶಿವಪ್ಪ ಈಗ ಸವಕಲು ನಾಣ್ಯ ಎಂದು ಗೊತ್ತಾಗಿದೆ. ಗೌಡರು ಈಗ ಸೈಯದ್ ಎಂಬಾತನ ಕಡೆ ಮಗ್ಗಲು ಬದಲಾಯಿಸಿದ್ದಾರೆ. ಸೈಯದ್ ಕಳೆದ ಹದಿನೈದು ವರ್ಷಗಳಿಂದ ಜೆಡಿಎಸ್ ಪಕ್ಷದಲ್ಲಿ ಸಕ್ರಿಯರಾಗಿದ್ದು ಕ್ಷೇತ್ರದಲ್ಲಿ ಪರಿಚಿತರಾಗಿರುವವರು. ಈ ಕ್ಷೇತ್ರದಲ್ಲಿ 45 ಸಾವಿರ ಮುಸ್ಲಿಮರ ಮತಗಳಿರುವುದೇ ಸೈಯದ್ ಅವರ ರಾಜಕೀಯ ಚಟುವಟಿಕೆಗಳಿಗೆ ಚುರುಕು ತಂದಿದೆ. ವಿಚಿತ್ರವೆಂದರೆ ಹರಿಹರ ವಿಧಾನಸಭಾ ಕ್ಷೇತ್ರದಲ್ಲಿ ಖದೀಮ ಅಶೋಕ್ ಖೇಣಿಯ ಕರ್ನಾಟಕ ಮಕ್ಕಳ ಪಕ್ಷ ಎಂಟ್ರಿ ನೀಡುತ್ತಿದೆ. ಚಂದ್ರಶೇಖರ ಪೂಜಾರ್ ಎಂಬ ಶಿವಪ್ಪನ ಪರಮ ಶಿಷ್ಯ ಕಂ ಜಾತ್ಯಸ್ಥ ಖೇಣಿ ಪಾರ್ಟಿಯ ಅಭ್ಯರ್ಥಿ ಆಗುವ ಹವಣಿಕೆಯಲ್ಲಿದ್ದಾನೆ. ಕುಡಿಯುವ ನೀರಿನ ತೊಂದರೆಯಿರುವ ಹಳ್ಳಿಗಳಲ್ಲಿ ಬೋರು ಕೊರೆಸಿದ್ದರಿಂದ ಜನ ತನ್ನನ್ನು ಚುನಾವಣೆಯಲ್ಲಿ ಬೆಂಬಲಿಸುತ್ತಾರೆ ಎಂಬ ನಂಬಿಕೆ ಈತನದು. ಈತನ ಹಿಂದೆ ಹಲವು ಪಂಚಮಸಾಲಿ ಲಿಂಗಾಯತರು ನಿಂತಿದ್ದಾರೆ.


ನಾಗಪ್ಪ



ಶಿವಪ್ಪ


ಇನ್ನು ಸ್ಥಳೀಯ ಕಾಂಗ್ರೆಸಿನ ಪಾಡು ಯಾತಕ್ಕೂ ಬೇಡದಂತಾಗಿದೆ. ಮಾಜಿ ಶಾಸಕ ಡಾ.ವೈ.ನಾಗಪ್ಪ ಎದ್ದರೆ ಕೂರಲಾಗದ, ಕೂತರೆ ಏಳಲಾಗದ ದುಸ್ಥಿತಿಯಲ್ಲಿದ್ದಾರೆ. ಅವರ ಸ್ವಜಾತಿ ಕುರುಬರ ನಾಯಕರೇ "ಸಾಕು ಮಾರಾಯ ರಾಜಕಾರಣ. ನಿನ್ನ ಆರೋಗ್ಯ ನೋಡಿಕೊ" ಎಂದು ಬೋಧಿಸುತ್ತಿದ್ದಾರೆ. ಈಗಾಗಲೇ ತಮ್ಮ ಎರಡೂ ಮಂಡಿಗಳಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುವ 80 ವರ್ಷದ ನಾಗಪ್ಪ ಮತ್ತೆ ಗೆದ್ದು ಅಧಿಕಾರ ಪಡೆಯಲು ಇನ್ನಿಲ್ಲದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.


ಆದರೆ ನಾಗಪ್ಪನ ಮನೆಯಲ್ಲೇ ಬಿರುಕುಗಳು ಮೂಡಿವೆ. ನಾಗಪ್ಪನವರ ದಂಡಪಿಂಡ ಕುಲಪುತ್ರ ಮಹೇಶ ತನ್ನ ಅಪ್ಪನ ವಿರುದ್ಧ ನಿಂತಿದ್ದಾನೆ. ಮರಳು ಮಾಫಿಯಾದ ಡಾನ್ ಆಗಿರುವ ಮಹೇಶ ಈಗ ಬಿಜೆಪಿಯ ಪಡಸಾಲೆಯಲ್ಲಿ ಕುಣಿಯುತ್ತಿದ್ದಾನೆ. ತನ್ನ ಮನೆಯಲ್ಲೇ ವಿರೋಧಿ ರಾಜಕಾರಣ ಎದುರಿಸುತ್ತಿರುವ ನಾಗಪ್ಪ ಇನ್ನು ಸಾರ್ವಜನಿಕ ರಾಜಕಾರಣದಲ್ಲಿ ಸಕ್ರಿಯರಾಗುವುದಾದರೂ ಹೇಗೆ?


ಎಚ್. ಎಸ್. ಶಿವಶಂಕರ್


ಕೆ. ಕೆ. ರಫಿ


ಚಂದ್ರಶೇಖರ್


ಬಿ. ಕೆ. ಸೈಯದ್


ಎಚ್. ಎಸ್. ನಾಗರಾಜ್


ನಾಗಪ್ಪನವರ ರಾಜಕೀಯ ಆಶೆಗಳು ಏನೇ ಇದ್ದರೂ ಅವರಿಗೆ ವಿಶ್ರಾಂತಿ ಕೊಡಲು ಹರಿಹರದ ಕಾಂಗ್ರೆಸ್ಸಿಗರೇ ಸಿದ್ಧರಾಗಿದ್ದಾರೆ. ಬರುವ ಚುನಾವಣೆಯಲ್ಲಿ ಜಿಲ್ಲೆಯಲ್ಲೊಂದು ಕ್ಷೇತ್ರದ ಟಿಕೆಟನ್ನು ಅಲ್ಪಸಂಖ್ಯಾತರಿಗೆ ಕೊಡಬೇಕೆನ್ನುವ ಕಾಂಗ್ರೆಸ್ ಉದ್ದೇಶ ಹರಿಹರದ ಮಟ್ಟಿಗೆ ಹುರುಪು ಮೂಡಿಸಿದೆ. ಅಂಥವರಲ್ಲಿ ರಫೀಕ್ ಕಾಂಗ್ರೆಸ್ಸಿನ ಫೇವರಿಟ್ ಕ್ಯಾಂಡಿಡೇಟ್ ಆಗಿದ್ದಾರೆ.

ಇಲ್ಲಿ ಒಂದು ಚುನಾವಣಾ ತರ್ಕವಿದೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರೆ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕಳೆದ ಚುನಾವಣೆಯಲ್ಲಿ ಶಾಮನೂರು ಶಿವಶಂಕರಪ್ಪ ಈ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. ಈ ಬಾರಿ ಶಿವಶಂಕರಪ್ಪ ಹಿಂದೆ ಸರಿದು ಮುಸಲ್ಮಾನ ಸಮುದಾಯದ ಒಬ್ಬರಿಗೆ ಟಿಕೆಟು ಸಿಕ್ಕರೆ ಹರಿಹರದಲ್ಲಿ ರಫೀಕ್‌ಗೆ ಕಾಂಗ್ರೆಸ್ ಟಿಕೆಟ್ ಸಿಗಲಾರದು. ಆದರೆ ಶಾಮನೂರರು ಮತ್ತೆ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದರೆ ಹರಿಹರದಲ್ಲಿ ರಫೀಕ್ ಕಾಂಗ್ರೆಸ್ ಅಭ್ಯರ್ಥಿಯಾಗುವುದು ಗ್ಯಾರಂಟಿ. ಒಟ್ಟಾರೆಯಾಗಿ ಹಾಲಿ ಶಾಸಕ ಹರೀಶ ಜಾತಿ ರಾಜಕಾರಣದಲ್ಲಿ ಮುಳುಗಿ ಕೆಟ್ಟ ಹೆಸರು ಪಡೆದಿದ್ದಾನೆ. ಪರಿಣಾಮವಾಗಿ ಹರಿಹರದ ಮತದಾರರು ಹೊಸ ಮುಖಗಳಿಗಾಗಿ ಹಾತೊರೆಯುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಚುನಾವಣೆಯಲ್ಲಿ ಯಾರಿಗೆ ಗೆಲುವುಂಟಾಗುತ್ತದೆ ಎಂದು ಕಾದುನೋಡಬೇಕಷ್ಟೇ.

● ಟಿ.ಎಸ್. ಷಣ್ಮುಖ

ಆತ್ಮಹತ್ಯೆಗಳು


ಕೆಲವಾರ ನಾನು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರಾದ ಕೆ.ಬಿ. ವೆಂಕಟೇಶರ ಎದುರು ಕುಳಿತಿದ್ದೆ. ಅವರು ಗಾಂಧಿಯನ್ನ ಓದಿಕೊಂಡವರು. ಶಾಂತವೇರಿ ಗೋಪಾಲಗೌಡರ ಏರಿಯಾದಿಂದ ಬಂದವರು. ತಮಗೆ ಸಿಕ್ಕ ಹುದ್ದೆಯ ಅಲ್ಪಾವಧಿಯಲ್ಲಿ ಪುಸ್ತಕ ಖರೀದಿ ಮತ್ತು ಸಗಟು ಖರೀದಿಯಲ್ಲಿ ಸುಧಾರಣೆ ತಂದಿದ್ದಲ್ಲದೆ ಪಾರದರ್ಶಕತೆಯನ್ನು ಮೆರೆದವರು. ಆ ಕಾರಣಕ್ಕೆ ಅವರ ಸುತ್ತಲೂ ಒಳ್ಳೆಯ ವಾತಾವರಣವಿದೆ. ಇದು ಬಹಳ ದಿನ ಇರಲಾರದು. ಏಕೆಂದರೆ ಸದ್ಯದಲ್ಲೇ ವೆಂಕಟೇಶರು ನಿವೃತ್ತಿಯಾಗಲಿದ್ದಾರೆ. ಅವರು ನಿವೃತ್ತಿ ಹೊಂದುತ್ತಿರುವುದರಿಂದ ಅವರನ್ನು ಅದ್ದೂರಿಯಾಗಿ ಬೀಳ್ಕೊಡುವ ತಯಾರಿ ನಡೆಸಿದವರಿಗೆ ಅವರು ಹೇಳಿದ ವಿವೇಕ ಏನೆಂದರೆ 'ನಾವು ಸರಕಾರಿ ಕೆಲಸಕ್ಕೆ ಸೇರಿದ ರೀತಿಯಲ್ಲೇ ಹೊರಟುಹೋಗಬೇಕು. ಅದು ಬಿಟ್ಟು ಜರಿಪೇಟಾ ತೊಡಿಸಿ, ಶಾಲು ಹಾರದೊಂದಿಗೆ ಹಿಗ್ಗಾಮುಗ್ಗಾ ಹೊಗಳಿ ಮುಜುಗರ ಉಂಟುಮಾಡುವುದು ನನ್ನ ದೃಷ್ಟಿಯಲ್ಲಿ ಸರಿಯಿಲ್ಲ, ನಾನು ಇಂತಹ ಮುಜುಗರದ ಸನ್ನಿವೇಶಕ್ಕೆ ಖಂಡಿತ ಒಳಗಾಗಲಾರೆ. ಆದ್ದರಿಂದ ನಾನೆಲ್ಲೂ ಬರುವುದಿಲ್ಲ.'



ವೆಂಕಟೇಶರು ತಮ್ಮೆದುರು ಕುಳಿತ ಸಿಬ್ಬಂದಿಗೆ ಹೀಗೆ ಹೇಳುತ್ತಿದ್ದಾಗಲೇ ಹುಸಿಸೌದೆ ಹೊರೆ ಬಿದ್ದ ಶಬ್ದ ಬಂತು. ಪಕ್ಕದ ಆಫೀಸಿನಲ್ಲಿ ಪುಸ್ತಕದ ಬಂಡಲ್ ಬಿತ್ತೇನೊ ಎಂದುಕೊಳ್ಳುವಷ್ಟರಲ್ಲಿ ಕೆಲವರು 'ಯಾರೋ ಮಹಡಿಯಿಂದ ಬಿದ್ದರು' ಎಂದುಕೊಂಡು ಓಡಿದರು. ಸುಮಾರು ಜನ ತಾವಿದ್ದ ಮಹಡಿಯಿಂದಲೆ ಕೆಳಕ್ಕೆ ನೋಡತೊಡಗಿದರು. ನಿಜಕ್ಕೂ ವಿಶ್ವೇಶ್ವರಯ್ಯ ಟವರ್‌ನ 22ನೇ ಮಹಡಿಯಿಂದ ಯುವಕನೊಬ್ಬ ಹಾರಿದ್ದ, ಆತ ಬಿದ್ದ ರಭಸಕ್ಕೆ ಎರಡನೇ ಮಹಡಿಯ ಸಜ್ಜಾದ ಅಲುಗು ಆತನ ಕಾಲಿಗೆ ಬಡಿದ ಕಾರಣಕ್ಕೆ ಕಾಲು ತುಂಡಾಗಿ ಸುಮಾರು 35 ಅಡಿ ದೂರಕ್ಕೆ ಹೋಗಿ ಬಿದ್ದಿತ್ತು. ಆತ ಹಾರಿದ ನೇರಕ್ಕೆ ಬಹುಬೆಲೆಯ ಸರಕಾರಿ ಕಾರೊಂದು ನಿಂತಿದ್ದರಿಂದ, ಅದರ ಬಾನೆಟ್ ತಗ್ಗಿಹೋಗಿ ಗ್ಲಾಸು ಪುಡಿಪುಡಿಯಾಗಿದ್ದವು.


ಅಪ್ಘಾತಯಾದ ಕಾರು

ಬೆಂಗಳೂರ ಜನ ದುರಂತ ನೋಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಆದ್ದರಿಂದ 22ನೇ ಮಹಡಿ ಮತ್ತು ಆತ ಬಿದ್ದ ಜಾಗವನ್ನು ಅಳೆದು ಸುರಿದು ಚರ್ಚಿಸಿಕೊಂಡು ಹೊರಟರು. ಕಾಡಲ್ಲಿ ಒಂದು ಮಿಕ ಬಿದ್ದ ಕೂಡಲೇ ಅಲ್ಲಿಗೆ ರಣಹದ್ದು ಹೈನಾಗಳು, ಕಡೆಯಲ್ಲಿ ಸಿಗುವ ಉಚ್ಚಿಷ್ಟಗಳಿಗಾಗಿ ಹೊಂಚುವ ನರಿಗಳೆಲ್ಲ ಸೇರುವಂತೆ ಟಿ.ವಿ. ಜನ ಕ್ಯಾಮೆರಾ ಮೈಕ್‌ನೊಂದಿಗೆ ಹಾಜರಾಗಿ ಬಿಟ್ಟರು. ಕ್ಯಾಮೆರಾದವನು ತಮ್ಮದೇ ಸಿಬ್ಬಂದಿಯನ್ನು ಶೂಟ್ ಮಾಡುತ್ತಾ ಮಾತನಾಡಿಸುವಾಗ ಹಲವು ಜನ ಕ್ಯಾಮರಾಕ್ಕೆ ಬೀಳುವ ತವಕದಲ್ಲಿ ನಗುಮೊಗದೊಂದಿಗೆ ಅಡ್ಡಾಡುತ್ತಿದ್ದರು.




ನಾನು ನಡುಗುತ್ತಿದ್ದ ಕೈಕಾಲುಗಳನ್ನು ತಹಬಂದಿಗೆ ತಂದುಕೊಂಡು ನೋಡಲು ಯತ್ನಿಸಿದೆ. ಆರೋಗ್ಯವಂತ ಯುವಕ. ಮಹಾ ಧೈರ್ಯವಂತ. ಏಕೆಂದರೆ ವಿಶ್ವೇಶ್ವರಯ್ಯ ಟವರ್‌ನ 22ನೇ ಮಹಡಿಯ ತುದಿ ನೋಡಿದರೆ ತಲೆ ತಿರುಗುತ್ತದೆ. ಜೋಗ್‌ಫಾಲ್ಸಿನ ತಳದಲ್ಲಿ ನಿಂತು ತುದಿ ನೋಡಿದಂತಾಗುತ್ತದೆ. ಅದು ಹುಟ್ಟಿಸುವ ಭಯವೇ ಸಾವಿಗೆ ಬೇರೆ ಮಾರ್ಗವನ್ನು ಹುಡುಕಿಕೊಳ್ಳುವಂತೆ ಮಾಡುತ್ತದೆ. ಆದ್ದರಿಂದ ಅನಾಮತ್ತು ಅಲ್ಲಿಂದ ಜಿಗಿದ ಈತ ಮಹಾ ಧೈರ್ಯವಂತ ಅನ್ನಿಸಿದರೂ ಅವನನ್ನು ಈ ಸ್ಥಿತಿಗೆ ದೂಡಿದ ಕಾರಣಗಳೇನಿರಬಹುದೆಂದು ಯೋಚಿಸತೊಡಗಿದೆ. ಅಷ್ಟರಲ್ಲಿ ಸುತ್ತಲಿನ ಜನ ತಮ್ಮ ಲಂಗು ಲಗಾಮಿಲ್ಲದ ನಾಲಿಗೆಗಳನ್ನು ಝಳಪಿಸತೊಡಗಿದರು.

ಒಬ್ಬ 'ಇದು ಗ್ಯಾರಂಟಿ ಲವ್ ಕೇಸು' ಎಂದ. ಮತ್ತೊಬ್ಬ 'ಸಾಲ ಸೋಲ ಮಾಡಿಕೊಂಡಿರಬಹುದೇನೊ' ಎಂದ. ಅದಕ್ಕುತ್ತರವಾಗಿ ಇನ್ನೊಬ್ಬ 'ಈ ಕಾಲದಲ್ಲಿ ಸಾಲ ಮಾಡಿದೋರ್‍ಯಾರೂ ಸಾಯದಿಲ್ಲ, ಕೊಟ್ಟೋರು ಸಾಯಬೇಕಷ್ಟೆ' ಎಂದು ನಕ್ಕ. 'ಈತ ಯಾರನ್ನೊ ಲವ್ ಮಾಡಿದ್ದನಂತೆ. ಆಕೆ ಗರ್ಭಿಣಿಯಂತೆ. ಮದುವೆಯಾಗು ಅಂದಿದ್ದಳೆ. ಅದಕ್ಕೆ ಈತ ನಮ್ಮ ಟವರ್ ಸೆಲೆಕ್ಟ್ ಮಾಡಿಕೊಂಡು ಹಾರಿಕೊಂಡ' ಎಂದು ಒಬ್ಬ ಖಚಿತವಾಗಿಯೇ ಹೇಳತೊಡಗಿದ್ದ. ಅಷ್ಟರಲ್ಲಿ ಅದಕ್ಕೆ ಪೂರಕವಾಗಿ ಅವನು ನೆಗೆದ ಜಾಗದಲ್ಲಿ ಒಂದು ಹುಡುಗಿಯ ಫೋಟೋ ಪೊಲೀಸರಿಗೆ ಸಿಕ್ಕಿತಂತೆ ಎಂಬ ಸುದ್ದಿಯೊಂದು ಕ್ಷಣಾರ್ಧದಲ್ಲಿ ಸುಳಿದಾಡಿತು.

ಆತನ ಕಾಲು ಬಿದ್ದ ಜಾಗದಲ್ಲಿ ಒಂದಿಬ್ಬರು ಹಾಸ್ಯ ಮಾಡಿಕೊಂಡು ನಗುತ್ತಿದ್ದರು. ನಾನು ಕಿವಿಗೊಟ್ಟೆ. 'ಆತ್ಮಹತ್ಯೆ ಮಾಡಿಕೊಂಡವನ ಕಾಲು ಇಲ್ಲಿವರೆಗೂ ಬಂತಲ್ಲಾ, ನಿನಿಗೇನಾರ ಬಡದಿದ್ರೆ ನೀನು ಸ್ಪಾಟ್ ಅಲ್ಲವೇ' ಎಂದು ಸಾವಿನಲ್ಲೂ ಹಾಸ್ಯ ಸೃಷ್ಟಿಸಿಕೊಂಡು ಅವರಿಬ್ಬರು ಗಹಗಹಿಸಿ ನಗುತ್ತಿದ್ದರು. ಸಂಜೆಯಾಗುತ್ತಿದ್ದಂತೆ ಪುಡಿಯಾದ ಕಾರಿನ ಗಾಜು ಮತ್ತು ರಕ್ತದ ಕಲೆಯ ಮೇಲೆಯೆ ಜನ ಓಡಾಡತೊಡಗಿದರು. ಅದನ್ನ ನೋಡಲಾರದವನೊಬ್ಬ ಗಾಜಿನ ಪುಡಿ ಗುಡಿಸಿ ರಕ್ತದ ಕಲೆ ತೊಳೆದ. ಜನ ನಿರಾತಂಕವಾಗಿ ಓಡಾಡುತ್ತಾ ತಾವೂ ಸಾಕ್ಷಿಯಾದ ಸಾವಿನ ಸುದ್ದಿಯನ್ನು ಓದಲು ಪತ್ರಿಕೆ ಕೊಳ್ಳತೊಡಗಿದರು. ಒಂದೊಂದು ಪತ್ರಿಕೆ ಒಂದೊಂದು ತರವಾಗಿ ಕೆರೆದುಕೊಂಡಿದ್ದವು.

ನನಗೆ ಸಾವು ಸಂಭವಿಸಿದ ಕೂಡಲೇ ಏನೂ ಅನ್ನಿಸುವುದಿಲ್ಲ, ಆದರೆ ಕ್ರಮೇಣ ಬೆನ್ನ ಹತ್ತುತ್ತವೆ. ಹೇಗೆಂದರೆ ಜನ್ಮಕೊಟ್ಟವರು ಬದುಕಿದ್ದರೆ ಅವರ ಯಾತನೆ, ಮದುವೆಯಾಗಿದ್ದರೆ ಹೆಂಡತಿಯ ರೋದನ, ಅವಳನ್ನ ನೋಡುವ ತಬ್ಬಲಿ ಮಕ್ಕಳ ಕಣ್ಣಲ್ಲಿ ತುಂಬಿದ ನೀರು...ಹೀಗೆ ಬೆನ್ನ ಹತ್ತುವ ಕಾರಣಗಳು ಜೀವ ಹಿಂಡುತ್ತವೆ. ಇತ್ತೀಚೆಗೆ ಈ ತರ ಕಾಡಿಸಿದ ನೋವು ಏಣಗಿ ನಟರಾಜನ ಸಾವು. ಇದೂ ಒಂದು ರೀತಿಯ ಆತ್ಮಹತ್ಯೆಯೆ!



ಆಗ ಹೆಗ್ಗೋಡು ಇಡೀ ನಾಡಿನ ಗಮನ ಸೆಳೆದ ಕೇಂದ್ರವಾಗಿತ್ತು, ಈಗಿನಂತೆ ಪಟಾರವಾಗಿರಲಿಲ್ಲ. ಗೆಳೆಯರಾ[...] ಅಜ್ಜಂಪುರದ ಕೃಷ್ಣಮೂರ್ತಿ, ಮಹಾವೀರ ಜೈನ್ ಇವರೆ[...] ತರಬೇತಿ ವಿದ್ಯಾರ್ಥಿಗಳಾಗಿದ್ದರು. ಆಗಲೇ ನಾನು ಏಣ[...] ನಟರಾಜ್‌ನನ್ನು ನೋಡಿದ್ದು. ಕೆ.ವಿ.ಸುಬ್ಬಣ್ಣನ ಪ್ರಭಾವದಿ[...] ಅವರೆಲ್ಲಾ ಎಲೆಯಡಿಕೆಯನ್ನ ಆಡುಸೊಪ್ಪು ಮೇವ[...] ಮೇಯುತ್ತಿದ್ದರು. ಬಹುಶಃ ಸಿಗರೇಟಿಗೆ ಅಂಟಿಕೊಂಡಿ[...] ನಟರಾಜನಿಗೆ ಸುಬ್ಬಣ್ಣಾ ಎಲೆಯಡಿಕೆ ಅಂಟಿಸಿದ್ದರು.

ಆಗಿನ ತಿರುಗಾಟದ ನಾಟಕಗಳನ್ನು ನೋಡಿ[...] ಲಂಕೇಶ್ ನಟರಾಜನ ಬಗ್ಗೆ 'ಇವನೊಬ್ಬ ಅದ್ಭುತ ನ[...] ಎಂದು ಬರೆದರು. ಇಂತಹ ನಟನನ್ನು ನಾವು ಮ[...] ನೋಡಲು 'ಸಂಕ್ರಾಂತಿ' ಧಾರಾವಾಹಿ ಬರುವವರೆಗ[...] ಕಾಯಬೇಕಾಯ್ತು, ಯಕ್ಕುಟ್ಟಿ ಹೋಗುತ್ತಿರುವ ಕನ್ನ[...] ಸಿನಿಮಾರಂಗದವರಿಗೆ ನಟರಾಜ್ ತರಹದವ[...] ಕಾಣುವುದಿಲ್ಲ, ಹಾಗಾಗಿ ಈ ನಟರಾಜನ ಅದ್ಭುತ ನಟ[...] ನೋಡಲು ಧಾರಾವಾಹಿಗಳನ್ನ ನೋಡಬೇಕಾಯ[...] ವಹಿಸಿಕೊಂಡ ಪಾತ್ರವೇ ಆಗಿಬಿಡುತ್ತಿದ್ದ ನಟರಾ[...] ಮಾತಿನಲ್ಲಿ, ನೋಟದಲ್ಲಿ, ಒಟ್ಟು ಆಂಗಿಕ ಅಭಿನಯದ[...]

ಕಥೆ

ಕೊನೆಯ ಪುಟಗಳು

ಅಕ್ಟೋಬರ್ 1

ಪ್ರತಿಯೊಬ್ಬನಿಗೂ ವರ್ಷದ ಯಾವುದಾದರೊಂದು ದಿನ ಪ್ರಮುಖವಾಗಿರುತ್ತೆ. ಹೈಸ್ಕೂಲಿನಲ್ಲಿ ಪುಂಡಾಟಗಳು; ಮುಂಜಾನೆ ಟ್ಯೂಷನ್ನೂ, ಬೆಳಗ್ಗೆ ಕಾಲೇಜು, ಸಂಜೆ ಮತ್ತೊಂದೆರಡು ಟ್ಯೂಷನ್ನೂ, ರಾತ್ರಿ ಒಂದಷ್ಟು ಓದು. ಪಿಯುಸಿಯಲ್ಲಿ ಬೇರೇನನ್ನೂ ಯೋಚಿಸಲು ಸಮಯವಿರಲಿಲ್ಲ. ಓದಿದ್ದು ವ್ಯರ್ಥವಾಗದೆ ಮೆಡಿಕಲ್ ಸೀಟು ಸಿಕ್ಕಿ ಇವತ್ತಿಗಾಗಲೇ ಹತ್ತು ವರ್ಷವಾಯಿತು. ಜೀವನದ ವಿವಿಧ ಮಜಲುಗಳನ್ನು ಪರಿಚಯಿಸಿದ ಚೇತನ್‌ನ ಪರಿಚಯವಾದ ದಿನವಿದು. ನನ್ನ ಜೀವನದ ಪ್ರಮುಖ ದಿನ. ಕೆಲವು ವರ್ಷಗಳ ಹಿಂದಿನವರೆಗೂ ನನ್ನಲ್ಲಿ ಉತ್ಸಾಹ ಮೂಡಿಸುತ್ತಿದ್ದ ದಿನ. ಆದರೀಗ? ಆತ್ಮಸಾಕ್ಷಿಯ ಇರಿತಕ್ಕೆ ಜರ್ಝರಿತನಾಗಿದ್ದೇನೆ.

ಅಕ್ಟೋಬರ್ 2

ಅದು ಆದರ್ಶಗಳು ಉತ್ಕರ್ಷದಲ್ಲಿದ್ದ ಕಾಲ. ಆಸ್ಪತ್ರೆಯ ಹತ್ತಿರದ ಅಗ್ರಹಾರ ಸರ್ಕಲ್‌ನಲ್ಲಿದ್ದ ಗಣೇಶ ಟೀ ಶಾಪಿನಲ್ಲಿ ಕುಳಿತು ಬೈಟು ಚಾ ಕುಡಿಯುತ್ತ ಸಿಗರೇಟಿನ ಹೊಗೆಯನ್ನು ಅಂತರ್ಗತವಾಗಿಸುತ್ತಿದ್ದ ಸಮಯದಲ್ಲಾಗಲೀ, ಅರ್ಥವೇ ಇಲ್ಲದ ಚಿತ್ರವೊಂದಕ್ಕೆ ಹೋಗಿ ಟಾಕೀಸಿನ ಚಿತ್ರಮಂದಿರದಲ್ಲಿ ಕುಳಿತಾಗಾಗಲೀ, ರಾತ್ರಿ ಹೈವೇ ಡಾಬಾದಲ್ಲಿ ಊಟಕ್ಕೆ ಹೋದಾಗಾಗಲೀ ಬರೀ ಆದರ್ಶ, ಕ್ರಾಂತಿ, ಹೋರಾಟ, ಬದಲಾವಣೆಯ ಬಗ್ಗೆಯೇ ಮಾತು. "ಆದರ್ಶ, ಹೋರಾಟಗಳ ಬಗ್ಗೆ ಗಂಟೆಗಟ್ಟಲೇ ಮಾತನಾಡಿದಾಕ್ಷಣ ಏನನ್ನೂ ಬದಲಿಸಲಾಗದು. ಕ್ರಾಂತಿಯ ಬಗ್ಗೆ ಮಾತನಾಡುತ್ತಾ ಕಲ್ಪನಾಲೋಕದಲ್ಲಿ ವಿಹರಿಸೋದು ಸುಲಭದ ಕೆಲಸ. ನಿಜಕ್ಕೂ ಮುಂದಿನ ನಮ್ಮ ವಾಸ್ತವ ಜೀವನದಲ್ಲಿ ಇವತ್ತಿನ ಆದರ್ಶಗಳನ್ನು ಪಾಲಿಸುತ್ತೀವಾ?" ನಿನ್ನ ಗಂಭೀರ ಮಾತುಗಳಿಗೆ ನಗೆಯಾಡುತ್ತ "ಒಳ್ಳೆ ನಿರಾಶಾವಾದಿ ಕಣಪ್ಪ ನೀನು" ಎಂದು ಹೇಳುತ್ತ ನಮ್ಮ ಕಲ್ಪನಾಲೋಕದ ಪಯಣವನ್ನು ಮುಂದುವರಿಸುತ್ತಿದ್ದೆವು. ನೆನಪಿದೆಯಾ ಚೇತು? ಗಾಂಧಿ ಬಗ್ಗೆ ಘನಗಾಂಭೀರ್ಯದಿಂದ ಚರ್ಚಿಸುತ್ತ ನಾವೆಲ್ಲ ಟಿಪಿಕಲ್ ಓಲ್ಡ್ ರಮ್ ಹೀರುತ್ತಿದ್ದರೆ ನಿನ್ನ ಕಣ್ಣಂಚಿನಲ್ಲಿ ಸಣ್ಣ ವ್ಯಂಗ್ಯದ ನಗು. ಆ ನಗುವನ್ನು ಮರೆಮಾಡೋದಿಕ್ಕೋಸ್ಕರವಾಗಿಯೇ ಮುಖದ ಮುಂದೆ ಸಿಗರೇಟಿನ ಹೊಗೆ ತುಂಬಿಸುತ್ತಿದ್ದೆಯಲ್ಲವೇ?


ನೀನು ಕೊಟ್ಟ ಸ್ಫೂರ್ತಿಯಿಂದ ಡೈರಿ ಬರೆಯೋದಿಕ್ಕೆ ಆರಂಭಿಸಿ ಒಂಬತ್ತು ವರ್ಷವಾಯಿತು. ನನ್ನ ಮನೆಯವರ ಕೈಗೆ ಸಿಕ್ಕರೆ ಏನೇನಾಗುತ್ತಿತ್ತೋ?!

ಅಕ್ಟೋಬರ್ 3

ಜೀವದ ಗೆಳೆಯ ಚೇತನ್,

ಜೀವನ ನನ್ನನ್ನು ತೊರೆದು ಹೋಗುವವನನ್ನು ಮರೆಯದ ದಿನ ಅನುಭವಿಸಿದ ಯಾತನೆ, ಬೇಸರವನ್ನು ಇವತ್ತಿಗೂ ಮರೆಯಲಾಗಿಲ್ಲ, ಅದಕ್ಕಿಂತಲೂ ಹಿಗಿಲಾದ ಬೇಸರವಿರಲು ಸಾಧ್ಯವೇ ಇಲ್ಲವೆಂದು ಭಾವಿಸಿದ್ದೆ. ಇಂದು ಮನದಲ್ಲಿ ಮೂಡುತ್ತಿರುವ ಬೇಸರ, ಜಿಗುಪ್ಸೆ; ಈ ಭಾವನೆಗಳನ್ನೆಲ್ಲ ಹೇಳಿಕೊಳ್ಳಲು ಹತ್ತಿರದವರು ಯಾರೂ ಇಲ್ಲದ ಅಸಹಾಯಕತೆ....

"ಏನು ಡಾಕ್ಟ್ರೇ ಇವನು. ದುಡ್ಡು ದುಡ್ಡು ಅಂತ ಸಾಯ್ತಾನೆ. ಐವತ್ತಾವಿರ ಕಟ್ಟಿದ್ದೀವಿ ಸರ್, ಇನ್ನು ಐದು ಸಾವಿರ ಊರಿನಿಂದ ತರ್ತಿದ್ದಾನೆ ನನ್ನ ತಮ್ಮ, ನೀವು ಆಪರೇಷನ್ ಮುಗಿಸುವಷ್ಟರಲ್ಲಿ ತಂದು ಕಟ್ತೀವಿ ಅಂದ್ರೂ, ಪೂರ್ತಿ ದುಡ್ಡು ಕಟ್ಟದಿದ್ರೆ ನಾಡಿಮಿಡಿತಾನೂ ನೋಡಲ್ಲ ಅಂದ್ಬಿಟ್ಟ. ಧನಪಿಶಾಚಿ" ರೋಗಿಯೊಬ್ಬರ ಕಡೆಯವರು ನನ್ನ ಬಗ್ಗೆ



ಆಡುತ್ತಿದ್ದ ಮಾತುಗಳಿವು. ಬಹುಶಃ ನನ್ನೆಲ್ಲಾ ರೋಗಿಗಳು ಹೀಗೇ ಮಾತನಾಡುತ್ತಾರೇನೋ? ಇವರ ಮಾತು ಮಾತ್ರ ಆಕಸ್ಮಿಕವಾಗಿ ಕೇಳಿಸಿಬಿಟ್ಟಿತು.

"ಬಡರೋಗಿಗಳ ಬಳಿ ಕಡಿಮೆ ಹಣ ತೆಗೆದುಕೊಳ್ಳಬೇಕು. ಪ್ರತಿ ಭಾನುವಾರ ಹಳ್ಳಿಗಳಲ್ಲಿ ಉಚಿತ ಕ್ಯಾಂಪ್ ಮಾಡಬೇಕು. ಡ್ರಗ್ ಕಂಪನಿಗಳಿಂದ ಯಾವತ್ತಿಗೂ ಕಮಿಷನ್ ತೆಗೆದುಕೊಳ್ಳಬಾರದು..." ಸಾವಿರ ಕನಸುಗಳಿದ್ದವು. ಕನಸು ಹಂಚಿಕೊಳ್ಳಲು, ತುಂಬಲು ನಿನ್ನಂಥ ಗೆಳೆಯರಿದ್ದರು. ನೀನು ಹೇಳಿದ್ದು ಸತ್ಯ, ವಾಸ್ತವದ ಪ್ರವಾಹದಲೆಗಳಿಗೆ ಎದುರಾಗಿ ಆದರ್ಶದ ಹಾಯಿದೋ[...] ಮುಳುಗದಂತೆ ತಡೆದು ಗುರಿಯತ್ತ ತುಟ್ಟಿಹಾಕುವುದು... ನನ್ನಿಂದಂತೂ ಸಾಧ್ಯವಾಗಲಿಲ್ಲ.

ಸರ್ಜರಿ ಸೀಟಿಗೆ ದುಡ್ಡು ಕಟ್ಟಲು ಬ್ಯಾಂಕಿನಿಂದ ಹದಿನೈದು ಲಕ್ಷ ಸಾ[...] ತೆಗೆದುಕೊಂಡಾಗಲೇ ನೀನು ಎಚ್ಚರಿಸಿದ್ದೆ. "ಈ ಸಾಲ ತೀರಿಸುವುದಕ್ಕಾದರೂ ನಿನ್ನೆಲ್ಲ ಕನಸುಗಳನ್ನು ತಾತ್ಕಾಲಿಕವಾಗಿಯಾದರೂ ತೊರೆದುಹಾಕಿ ದು[...] ವಸೂಲಿಗೆ ನಿಲ್ಲಬೇಕು. ಒಮ್ಮೆ ದುಡ್ಡಿನ ರುಚಿ ಹತ್ತಿದ ಮೇಲೆ [...] ಹೋಗ್ಬಿಡು..." ನನಗೂ ಅದು ಸತ್ಯ ಅನ್ನಿಸಿತ್ತು. ಬಹುತೇ[...] ಎಲ್ಲ ಗೆಳೆಯರೂ ಪಿಜಿ ಸೀಟು ತೆಗೆದುಕೊಂಡಿದ್ದರು. ಬೇರೆಯವ[...] ಜೀವನಶೈಲಿ, ಅವರ ಏಳಿಗೆಯಿಂದ ಹಿಗ್ಗದೆ ಕುಗ್ಗದೆ ಬದುಕುವ ನಿನ್ನ ನಿರ್ಲಿಪ್ತತೆ ನನ್ನಲ್ಲಿರಲಿಲ್ಲ. ಸುತ್ತಲಿ[...] ಪ್ರಪಂಚವೆಲ್ಲ ಹಣದ ಬೆನ್ನತ್ತಿ ನಿಂತಿರುವಾಗ ಸೇವೆ, ಪ್ರ[...] ಆದರ್ಶ ಅಂತ ಮಾತನಾಡುವುದೇ ಅವಮಾನದ, ಅಪಹಾಸ್ಯದ ಸಂಗತಿಯಾಯ[...] ಪಿಜಿಗೆ ಸೇರಿದ ನಂತರ ಜಿಜ್ಞಾಸೆಗಳು ಹೆಚ್ಚುತ್ತಾ ಸಾಗಿದವು. ಮನದಲ್ಲಿ ಉತ್ತರ ಸಿಗದ ಸಾವಿರಾರು ಪ್ರಶ್ನೆಗಳು. ಉತ್ತರ ಕೊಡುವ ಅರ್ಹತೆಯಿದ್ದ ನೀನು ಯಾರಿಗೂ ಹೇಳದೆ ನಿನ್ನದೇ ದಾರಿಯಲ್ಲಿ ಸಾಗಿಬಿಟ್ಟೆ. ಈಗ ಎಲ್ಲಿದ್ದೀಯೋ[...] ಘಟ್ಟದ ಗುಡ್ಡವೊಂದರ ಮೇಲಾ ಅಥವಾ ಪ್ರಪಾತದಲ್ಲಾ?

"ಆತ್ಮಹತ್ಯೆ ಮಾಡಿಕೋಳ್ಳೋದು ಮಹಾಪಾಪದ ಕೆಲಸ. It is a gre[...] sin." ಹಿಂದೆ ನಾನೇ ಹೇಳುತ್ತಿದ್ದ ಮಾತುಗಳು ಮುಂದೊಂದು ದಿನ ನನ್ನ[...] ಇರಿಯುತ್ತವೆ ಎಂದೆಣಿಸಿರಲಿಲ್ಲ, ಇಷ್ಟೆಲ್ಲ ಬರೆದ ಮೇಲೂ "ನನ್ನ ಸಾವಿ[...] ಯಾರೂ ಕಾರಣರಲ್ಲ" ಅಂತ ಬರೆಯೋದು ಮೂರ್ಖತನ. 'ಇವರೇ ನ[...] ಸಾವಿಗೆ ಕಾರಣ' ಎಂದು ನಿರ್ದಿಷ್ಟವಾಗಿ ಬರೆಯಲು ಎದುರಿಗೆ ಒಬ್ಬ ವ[...] ನಿಂತಿಲ್ಲ, ಇಡೀ ವ್ಯವಸ್ಥೆಯೇ ಇದೆ. ಮುಂಚೂಣಿಯಲ್ಲಿ ನನ್ನ ಆತ್ಮಸಾ[...] ನಿಂತಿದೆ. ಪಕ್ಕದಲ್ಲಿ ನನ್ನ ಆತ್ಮಸಾಕ್ಷಿಯ ಪ್ರತಿಬಿಂಬವಂತೆ ನೀನು.

ಅಪರಾಧಿ ಭಾವವೇ ಮನದಲ್ಲಿ ಹುಟ್ಟದವರಿಗೆ ಮಾತ್ರ ತಪ್ಪುಗಳ ಮೇ[...] ತಪ್ಪುಗಳನ್ನು ಮಾಡುವುದು ಸಾಧ್ಯವೇನೋ? ಡೈರಿಯ ಈ ಕೊನೆಯ ಪು[...] ನಿನಗೆ ಬರೆಯುತ್ತಿದ್ದೀನೋ ಅಥವಾ ನನ್ನೊಳಗಿನ ನನಗೋ? ಎರಡಕ್ಕೂ ಅಂಥ ವ್ಯತ್ಯಾಸವಿರಲಾರದು ಬಿಡು. ಈಗಲೂ ನಾನು ಸರಿದಾರಿಯ[...] ಸಾಗಬಹುದು ಅನ್ನಿಸುತ್ತೆ. ನನಗೇ ಯಾಕೋ ವಿಶ್ವಾಸವಿಲ್ಲ, ಸಾಯು[...] ಇಚ್ಛೆಯಿರದಿದ್ದರೂ ಬದುಕಬೇಕೆಂಬ ಆಸೆ ಸತ್ತುಹೋಗಿದೆ... ಬರುತ್ತೀ[...] ಕಾಮ್ರೇಡ್...

– ಡಾ.ಕೆ.ಆರ್.ಅಶೋಕ

(ಡಾ. ಅಶೋಕ್ ಅವರು ಸುಳ್ಳದ ಕುರಂಜಿಬಾಗ್‌ನಲ್ಲಿರು[...] ಕೆ.ವಿ.ಜಿ ವೈದ್ಯಕೀಯ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾ[...])

ರುತ್ತಿದ್ದ ಚಮತ್ಕಾರ ಬೆರಗು ಹುಟ್ಟಿಸುತ್ತಿತ್ತು.

ಕವಿತಾ ಲಂಕೇಶ್ 'ಮುಸ್ಸಂಜೆ ಕಥಾ ಪ್ರಸಂಗ' ಬರಿಯನ್ನು 'ಅವ್ವ' ಎಂಬ ಹೆಸರಿನಡಿ ಚಿತ್ರ ಮಾಡಲು ದಾಗ, ಮೇಷ್ಟ್ರು ಸಣ್ಣೀರಪ್ಪನ ಪಾತ್ರ ಮಾಡಲು ಯಾರು ರ್ಥರು ಎಂದು ಚರ್ಚಿಸಲಾರಂಭಿಸಿದೆವು. ಆಗ ತಟ್ಟನೇ ಳಿದವನು ನಟರಾಜ. ಕೂಡಲೇ ಆತನನ್ನು ರ್ಕಿಸಿದಾಗ ನಟರಾಜ್ ಮರುಮಾತಿಲ್ಲದ ಖುಷಿಯಿಂದ ಕೊಂಡ.

ಅದಾಗಲೇ ಎಂ.ಪಿ ಪ್ರಕಾಶ್ ರಂಗ ಭಾರತೀಯ ೀಶಕರಾಗಿ ನಟರಾಜನನ್ನು ನೇಮಿಸುವ ತಯಾರಿ ದ್ದರು. ನನಗೆ ತಿಳಿದಂತೆ ನಟರಾಜ ಅದ್ಭುತ ಕಲಾವಿದನೇ ರತು, ಜವಾಬ್ದಾರಿ ನಿರ್ವಹಿಸುವ ಯಜಮಾನಿಕೆ ತೆಯಿದ್ದವನು. ಆದ್ದರಿಂದ ಆತ ಅನಿವಾರ್ಯವಾಗಿ ಕೊಂಡ ಯಾವ ಜವಾಬ್ದಾರಿಯನ್ನು ಪೂರ್ಣ ಮಾಡದೆ ವಲ್ಲೇ ಬಿಟ್ಟುಹೋದ ಉದಾಹರಣೆಗಳಿವೆ. ಹಾಗೆ ಕನಿಂದಲೂ ಮಧ್ಯದಲ್ಲೇ ಹೊರಟುಹೋದ. ತಂದೆ ದರ ಗಡಿಯಲ್ಲಿದ್ದರೆ, ಮಗ ಐವತ್ತರ ಗಡಿಯಲ್ಲೇ ರೆಯಾದ. ಆದರೆ ಈ ಸಾವು ಕನ್ನಡ ರಂಗಭೂಮಿಗೆ ಬಲಾರದ ನಷ್ಟ ಎಂದು ಹೇಳುತ್ತಾರಲ್ಲ ಅಂತಹ

ಇತ್ತೀಚೆಗೆ ಕವಿತಾ ಲಂಕೇಶ್ ಒಂದು ಅಪರೂಪದ ತೆ ಹೆಣೆದಿದ್ದರು. ಸತ್ತ ದನ ತಿಂದು ಬದುಕಿಬಂದ ಟುಂಬವೊಂದರ ದಾರುಣ ಕತೆ. ಈ ದಾರುಣತೆ ಅವರ ಗೇ ಬರದೆ ಜೀವನೋತ್ಸಾಹದಿಂದ ಬದುಕು ದವರು. ಆದರೆ ಮನೆಯ ಯಜಮಾನನಿಗೆ ಕ್ಷಯ. ಕಿಗೆ ಅಸ್ಪೃಶ್ಯತೆಯ ಅವಮಾನಗಳು- ಈ ಎರಡನ್ನೂ ಗೆ ತೋರುವ ಶಕ್ತಿ ನಟರಾಜನಿಗೆ ಮಾತ್ರ ಇದೆ ದು ಗ್ರಹಿಸಿದ ಕವಿತಾ ಲಂಕೇಶ್ ಈ ಕತೆ ಚಿತ್ರವಾದರೆ ರಾಜನಿಂದಲೇ ಮಾಡಿಸಬೇಕೆಂದಿದ್ದರು.

ನಟರಾಜನಂತೆಯೇ ತನ್ನ ಬದುಕನ್ನ ನೀಗಿಕೊಂಡ ಬ್ಬ ಕಲಾವಿದ ಧ್ರುವರಾಜ ದೇಶಪಾಂಡೆ. ಲಂಕೇಶರ ಮುಖ' ನಾಟಕವನ್ನು ಅದ್ದೂರಿಯಾಗಿ ರಂಗದ ಮೇಲೆ ಮೊಟ್ಟಮೊದಲ ನಿರ್ದೇಶಕ. ನಟನೆಯಲ್ಲೂ ಎತ್ತಿದ ಆದರೆ ಎಲ್ಲಾ ಮುಗಿದ ಮೇಲೆ ಕಂಠಪೂರ್ತಿ ಗಲೇಬೇಕು. ಅದರ ಜೊತೆಗೆ ಜರದಾ, ಗುಟಕ ಇಂತಹ ನೊ ಮಾರಣಾಂತಿಕ ಪದಾರ್ಥಗಳನ್ನ ಬಾಯಿಗೆ ತುಂಬಿ ತ್ತಿದ್ದರು. ನಟರಾಜನೂ ಹಾಗೆಯೇ. ಇವರಿಬ್ಬರೂ ಅಮಲಿನಲ್ಲಿರಲು ಹಾತೊರೆಯುತ್ತಿದ್ದ ವ್ಯಸನಿಗಳು.

ಧ್ರುವರಾಜ್ ದೇಶಪಾಂಡೆ ಕಡೆಗಳಿಗೆಯಲ್ಲಿ ಶಿವಮೊಗ್ಗಕ್ಕೆ ಾಗ ಅವರ ಆಕಾರ ನೋಡಿ ದಂಗುಬಡಿದ ನಾನು ರಾಜ್ ದೇಶಪಾಂಡೆ ಪ್ರೇತ ನೋಡಿದಂಗಾಯ್ತು ಕಣ್ರೀ' ಎಂದೆ. ಧ್ರುವರಾಜ್ ನಕ್ಕು 'ಅಂಗೇನ್ರಿ' ಎಂದರು.

ಅತ್ತ ಮುಂದಾಗಿ ಹೊರಟ ವ್ಯಸನಿಗಳು ಏನೇ ಬೈದರೂ ನಗುತ್ತಾರೆ. ಬೇಕಾದರೆ ತಮ್ಮನ್ನೆ ತಾವು ಹಾಸ್ಯ ಮಾಡಿಕೊಳ್ಳುತ್ತಾರೆ. ಧ್ರುವರಾಜ್ ಕೂಡ ತನ್ನ ಬದುಕನ್ನ ತಾನೇ ನೀಗಿಕೊಂಡ. ಅವರ ಇಬ್ಬರು ಹೆಂಡತಿಯರು ಹೇಗೆ ಬದುಕಿದ್ದಾರೊ ಏನೋ.

ಮತ್ತೊಬ್ಬ ಜಯತೀರ್ಥ ಜೋಶಿ. ಹೊಸ ಸಂವೇದನೆ ನಾಟಕಗಳನ್ನು ಈತನಷ್ಟು ಅದ್ಭುತವಾಗಿ ರಂಗದ ಮೇಲೆ ತರುತ್ತಿದ್ದವರೇ ವಿರಳ. ಆತ ಕಡೆಗಳಿಗೆಯಲ್ಲಿ ಭೇಟಿಯಾದಾಗ ಒಂದು ಅದ್ಭುತ ಕನಸನ್ನು ಹೇಳಿದ್ದ. ಅದೇನೆಂದರೆ 'ಮಹಾ ಚೈತ್ರ', 'ತಲೆದಂಡ' ಮತ್ತು 'ಸಂಕ್ರಾಂತಿ' ನಾಟಕಗಳನ್ನು ಒಟ್ಟು ಸೇರಿಸಿ ವಿನೂತನ ನಾಟಕವೊಂದನ್ನು ರಂಗದ ಮೇಲೆ ತರುತ್ತೇನೆ ಎಂದಿದ್ದ. ಇದ್ದರೆ ತಂದೇ ತರುತ್ತಿದ್ದ. ಅಂತಹ ಸಾಹಸಿ. ಆದರೆ ಆತನೂ ಕಣ್ಮರೆಯಾದ.

ನಮ್ಮ 'ಕಟ್ಟೆಪುರಾಣ' ನಾಟಕದ ಮುಖ್ಯ ಪಾತ್ರಧಾರಿಗಳಿಬ್ಬರು ಏಣಾಗಿ ನಟರಾಜನ ದಾರಿಯಲ್ಲಿ ಬಹಳ ದೂರ ಸಾಗಿದ್ದರು. ಆದರೆ ಯಾಕೊ ಹಠಾತ್ತನೆ ಅವರಿಬ್ಬರೂ ಕುಡಿತ ನಿಲ್ಲಿಸಿದ್ದಾರೆ. ಇದೆಷ್ಟು ಕಷ್ಟದ ಕೆಲಸವೆಂದು ಕುಡಿಯುತ್ತಿರುವವರಿಗೇ ಗೊತ್ತು. 'ಕಟ್ಟೆಪುರಾಣ' ಈವರೆಗೆ ಮೂವತ್ತೈದು ಶೋಗಳನ್ನು ಕೊಟ್ಟಿದೆ. ನಾಟಕ ಮುಗಿದ ಕೂಡಲೇ ಒಂದು ಎಣ್ಣೆ ಪಾರ್ಟಿ ನಡೆಯಲೇ ಬೇಕು. ಹೀಗೆ ಆರಂಭವಾದ ಪಾನಗೋಷ್ಠಿ ನಾಟಕ ಇಲ್ಲದಿದ್ದಾಗಲೂ ನಡೆದು ಮುಖ್ಯ ನಟರನ್ನ ವ್ಯಾಟಿಸ್ಸೆಗಳನ್ನಾಗಿಸಿಬಿಟ್ಟಿತು.

ಕಾಳಮಾವನ ಪಾತ್ರಧಾರಿ ಗಿರಿ ಅದ್ಭುತ ನಟ. ಇಡೀ ನಾಟಕದ ಪ್ಲಾಟು ಆತನ ಬಾಯಲ್ಲಿದೆ. ಯಾವ ಪಾತ್ರವಾದರೂ ಮಾತು ಮರೆತರೆ ತಾನೇ ಆಡಿ ಉತ್ತರ ಕೊಟ್ಟುಕೊಂಡು ಮುಂದುವರಿಯುತ್ತಾನೆ. ಜೊತೆಗೆ ಸೆಟ್ ಹಾಕುವುದರಿಂದ ಹಿಡಿದು, ಎಲ್ಲರಿಗೂ ಮೇಕಪ್ ಮಾಡಿ, ನಂತರ ತನಗೆ ತಾನೇ ಪ್ರಸಾಧನ ಮಾಡಿಕೊಳ್ಳುವಂತಹ ಸಕಲಕಲಾವಲ್ಲಭ. ಈತನ ಪ್ರತಿಭೆ ನೋಡಿ ಜಿ.ವಿ.ಅಯ್ಯರ್ ತಮ್ಮ ಕಡೆಗಳಿಗೆಯಲ್ಲಿ ವಿಶ್ವಾಮಿತ್ರನ ಪಾತ್ರ ಕೊಟ್ಟಿದ್ದರು. ಆದರೆ ಅವರೇ ಹೊರಟುಹೊದ್ದರಿಂದ ಆ ಚಿತ್ರ ಸೆಟ್ಟೇರಲಿಲ್ಲ. ಇನ್ನ ಕವಿತಾ ಲಂಕೇಶ್ 'ಅವ್ವ' ಚಿತ್ರದಲ್ಲಿ ಬೂಸಿ ಬಸ್ಯನ ಪಾತ್ರ ಕೊಟ್ಟಿದ್ದರು. ಆದರೆ ಎಂದೂ ಯಾರನ್ನಾದರೂ ಕಂಡು ಪಾತ್ರಕೇಳದ ಗಿರಿ ಹಾಗೇ ಇದ್ದುಬಿಟ್ಟ. ಅದೂ ಅಮಲಿನೊಡನೆ. ಈ ಕ್ಷಣದಿಂದ ಒಂದು ಹನಿಯನ್ನು ಕುಡಿಯದಿದ್ದರೆ ಗಿರಿ ನಮ್ಮೊಂದಿಗೆ ಇನ್ನು ಇರಬಲ್ಲ.


ನಮಗೋಸ್ಕರ ಬೇಡ.

ಈಗತಾನೆ ಅಂಬೆಗಾಲಿಡುತ್ತಿರುವ ಮಗು ಮತ್ತು ಹೆಂಡತಿಗಾಗಿ ಅಂತ ಇರಲೇಬೇಕಾಗಿದೆ!

● ಬಿ.ಚಂದ್ರೇಗೌಡ

ದುಪದ್ರವಿ ಪ್ರಧಾನಿ?

ಖ್ಯಾತ ಅಂತರರಾಷ್ಟ್ರೀಯ 'ಟೈಮ್' ವಾರ ಪತ್ರಿಕೆ ಇತ್ತೀಚಿನ ಏಷಿಯನ್ ಆವೃತ್ತಿಯ ಮುಖಪುಟದಲ್ಲಿ ತದ ಪ್ರಧಾನಿ ಮನಮೋಹನ್ ಸಿಂಗ್ ಚಿತ್ರದೊಂದಿಗೆ 'ಅಂಡರ್ ಅಚೀವರ್' ತಲೆಬರಹವನ್ನು ಕೊಟ್ಟಿದೆ. 'ಅಂಡರ್ ವರ್' ಅಂದರೆ 'ಸಾಧಿಸಲಾಗದವನು' ಮ ಅರ್ಥ. ಸಹಜವಾಗಿಯೇ ಇದು ಗ್ರೆಸ್ಸಿಗರಲ್ಲಿ ಕೋಪ ಹುಟ್ಟಿಸಿದೆ.



ಆದರೆ ಸಾಮಾನ್ಯ ಜನ ಮಾತ್ರ ಟೈಮ್' ಪತ್ರಿಕೆ ಹೇಳಿರುವುದರಲ್ಲಿ ಸದೇನು? ಇದು ನಮಗೆ ಗೊತ್ತಿದ್ದದ್ದೇ" ಮ ತಮಾಷೆ ಮಾಡುತ್ತಿದ್ದಾರೆ. ಇದೇ ಹೊತ್ತಿಗೆ ಕನ್ನಡಿಗ ಕೃಷ್ಣ ಪ್ರಸಾದ್ ಅವರ 'ಚುರುಮುರಿ -ಸ್ವಲ್ಪ ಸಿಹಿ, ಸ್ವಲ್ಪ ಕಹಿ' ಎಂಬ ಬ್ಲಾಗಿನಲ್ಲಿ "ಪ್ರಧಾನಿ ಅವರು ಸಾಧಿಸಲಾಗದವನೇ?" ಎಂಬ ಪ್ರಶ್ನೆ ಕೇಳಿ ನಾಲ್ಕು ಆಯ್ಕೆಗಳನ್ನು ಜನರಿಗೆ ಕೊಟ್ಟಿದ್ದಾರೆ.

ಆ ಆಯ್ಕೆಗಳಿಗೆ ಜನ ಹೀಗೆ ಪ್ರತಿಕ್ರಿಯಿಸಿದ್ದಾರೆ.

* ಹೌದು: 82 %
* ಇಲ್ಲ: 12 %
* ಇರಬಹುದೇನೋ: 3 %
* ಗೊತ್ತಿಲ್ಲ/ ಯಾವನಿಗೆ ಬೇಕು: 3 %

ಏರುತ್ತಿರುವ ಬೆಲೆಗಳು, ಹೆಚ್ಚುತ್ತಿರುವ ಭ್ರಷ್ಟಾಚಾರ, ಕುಗ್ಗುತ್ತಿರುವ ಜನಪ್ರಿಯತೆ... ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಮುಂದಿನ ಚುನಾವಣೆಯಲ್ಲಿ ಗೆಲ್ಲುವುದು ಅಸಾಧ್ಯ ಎಂದು ಈ ಅಂಶಿಅಂಶಗಳು ಹೇಳುತ್ತಿವೆಯಲ್ಲವೇ?


ಅಪರೂಪದ ಸೆಲ್ಫಿ...



ತಮ್ಮ ತಂದೆ ಪಟ್ಟಾನಂದ ನಾಗರಕಟ್ಟೆ ಅವರೊಂದಿಗೆ ಲಂಕೇಶ್ ಮತ್ತು ಅನಂತನಾಗ್ ಸಹೋದರರು....

ದಿಟ್ಟ ಹೆಣ್ಣಿನ ಪ್ರಾಮಾಣಿಕ ಚಿತ್ರಣ

'ಅಳು ನುಂಗಿ ನಗು ಒಮ್ಮೆ' ಕುವೆಂಪು ವಿಶ್ವವಿದ್ಯಾ ನಿಲಯದಲ್ಲಿ ಪ್ರಾಧ್ಯಾಪಕರಾಗಿರುವ ಡಾ.ಸಣ್ಣರಾಮ ಅವರ ಕೃತಿ. ತಮ್ಮ ಮಡದಿಯನ್ನು 'ತಮ್ಮ' ಕಣ್ಣಿನಲ್ಲಿ ಲೇಖಕರು ಇಲ್ಲಿ ಚಿತ್ರಿಸಿದ್ದಾರೆ. ಲೇಖಕರು ಶಿಕ್ಷಣವನ್ನು ಪ್ರಥಮ ಬಾರಿಗೆ ಪಡೆದ ಲಂಬಾಣಿ ಸಮುದಾಯದ ಮೊದಲ ಪೀಳಿಗೆಯವರು. ಆದರೆ ಈ ಭಾಗ್ಯ ಆ ಪೀಳಿಗೆಯ ಹೆಚ್ಚಿನ ಮಹಿಳೆಯರಿಗೆ ಇರಲಿಲ್ಲ. ಹಾಗಾಗಿ ಇವರ ಮಡದಿ ಹೀರಾಬಾಯಿಯೂ ಅನಕ್ಷರಸ್ಥೆ.




ಹೀರಾಬಾಯಿ ಅನಕ್ಷರಸ್ಥಳಾದರೂ ಅವರ ಬಾಳಿನಲ್ಲಿ ಅದೊಂದು ತೊಡಕಾಗಲಿಲ್ಲ. ಅನಕ್ಷರಸ್ಥೆಯಾದರೂ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿರುವ ಪತಿಗಿಂತ ವಿವೇಕಶಾಲಿ. ಇದಕ್ಕೆ ಸಣ್ಣದೊಂದು ಉದಾಹರಣೆಯನ್ನು ನೀಡಬಹುದಾದರೆ ಬಡ ಕುಟುಂಬದಿಂದ ಬಂದ ಲೇಖಕರು ತಮ್ಮ ಮನೆಗೆ ಹಾಗೂ ಸಂಗಾತಿಯ ಕುಟುಂಬದವರಿಗೆ ಹಣಕಾಸಿನ ನೆರವು ನೀಡಲು ಮುಂದಾಗುತ್ತಾರೆ. ಆದರೆ ಇದನ್ನು ಹೀರಾಬಾಯಿ ತಡೆಯುತ್ತಾರೆ. ತನ್ನ ತವರನ್ನು, ತನ್ನ ಮನೆಯವರನ್ನು ಗಾಢವಾಗಿ ಪ್ರೀತಿಸುವ ತನ್ನ ಹೆಂಡತಿ ತಾನು ಅವರಿಗೆಲ್ಲ ನೆರವಾಗಲು ಮುಂದಾದರೆ ಅದನ್ನು ತಡೆಯಲು ಮುಂದಾಗುತ್ತಾಳಲ್ಲಾ ಎಂದು ಲೇಖಕರು ಮಡದಿಯ ವ್ಯಕ್ತಿತ್ವದ ಬಗ್ಗೆಯೇ ಅನುಮಾನಿಸುತ್ತಾರೆ. ಆದರೆ ತನ್ನ ಹೆಂಡತಿ ಯಾಕೆ ಹೀಗೆ ಮಾಡಿದಳು ಎಂಬ ವಿಚಾರ ತಡವಾಗಿ ಅವರ ಅರಿವಿಗೆ ಬರುತ್ತದೆ. ಲಂಬಾಣಿ ಸಮುದಾಯದಲ್ಲಿ ಕುಡಿತಕ್ಕೆ ಗಂಡು ಹೆಣ್ಣೆನ್ನುವ ಭೇದವಿಲ್ಲ. ತಾವು ನೀಡುವ ನೆರವು ತಮ್ಮ ಮನೆಯವರ ಕುಡಿತದಂತಹ ದುಶ್ಚಟಗಳಿಗೆ ಪೂರಕವಾಗಬಾರದು ಎಂಬುದು

ಪುಸ್ತಕ ವಿಮರ್ಶೆ

● ಅರುಣ್ ಜೋಳದಕೂಡ್ಲಿಗಿ

ಹೀರಾಬಾಯಿಯವರ ಉದ್ದೇಶವಾಗಿರುತ್ತದೆ. ಆಧುನಿಕ ವೈದ್ಯಕೀಯ ಜಗತ್ತಿನ ಸಂವೇದನಾರಹಿತ ನಡವಳಿಕೆಗಳು ಒಬ್ಬ ಹಳ್ಳಿಯ ಮಹಿಳೆಯನ್ನು ಘಾಸಿಗೊಳಿಸುವ ರೀತಿಯನ್ನು ಲೇಖಕರು ಇಲ್ಲಿ ತೀವ್ರ ವಿಷಾದದಿಂದ ಬರೆಯುತ್ತಾರೆ. ಕ್ಯಾನ್ಸರ್‌ಪೀಡಿತ ಸಂಗಾತಿಯನ್ನು ಉಳಿಸಿಕೊಳ್ಳಲು ತಮಗೆ ನಂಬಿಕೆಯಿಲ್ಲದಿದ್ದರೂ ಆಯುರ್ವೇದ ಹಾಗು ಹೋಮಿಯೋಪತಿ ಚಿಕಿತ್ಸೆಗೆ ಮುಂದಾಗುವ ಲೇಖಕರು ಇಲ್ಲಿನ ಸುಳ್ಳು ಮತ್ತು ವಂಚನೆಗಳನ್ನು ನೋವಿನಿಂದ ಚಿತ್ರಿಸುತ್ತಾರೆ. ಇದರೊಂದಿಗೆ ಆಧುನಿಕ ವೈದ್ಯಕೀಯದಿಂದ ಗುಣವಾಗದ ತಮ್ಮ ಸಂಗಾತಿಯ ಕೆಮ್ಮು ಮತ್ತು ಜ್ವರ, ಕ್ರಮವಾಗಿ ಆಯುರ್ವೇದ ಹಾಗು ಹೋಮಿಯೋಪತಿ ಚಿಕಿತ್ಸೆಯಿಂದ ಗುಣವಾದದ್ದನ್ನು ದಾಖಲಿಸಲು ಮರೆಯುವುದಿಲ್ಲ.



ಕೃತಿ: ಅಳು ನುಂಗಿ ನಗು ಒಮ್ಮೆ
ಲೇಖಕ: ಡಾ.ಸಣ್ಣರಾಮ
ಪ್ರಕಾಶಕ: [illegible]
ಶಿವಮೊಗ್ಗ
ಬೆಲೆ: ರೂ. 80

ಯಾವ ವೈದ್ಯಕೀಯ ವಿಧಾನಗಳಲ್ಲಿಯೂ ಮಡದಿಯ ರೋಗ ಗುಣವಾಗದಿದ್ದರಿಂದ ಲೇಖಕರು ಅವರನ್ನು ವಿಪಶ್ಯನ ಧ್ಯಾನಶಿಬಿರಕ್ಕೆ ಕರೆದುಕೊಂಡು ಹೋಗುತ್ತಾರೆ. ಈ ಧ್ಯಾನದ ನಿಯಮವೆಂದರೆ ಹತ್ತು ದಿನಗಳ ಕಾಲ ಯಾರೂ ಯಾರೊಂದಿಗೂ ಮಾತನಾಡುವಂತಿಲ್ಲ. ಗಂಡಹೆಂಡತಿ ಒಂದೇ ಕಡೆ ಇದ್ದರೂ ಪರಸ್ಪರರು ಮಾತನಾಡುವುದು ನಿಷಿದ್ಧ. ಧ್ಯಾನಕ್ಕೆ ಸೇರಿದ ಎರಡೇ ದಿನಕ್ಕೆ ಹೀರಾಬಾಯಿಯವರ ಇಡೀ ದೇಹ ಊದಿಕೊಳ್ಳುತ್ತದೆ. ಎರಡು ತೊಡೆಗಳು ಬಾತುಕೊಂಡು ಕುಳಿತರೆ ನಿಲ್ಲುವುದಕ್ಕೆ, ನಿಂತರೆ ಕುಳಿತುಕೊಳ್ಳುವುದಕ್ಕೆ ಆಗದಂತಾಗುತ್ತದೆ. ನಿಸರ್ಗದ ಕರೆಗೂ ಕುಳಿತುಕೊಳ್ಳಲು ಹೇಳಲಸಾಧ್ಯವಾಗದಷ್ಟು ನೋವಾಗುತ್ತದೆ. ಇದರೊಂದಿಗೆ ಕೆಮೋಥೆರಪಿ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ತಾನು ಅತೀವವಾಗಿ ಪ್ರೀತಿಸುವ ತನ್ನ ನೀಳವಾದ ತಲೆಕೂದಲನ್ನು ಕಳೆದುಕೊಳ್ಳುವ ಸಂದರ್ಭದಲ್ಲಿ ಹೀರಾಬಾಯಿ ಅನುಭವಿಸುವ ನೋವು ನಮ್ಮ ಕಣ್ಣನ್ನು ತೇವಗೊಳಿಸುತ್ತದೆ. ರೋಗಪೀಡಿತ ತನ್ನ ಸಂಗಾತಿಯನ್ನು ವಿಪಶ್ಯನ ಧ್ಯಾನಕ್ಕೆ ಕರೆದುಕೊಂಡು ಹೋದ ಸಂದರ್ಭದಲ್ಲಂತೂ ಅವರ ಪತಿ ಅಂದರೆ ಲೇಖಕರ ಬಗ್ಗೆಯೇ ಓದುಗರಿಗೆ ಒಂದುಕ್ಷಣ ಸಿಟ್ಟು ಬಂದರೂ ಅಚ್ಚರಿಯಿಲ್ಲ.

ಸಂಗಾತಿ ಹೀರಾಬಾಯಿಯ ಸಂಕೀರ್ಣ ಹಾಗು ದಿಟ್ಟ ವ್ಯಕ್ತಿತ್ವವನ್ನು ಲೇಖಕರು ಸಮರ್ಥವಾಗಿ ನಿರೂಪಿಸಿದ್ದಾರೆ. ಇದನ್ನು ಓದುತ್ತಿದ್ದಂತೆ ನನಗೆ ತಕ್ಷಣ ನೆನಪಾದದ್ದು ಲಂಕೇಶರು ಕಟ್ಟಿಕೊಡುವ ತಮ್ಮ ಅವ್ವನ ಚಿತ್ರ. ನೇರ, ಸರಳ ಶೈಲಿ, ಸಹಜವಾದ ಭಾಷೆ ಮತ್ತು ಪ್ರಾಮಾಣಿಕ ಬರವಣಿಗೆ ಒಂದೇ ಗುಕ್ಕಿನಲ್ಲಿ ಪುಸ್ತಕವನ್ನು ಓದಿಸಿಕೊಂಡು ಹೋಗುತ್ತದೆ.

ಕನ್ನಡ ಪುಸ್ತಕಗಳ ಒಳತಿರುಳಿನ ಗುಣಮಟ್ಟ ಹೇಗೇ ಇರಲಿ, ಆದರೆ ಹೊರನೋಟಕ್ಕಂತೂ ನೋಡಿದ ತಕ್ಷಣ ಕೊಂಡುಕೊಳ್ಳುವಂತಿರುತ್ತವೆ. ಆದರೆ ಓದುಗರನ್ನು ತಲುಪಲೇಬೇಕಾದ ಈ ಕೃತಿಯ ಪ್ರಕಾಶಕರಿಗೆ ಇದರ ಅರಿವಿರುವಂತೆ ತೋರುವುದಿಲ್ಲ.

● ಸರ್ಜಾಶಂಕರ ಹರಳಿಮಠ

ಜರ್ಮನ್ ಪಿಟೀಲು

ಓ.ಟಿ.ರವೀಂದ್ರನ್ ಹಾಸ್ಯ ಪ್ರಸಂಗ 5

ಆ ಹೋಟೆಲ್‌ನ ಮುಖ್ಯ ಸೆಕ್ಯುರಿಟಿ ಆಫೀಸರ್ ಆದ ಮಿ. ಅಲ್ಮಿಡಾ ಎದುರು ಸಿಟ್ಟಿನಿಂದ ತಪ್ತನಾಗಿದ್ದ ಒಬ್ಬ ಅಮೆರಿಕನ್ ಅತಿಥಿ ನಿಂತಿದ್ದ.

"ಈ ಬೆಳಗ್ಗೆ ನನ್ನ ರೂಮಿನಲ್ಲಿ ನನ್ನ ಟ್ರಾನ್ಸಿಸ್ಟರ್ ಕಳುವಾಗಿದೆ" ಎಂದು ಅಮೆರಿಕನ್ ಅತಿಥಿ ದೂರಿದ. ಮಿ. ಅಲ್ಮಿಡಾ ಅತ್ಯಂತ ವಿನಯದಿಂದ "ಸರ್, ಅದನ್ನ ನಾವು ಹುಡುಕಿಕೊಡುತ್ತೇವೆ" ಎಂದು ಅಮೆರಿಕನ್ ಮನುಷ್ಯನನ್ನು ಸಮಾಧಾನಪಡಿಸಲು ಯತ್ನಿಸಿದ.

"ನೋಡಿ, ನಾನು ಸ್ವಿಮಿಂಗ್ ಪೂಲ್‌ನಲ್ಲಿದ್ದಾಗ ಯಾರೋ ನನ್ನ ರೂಮಿಗೆ ಬಂದುಹೋಗಿದ್ದಾರೆ. ಇದು ಸರಿಯಲ್ಲ, ನೀವು ಕೂಡಲೆ ಏನಾದರೂ ಮಾಡ್ಲೇಬೇಕು" ಎಂದು ಒತ್ತಾಯಿಸಿದ. ಅಷ್ಟು ಹೊತ್ತಿಗೆ ಅರ್ಧ ಮುಚ್ಚಿದ ಬಾಗಿಲ ಮೂಲಕ ಮತ್ತೊಂದು ಮುಖ ಇಣುಕಿ ಕೇಳಿತು: "ನನ್ನ ಸಾಮಾನು ಏನಾದ್ರೂ.....?" ಆ ಮೆಕ್ಸಿಕನ್ ಅತಿಥಿಗೂ ಮಿ. ಅಲ್ಮಿಡಾ "ನಾವು ಹುಡುಕುತ್ತಿದ್ದೇವೆ ನಂಬಿ" ಎನ್ನುತ್ತಿರುವಾಗಲೇ, ಆ ಮೆಕ್ಸಿಕನ್ ಮನುಷ್ಯ "ನಾನು ಮಹಾಬಲಿಪುರ್ ನೋಡಲು ಇನ್ನೂ ಒಂದು ದಿನ ಇರ್ತೀನಿ" ಎಂದ್ಹೇಳಿ ತಲೆ ಹಿಂದಕ್ಕೆ ತೆಗೆದುಕೊಂಡ. "ಓಹೊ ಹಾಗಾದ್ರೆ ಬೇರೆಯವರ ಸಾಮಾನುಗಳೂ ನಿಮ್ಮ ಹೋಟೆಲ್‌ನಲ್ಲಿ ಕಳುವಾಗ್ತಿದೆ ಅಂತಾಯ್ತು, ಏನಾದ್ರೂ ಮಾಡಿ ಹುಡುಕಿ" ಎಂದ ಅಮೆರಿಕನ್ ಅಲ್ಲಿಂದ ನಿಷ್ಕ್ರಮಿಸಿದ.

ಇದೆಂಥಾ ಕೆಟ್ಟ ದಿನ ಎಂದು ಶಪಿಸಿಕೊಳ್ಳುತ್ತ ಮಿ. ಅಲ್ಮಿಡಾ ಕುರ್ಚಿಗೆ ಅಂಡೂರುತ್ತಿರುವಾಗ ಅವನ ಸಹಾಯಕ ವಡಿವೇಲು ಓಡಿಬಂದು "ಸರ್, ಸ್ವಿಮಿಂಗ್ ಪೂಲ್‌ನಲ್ಲಿ ಇಬ್ಬರು ಹಿಪ್ಪಿಗಳಿದ್ದಾರೆ" ಎಂದು ಕೂಗಿಕೊಂಡ! ಈ ವೇಳೆಗಾಗಲೇ ಬೆಳಗಿನಿಂದ ನಡೆದ ಕಟಿಪಿಟಿಯಿಂದ ರೋಸಿಹೋಗಿದ್ದ ಮಿ. ಅಲ್ಮಿಡಾ ಉದಾಸೀನವಾಗಿ "ಇರ್ಲಿ ಬಿಡು" ಎಂದ. "ಸರ್, ನೀವೇನಾದರೂ ಮಾಡ್ಲೆಬೇಕು ಸ್ವಿಮಿಂಗ್ ಪೂಲ್‌ನಲ್ಲಿರೋದು ಒಂದು ಗಂಡು ಹಿಪ್ಪಿ, ಇನ್ನೊಂದು ಹೆಣ್ಣು ಹಿಪ್ಪಿ" ಎಂದು ಸಂದರ್ಭದ ಗಂಭೀರತೆಯನ್ನು ಸ್ಪಷ್ಟಪಡಿಸಲು ವಡಿವೇಲು ಪ್ರಯತ್ನಿಸಿದ.

"ಹಿಪ್ಪಿಗಳೊ ಗಪ್ಪಿಗಳೊ ಸ್ವಲ್ಪ ನಾನು ನೆಮ್ಮದಿಯಾಗಿ ಕೂತ್ಕಬೇಕು" ಎಂದು ಹೇಳುತ್ತ ಮಿ. ಅಲ್ಮಿಡಾ ಕುರ್ಚಿಯ ಬೆನ್ನಿಗೆ ಒರಗಿದ.

"ಸರ್, ಅವರು ಬರಿ ಬೆತ್ತಲೆ ಇದ್ದಾರೆ" ಎಂದು ವಡಿವೇಲು ಬಡಬಡಿಸಿದ.

'ಬರಿ ಬೆತ್ತಲೆ' ಎಂದ ಕೂಡಲೆ ದಡಬಡಾಯಿಸಿ ಎದ್ದ ಮಿ. ಅಲ್ಮಿಡಾ ವಡಿವೇಲುವಿನೊಡನೆ ಸ್ವಿಮಿಂಗ್ ಪೂಲ್ ಕಡೆ ಓಡಿದ.

ಹಿಪ್ಪಿಗಳನ್ನು ಸ್ವಿಮಿಂಗ್ ಪೂಲ್‌ನಿಂದ ಆಚೆ ಹಾಕಿ ಸಮಾಧಾನದ ನಿಟ್ಟುಸಿರು ಬಿಡುತ್ತ ಸೆಕ್ಯುರಿಟಿ ರೂಮಿನ ಕಡೆಗೆ ಬರುತ್ತಿದ್ದ ಮಿ. ಅಲ್ಮಿಡಾ ಕಣ್ಣಿಗೆ ಮನೆಗೆ ಹೋಗಲು ಸಿದ್ಧರಾಗುತ್ತಿದ್ದ ಇಬ್ಬರು ಹೌಸ್‌ಕೀಪರ್‌ಗಳು ಕಂಡುಬಂದರು.

ಅವರಲ್ಲಿ ಒಬ್ಬಳು "ಬೈ ಬೈ ಮಿ. ಅಲ್ಮಿಡಾ" ಎಂದು ಹೇಳಿ ನಿರ್ಗಮಿಸಿದಳು. ಇನ್ನೊಬ್ಬ ಹೌಸ್‌ಕೀಪರ್ ಮಾಲತಿಯನ್ನು ದಿಟ್ಟಿಸಿದ ಅಲ್ಮಿಡಾ ಇವಳ್ಯಾಕೆ ಈಚೆಗೆ ಇಷ್ಟು ದಪ್ಪ ಆಗುತ್ತಿದ್ದಾಳೆ ಎಂದುಕೊಂಡ. "ನನಗೆ ಯಾವಾಗಲೂ ನನಗೆ ಹಿಡಿಸಿದವರ ಜೊತೆ ಇರೋದಿಕ್ಕೆ ಇಷ್ಟ. ನಿಮ್ಮನ್ನು ಕಂಡರೆ ನಂಗಿಷ್ಟ ಅಂಕಲ್" ಎಂದ ಮಾಲತಿ ಮಿ. ಅಲ್ಮಿಡಾನತ್ತ ಒಂದು ಮಾದಕನೋಟ ಬೀರಿದಳು.

ಹೋಟೆಲ್‌ನಲ್ಲಿ ಕೆಲಸ ಮಾಡುವ ಹುಡುಗಿಯನ್ನು ನೋಡಿದಾಗ ಮಿ. ಅಲ್ಮಿಡಾಗೆ ತನ್ನ ಮಗಳು ಜೆನಿಫರ್‌ಳ ನೆನಪಾಗುತ್ತಿತ್ತು, ತನ್ನ ಮಗಳಿಗೆ ಹೋಟೆಲ್ ಕೆಲಸ ಬೇಡವೆಂದು ಒಂದು ಕಾನ್ವೆಂಟ್‌ಶಾಲೆಯಲ್ಲಿ ಶಿಕ್ಷಕಿಯನ್ನಾಗಿ ಸೇರಿಸಿದ್ದ ಮಿ. ಅಲ್ಮಿಡಾ.

"ಏನೇ ಆಗಲಿ ನೀನು ಸ್ವಲ್ಪ ದಪ್ಪವಾಗಿದ್ದೀಯಾ. ನಮ್ಮ ಹೋಟೆಲ್ ಊಟದ ಪ್ರಭಾವ ಇರಬೇಕು" ಎಂದ ಮಿ. ಅಲ್ಮಿಡಾ ಮಾಲತಿಯನ್ನು ಆಹ್ವಾನಿಸಿ ಸಿಳ್ಳೆ ಹಾಕುತ್ತ ರೂಮಿನತ್ತ ಹೊರಟ.

ವಡಿವೇಲು ಎರಡು ಕಪ್ ಟೀಯನ್ನು ತಂದ. ಮಿ. ಅಲ್ಮಿಡಾ ಮಾಲತಿಗೂ ಟೀ ಕೊಟ್ಟು ತಾನೂ ಟೀ ಹೀರುತ್ತ "ಈಗೀಗ ನಮ್ಮ ಹೋಟೆಲ್‌ನಲ್ಲಿ ಗಿರಾಕಿಗಳ ಸಾಮಾನು ಕಳುವಾಗ್ತಿರೋದು ದೊಡ್ಡ ತಲೆನೋವಾಗಿದೆ. "ನಾವು ಏನಾದರೂ ಮಾಡ್ಲೇಬೇಕು" ಎಂದು ಅರ್ಧ ತನ್ನಷ್ಟಕ್ಕೆ ಅರ್ಧ ಮಾಲತಿಗೆ ಹೇಳುವಂತೆ ಗೊಣಗಿಕೊಂಡ.

ಮಾಲತಿ ಟೀ ಹೀರುತ್ತ ಮುಗುಳ್ನಕ್ಕಳು. ಮಿ. ಅಲ್ಮಿಡಾ ತನ್ನನ್ನು ನೋಡುತ್ತಿರುವುದನ್ನು ಗಮನಿಸಿ ಸೆರಗನ್ನು ತನ್ನ ಭುಜಗಳ ಸುತ್ತ ಬಿಗಿಯಾಗಿ ಎಳೆದುಕೊಂಡಳು.

'ಕ್ಲಿಕ್!'

"ಏನೊ ಕ್ಲಿಕ್ ಅಂತು" ಎಂದ ಮಿ. ಅಲ್ಮಿಡಾ.

"ಹಲೋ, ಯಾರಲ್ಲಿ?" ಒಂದು ಇನಿದನಿ ತೇಲಿಬಂದಿತು ಗಾಳಿಯಲ್ಲಿ!

'ಹಲೋ' ಎಂದ ಮಿ. ಅಲ್ಮಿಡಾ

"ನಾನು ಪ್ಯಾಟ್‌ಕೇಟ್....." ಎಂದಿತು ದನಿ.

ಮಿ. ಅಲ್ಮಿಡಾ ಎದ್ದು ನಿಂತು ಹಿಂತಿರುಗಿ ನೋಡಿದ. ಯಾರೂ ಇಲ್ಲ!

"ಇದು ನಮ್ಮ ಬೆಳಗಿನ ಕಾಫಿ ತಿಂಡಿ ಕಾರ್ಯಕ್ರಮ, ವಾಷಿಂಗ್‌ಟನ್ ಡಿ.ಸಿ.ಯಿಂದ" ಎಂದು ಆ ಇನಿದನಿ ಪಲುಕಿತು.

"ವಾಷಿಂಗ್‌ಟನ್‌ನಿಂದ ಅಂತ ಯಾರು ಹೇಳ್ತಿರೋದು? ಇದು ನಿನ್ನ... ಇದರಿಂದ ಬರ್ತಿದೆ" ಎಂದು ಮಿ. ಅಲ್ಮಿಡಾ ಮಾಲತಿಯ ಕಡೆಗೆ ಬಾಗಿದ. ಮಾಲತಿ ಎದ್ದು ನಿಂತು ತನ್ನಿಂದ ಬರುತ್ತಿದ್ದ ದನಿಯನ್ನು ಅಡಗಿಸಲು ಸೆರಗನ್ನು ಮತ್ತೂ ಬಿಗಿಯಾಗಿ ಎಳೆದು ಮುಚ್ಚಿಕೊಂಡಳು.

ಮಿ. ಅಲ್ಮಿಡಾ ಯೋಚನಾಮಗ್ನನಾದ. ಮಾಲತಿಯ ರವಿಕೆಯನ್ನು ದಿಟ್ಟಿಸಿ ನೋಡುತ್ತ ಮಿ. ಅಲ್ಮಿಡಾ ಹೇಳಿದ "ನನ್ನ ಇಪ್ಪತ್ತೈದು ವರ್ಷ ಪೊಲೀಸ್ ಸರ್ವಿಸ್‌ನಲ್ಲಿ ಈ ರೀತಿ 'ಅದು' ಹಾಡುವುದನ್ನು ನಾನು ನೋಡಿಲ್ಲ!"

ಈ ವೇಳೆಗೆ ಅಮೆರಿಕನ್, ಮೆಕ್ಸಿಕನ್ ಇಬ್ಬರೂ ಅತಿಥಿಗಳು ಒಟ್ಟಿಗೆ ಒಳಬಂದರು. "ಈಗ ಅರ್ಧ ಗಂಟೆ ಹಿಂದೆಯಷ್ಟೇ ನನ್ನ ರೂಮಿನಿಂದ ನನ್ನ ಶಾಂಪೇನ್ ಬಾಟಲ್ ಕಳುವಾಗಿದೆ" ಎಂದು ಮೆಕ್ಸಿಕನ್ ಮನುಷ್ಯ ದೂರಿದ.

"ತಣಿಸು ನನ್ನ ಪ್ರೀತಿಯ... ತಣಿಸು ನನ್ನ ಪ್ರೀತಿಯ" ಎಂದು ಬೋನಿಎಂ ತಂಡದ ದನಿ ಮಾಲತಿಯ ರವಿಕೆಯ ಒಳಗಿಂದ ಕೇಳಿಸಿತು.

"ಇದು ನನ್ನ ಟ್ರಾನ್ಸಿಸ್ಟರ್, ಮುಚ್ಚಿಟ್ಟುಕೊಂಡಿದ್ದಾ... ಎಂದು ಅಮೆರಿಕನ್ ಮಾಲತಿಯನ್ನು ಸಂಶಯದಿಂ... ನೋಡತೊಡಗಿದ.

ಮಾಲತಿಯನ್ನೇ ಆಪಾದಮಸ್ತಕ ದಿಟ್ಟಿಸಿದ ಮೆಕ್ಸಿಕ... "ಕಿಲಾಡಿ!"...... ಎಂದು ಅವಳ ಕುಂದಿಯನ್ನು ತಟ್ಟಿದ...

"ಏ! ನಮ್ಮ ಹೋಟೆಲ್ ನಿಯಮದ ಪ್ರಕಾರ ನೀ... ಹಾಗೆಲ್ಲಾ ಮಾಡಕೂಡದು" ಎಂದು ಮಿ. ಅಲ್ಮಿ... ಪ್ರತಿಭಟಿಸಿದ.

ಪುನಃ ಅವಳ ಹಿಂಭಾಗವನ್ನು ತಟ್ಟಿ "ನಾ... ಮೆಕ್ಸಿಕೊದಲ್ಲಿ ಹೀಗೇ ಮಾಡುತ್ತೇವೆ" ಎಂದನಾ ಮೆಕ್ಸಿಕನ... ಮನುಷ್ಯ.

ಇಷ್ಟರಲ್ಲಿ "ಓ" ಎಂದು ಮಾಲತಿ ನೆಗೆದ ರಭಸ... ಅವಳಿಂದ ಒಂದು ಶಾಂಪೇನ್ ಬಾಟಲ್ ಕಾರ್ಪೆ... ಮೇಲೆ ಬಿತ್ತು, "ಇದು ನನ್ನ ಶಾಂಪೇನ್" ಎಂದು ಮೆಕ್ಸಿಕ... ಎತ್ತಿಕೊಂಡ.

ಟ್ರಾನ್ಸಿಸ್ಟರ್ ಏನಾದರೂ ಕೆಳಗೆ ಬಿತ್ತೆ ಎಂದ... ಅಮೆರಿಕನ್ ನೆಲದತ್ತ ದೃಷ್ಟಿ ಹರಿಸಿದ. ಮೆಕ್ಸಿಕನ... ಮಾಲತಿಯ ಹಿಂಭಾಗವನ್ನು ದಿಟ್ಟಿಸಿ ನೋಡತೊಡಗಿ... "ಹೀಗೆಲ್ಲಾ ಮಾಡೋದು ಹೋಟೆಲ್ ನಿಯಮಕ್ಕೆ ವಿರುದ್ಧ..." ಎಂದು ಮಿ. ಅಲ್ಮಿಡಾ ಕೂಗಿಕೊಂಡ.

"ಬೇಡ! ಇದು ಮೆಕ್ಸಿಕೊ ಅಲ್ಲ, ಇದು ಸಾವಿತ್ರಿ... ದಮಯಂತಿಯರ ನಾಡು, ಇಂಡಿಯಾ!" ಎಂದು ವಡಿವೇಲು... ಜೋರು ಮಾಡಿದ.

"ಸಾವಿ...ಟ್ರೀ... ಯಾರವಳು? ಅವಳನ್ನ ನಾನ... ನೋಡಬೇಕು" ಎಂದು ಮೆಕ್ಸಿಕನ್ ಕೋರಿಕೊಂಡಾಗ... ಅಮೆರಿಕನ್ ಸಹ "ನಾನು ಅವಳದೊಂದು ಫೋಟೊ... ತೆಗೆದುಕೊಳ್ಳಬಹುದೆ?" ಎಂದು ವಿನಂತಿಸಿಕೊಂಡ.

ಮಿ. ಅಲ್ಮಿಡಾ ಅಂತಹ ಕೆಲಸವನ್ನು ವಡಿವೇಲು... ಮಾಡುವ ಹಾಗಿಲ್ಲ ಎಂದು ಹಲ್ಲು ಕಿರಿದ. ಆಗ... ಮೆಕ್ಸಿಕನ್ ಕನಸಿನಲ್ಲಿದ್ದವನಂತೆ ಶಾಂಪೇನ್ ಬಾಟಲಿ... ಮುತ್ತಿಟ್ಟು ತಕ್ಷಣ ಮಿ. ಅಲ್ಮಿಡಾನತ್ತ ತಿರುಗು ಕೇಳಿದ... "ಸಿನೊರ್ ಸೆಕ್ಯುರಿಟಿ ಆಫೀಸರ್, ಕಳೆದುಹೋಗಿರುವ ನ... ಇನ್ನೊಂದು ವಸ್ತು ಆಂಟಿಕ್ ಜರ್ಮನ್ ಪಿಟೀಲನ್ನು ... ಪುಸ್ಸಿಕ್ಯಾಟ್ ಎಲ್ಲಿ ಮುಚ್ಚಿಟ್ಟದೆ? ಹುಡುಕಿಕೊಡಿ!"

ಇಂಗ್ಲಿಷ್ ಮೂಲ: ಓ.ಟಿ.ರವೀಂದ್ರನ್...
ಕನ್ನಡಕ್ಕೆ : ಪದ್ಮ ಶ್ರೀರಾಮ...

ಆಂದ್ರ ಬೋಜರಾಜನಿಗೊಂದು ಪತ್ರ

ಕನ್ನಡ ರಾಜ್ಯರಮಾರಮಣ, ಆಂದ್ರಬೋಜರಾಜರಿಗೆ
ಹಂಪಿ ವಿರೂಪಾಕ್ಷನ ಸನ್ನಿಧಾನದಿಂದ ನಿಮಗೊಂದು
ಪತ್ರ ಬರೆಯುತ್ತಿರುವೆ ನಮ್ಮ ನಿಮ್ಮ ಕ್ಷೇಮ ಕುರಿತು
ಕ್ಷಮೆಯಿರಲಿ ಓದಲೆಂದು ಆಗ್ರಹಿಸುತ್ತಿರುವುದಕ್ಕೆ.

ನಮ್ಮೂರಿಗೆ ಟೆಂಟ ಸಿನಿಮಾ ಬಂದಿತ್ತು ಡಬ್ಬಿಯ
ತುಂಬ ನಿಮ್ಮ ಚಿತ್ರದ ಸುರಳಿಗಳಿದ್ದವು ಹರಿದು ತೇಪೆಹಚ್ಚಿದ
ಪರದೆಯ ಮೇಲೆ ನಿನ್ನ ಮುಖ ನೋಡಿದ
ನೆನಪು ಇನ್ನು ಹಸಿರಾಗಿದೆ.

ಇದೇ ತೇರು ಬೀದಿಯಲ್ಲಿ ಮುತ್ತುರತ್ನಗಳನ್ನು
ಕಾಳುಕಾಡಿಯಂತೆ ಮಾರುತ್ತಿದ್ದರೆಂದು
ಮೊನ್ನೆ ಪ್ರವಾಸಕ್ಕೆಂದು ಹಂಪಿಗೆ ಹೋದಾಗ
ಮಾಸ್ತರು ಎದೆಯುಬ್ಬಿಸಿ ಹೇಳಿದರು.


ಪ್ರಿಯ ಚಕ್ರವರ್ತಿಯೆ ಕ್ಷಮೆಯಿರಲಿ ಭೂತವನ್ನು ನೆನಪಿಸುತ್ತಿರುವುದಕ್ಕೆ
ಇತ್ತ ಅಲ್ಪಸ್ವಲ್ಪ ಕ್ಷೇಮವಾಗಿದ್ದೇವೆ ಮಳೆಯಿಲ್ಲದೆ ತುಂಗಭದ್ರೆ
ಒಣಗಿರುವಳು ಮೂರು ಕಾಲು ಮಾಯವಾಗಿ ಎಷ್ಟೋ
ವರ್ಷಗಳಾಯಿತು ಈಗ ಉಳಿದಿರುವುದೊಂದೆ ಕಾಲ ಭೀಕರ ಬರಗಾಲ.

ಶ್ರೀಕೃಷ್ಣದೇವರಾಯ ನಿನಗೆ ನೆನಪಿರಬಹುದು
ಪ್ರಭು ಪ್ರಭುತ್ವಗಳೆಲ್ಲ ನಾಶವಾಗಿ ಪ್ರಜಾಪ್ರಭುತ್ವ ಬಂದಿದೆಯಲ್ಲ
ಅದಕ್ಕಾಗಿ ಮಾತನಾಡುತ್ತಿರುವೆವು
ಬಾಯಿತುಂಬ ಹೊಟ್ಟೆ ಹಸಿದುಕೊಂಡು.

ನಿನ್ನ ಕಾಲದಲ್ಲಿ ಜನರು ಸಂತೃಪ್ತರಾಗಿದ್ದರಂತೆ ಉಂಡು ತಿಂದು
ಇಂದು ಕಮರು ತೇಗು ಬರುವಂತೆ ಮಣ್ಣು ತಿಂದು ನಿಸ್ತಂತಾಗಲು
ಅರಮನೆ ಕಟ್ಟಿಕೊಂಡು ಹೊನ್ನಿನ ಸಿಂಹಾಸನದ ಮೇಲೆ ಮಹಾಡೆ
ಮಲಗಿರುವವರು ಉಣ್ಣುವ ಬಾಯಿಗೆ ಮುಳ್ಳು ಚುಚ್ಚಿಸಿಕೊಂಡು.

ದೊರೆಯೆ ದಯವಿಟ್ಟು ಚಿತ್ತವಿಟ್ಟು ಕೇಳು
ರಾಜರ ವಂಶದ ರಾಜಕೀಯ ನಿಮ್ಮ ಮೂಲಕವೇ ಹೋಯಿತು
ಬಿಡಿ ಆದರೆ ಈಗ ಶುರುವಾಗಿದೆ ಕುಟುಂಬ ರಾಜಕಾರಣ
ಅಪ್ಪ ಮಗಳು, ಮಗ, ಸೊಸೆ, ಮೊಮ್ಮಗ ಇರದಿದ್ದರೆ
ಮನೆಯಲ್ಲಿ ಸಾಕಿರುವರಲ್ಲ ನಾಯಿಗಳನ್ನು
ಅವುಗಳಿಗೂ ಉಂಟು ಟಿಕೆಟು ಆರಿಸಿಬಂದರೆ ಶಾಸಕ ಸ್ಥಾನ ಗ್ಯಾರಂಟಿ
ಅದೃಷ್ಟವಿದ್ದರೆ ಮಂತ್ರಿಸ್ಥಾನಕ್ಕೂ ಕಾಲುಎತ್ತಿ ಉಚ್ಚೆ ಹೊಯ್ಯಬಹುದು
ಪ್ರಜಾಪ್ರಭುತ್ವಕ್ಕೆ ಜೈ ಮೇರಾ ಭಾರತ್ ಮಹಾನ್.

ಪ್ರಿಯ ರಾಜನೆ ಕೇಳು
ನೀನಾದರೂ ಅಂದು ರಾಜ್ಯದಲ್ಲೆಲ್ಲ ಸುತ್ತಾಡುತ್ತಿದ್ದಿ
ಜನರು ದೂರಿಂದಲಾದರು
ನಿನ್ನ ದರ್ಶನ ಪಡೆದು ಧನ್ಯರಾಗುತ್ತಿದ್ದರು.
ಇಂದೆನಿದೆ ಮಣ್ಣು ಮತದಾರನ ಖರೀದಿಸಲು
ಗುಡ್ಡ ಬೆಟ್ಟ ಮುಗಿಲ ಮೇಲಿನ ಜಾಗ
ಸಾಲದ್ದಕ್ಕೆ ವರ್ಲ್ಡ್ ಬ್ಯಾಂಕುಗಳನ್ನು ಕೊಳ್ಳೆಹೊಡೆದಿರುವರು
ನಮ್ಮ ಪ್ರಜಾರಾಜರುಗಳು ನಿನ್ನ ಹಾಗೇ ಕಾಣಸಿಗುವುದಿಲ್ಲ
ಆಗಾಗ ಕುರ್ಚಿಯ ಮ್ಯುಜಿಕಲ್ ಆಟ ನಡೆದಾಗ ಕಾಣಿಸುವರು ದೂರದರ್ಶನದಲ್ಲಿ
ಅದೃಷ್ಟವಿದ್ದರೆ ದೂರವಾಣಿಯಲ್ಲಿ ಧ್ವನಿಯನ್ನು ಕೇಳಬಹುದು
ಐದು ವರ್ಷದಲ್ಲಿ ಅವರು ಖುಷಿಗೊಂಡಾಗ



ದೊರೆಯೆ ಹೀಗೆ ಮಾತನಾಡುತ್ತಿರುವುದು ಕೇಳಿ ದಂಗಾಗಬೇಡ
ತಾಜಾ ಸುದ್ದಿಗಳು ಇನ್ನು ಇನ್ನು ಇವೆ ನೋಡು

ನಿನ್ನ ಆಸ್ಥಾನದಲ್ಲಿ ಅಷ್ಟದಿಗ್ಗಜರು ಇದ್ದರೆಂದು ಕೇಳಿದ್ದೆ
ಇಂದು ಇರುವರು ಪ್ರಜಾಪ್ರಭುತ್ವಕ್ಕಂಟಿದ ಅರಿಷ್ಟಗಳು
ರಾಜನರ್ತಕಿಯರು ಆಸ್ಥಾನದಲ್ಲಿ ಕುಣಿಯುತ್ತಿರುವುದ ಕಂಡು
ನೀನು ನಿನ್ನ ಪರಿವಾರ ಸಂತೋಷಪಡುತ್ತಿದ್ದರಂತೆ.

ಇಂದು ಶಾಸನಸಭೆಯಲ್ಲಿ ಮೈಮರೆತು ನೀಲಿ ಚಿತ್ರಗಳನ್ನು ನೋಡುವರ
ಕಂಡು ಮನೆಮಂದಿಯೆಲ್ಲಾ ತಲೆತಗ್ಗಿಸಿ ಅಸಹ್ಯದಿಂದ
ಕ್ಯಾಕರಿಸಿ ಉಗಿಯುತ್ತಿರುವರು ನಿಮ್ಮಂತವರನ್ನು ಆರಿಸಿದ ತಪ್ಪಿಗಾಗಿ.

ಕೊನೆಯದಾಗಿ ಹೇಳುತ್ತೇನೆ ಕೇಳು ದೊರೆಯೆ
ಹಸಿವಿನಿಂದ ಜನರು ಮಕ್ಕಳ ಮಾರುತ್ತಿರುವರು
ಕೊಳ್ಳುವವರಿಲ್ಲದೆ ಕತ್ತುಹಿಸುಕಿ ಸಾಯಿಸುತ್ತಿರುವರು
ಮುಗಿಲಿಗೆ ಮುಖ ಮಾಡಿ ಮಳೆರಾಯನ
ಕಾಯುತ್ತಿರುವ ರೈತನ ಕಣ್ಣಲ್ಲಿ ಹನಿ ನೀರಿಲ್ಲ ಅಳುವುದಕ್ಕೂ.

ತುತ್ತು ಕೂಳಿಗಾಗಿ ಗುಳೇಹೊಂಟ ಜನರನ್ನು ತುಂಬಿ
ಕೊಂಡು ಹೊರಟ ಬಸ್ಸುಗಾಡಿಗಳು ಹಳಿತಪ್ಪಿ ಅಪಘಾತವಾಗಿ.

ಊರಂತೆ ಊರಜನರನ್ನು, ಮನೆಮಂದಿಯನ್ನು
ದಬ್ಬಿಕೊಂಡು ಹೋಗುವ ಜವರಾಯನ
ಕೈ ಸೋತುಹೋದ ಕಾರಣ ಅಲ್ಲಲ್ಲಿ
ನಗರಗಳಲ್ಲಿ ದುಡಿಯುತ್ತಿವೆ ಬಡ ಕೈಗಳು ನಾಳೆಗಳು
ಕೆಲಸಹೊತ್ತು ಬರಬಹುದು ಎಂಬ ನಿರೀಕ್ಷೆಯಲಿ.

ನಮ್ಮೂರು ಜನರು ಮೊನ್ನೆ ಗುಳೆಹೊರಟ್ಟಿಸತ್ತು
ನಿಮ್ಮೂರಿಗೆ ಬಂದಿರುವರಂತೆ ದೂರದಿಂದಲಾದರು
ಅವರನ್ನು ಒಂದು ಸಲ ನೋಡಿ ಕೇಳು
ಇಲ್ಲಾದರೂ ಕ್ಷೇಮವಾಗಿದ್ದಿರಾ ಎಂದು.

ಡಾ.ಮಲ್ಲಿಕಾ ಘಂಟಿ
ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ-ಸಂಡೂರು.

ಬಾಯಿಬುಟ್ರು, ಸಾಕು ನಗಾಡೋನು, ಪಾಪ ವಂಟೋದ!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಅಂತು ಸದಾನಂದ ಗೌಡುನ್ನ ಇಳಿಸಿಬುಟ್ರು ಕಣಾವ" ಎಂದುಕೊಂಡು ಉಗ್ರಿ ಬಂದ.

"ಅವುನಿದ್ದು ನಮಿಗೆ ಮಾಡಿದ್ದೇನು? ಈಗ ಬಂದೋನು ಏನು ಮಾಡಿದ್ದನ್ನಾ? ದನಿಗುಲ್ಲಿಲ್ಲ, ಕುಡಿಯಕ್ಕೆ ನೀರಿಲ್ಲ, ...ವರ ಮ್ಯಾಲೆ ನಿಗಾ ಮಾಡದೋನು ಯಾವನಿದ್ರೇನೂ, ...ವನೋದ್ರು ತಾನೆ ಏನ್ಲ? ಆ ಸುದ್ದಿ ಬುಟ್ಬುಟು ಬ್ಯಾರೆ ...ತಾಡ್ರ" ಎಂದ ಕಾಳಮಾವ.

"ಅರೆ, ವಳ್ಳೆ ಚನಾಗೇಳ್ತಿ ಕಣಮಾವ. ಸರಕಾರವೇ ...ನ್ನಾದ ಸುದ್ದಿ ನಿನಿಗೆ ಬ್ಯಾಡವೆ?"

"ಬೇಕು ಸರಿಯಪ್ಪಾ, ಈ ಹಲ್ಲಂಡೆ ನನಮಕ್ಕಳು ...ಸ್ನೇಟು ದಿನ ಇದ್ರು ಅಷ್ಟೆಯ. ಗಂಟು ...ಹಿಡಿಕಂಡೋಯ್ತರೆ."

"ಪಾಪ, ಸದಾನಂದ ಗೌಡ ಬಾಯಿಬುಟ್ರು ಸಾಕು ...ಗಾಡೋನು ಕಂಡ್ರ. ವಳ್ಳೆ ಮನ್ಸ. ಅವುನ್ನ ...ಳಿಸುಬಾರದಿತ್ತು" ಎಂದಳು ಜುಮ್ಮಿ.

"ನಮ್ಮ ಕಡೆ ಇದ್ದಿದ್ರೆ ಅವುನಿಗೆ ನಾಟಗದಲ್ಲಿ ಕಿಸ್ನ ...ರ್ಟು ಕೊಡಬವುದಿತ್ತು ಕಂಡ್ರ" ಎಂದು ಸೀರ ನಕ್ಕ.

"ಕಿಸ್ನನ ತರ ಕುತಂತ್ರದ ನಗ ಅಲ್ಲ ಕಣೊ ಇವುಂದೂ. ...ವುನ ಹುಟ್ಟಾಣಕನೆ ಅಂಗೆ. ಆದ್ರು ಕಡೆಲಿ ಕುತಂತ್ರ ...ಡಿ ತನಿಗೆ ತಾನೆ ಅಪಾಯ ತಂದುಕಂಡ."

"ಯಲ್ಲಾನು ಸುಸೂತ್ರವಾಗಿ ನ್ಯಡಿಸಿಗಂಡೋಯ್ತಾಯಿದ್ದ ...ವೆ?"

"ಊ ಕಣವಾವ. ಸದಾನಂದ ಗೌಡ ...ಮುಖ್ಯಮಂತ್ರಿಯಾದ್ರು ಒಂಚೂರು ಆಂಕಾರಿರಲಿಲ್ಲ, ಬಳಿ ...ಟ್ಟೆವೊಸ್ಟೆ ಸ್ವಚ್ಛವಾಗಿದ್ನಂತೆ. ಅರ್ಜಿ ಕೊಟ್ರೆ ಓದೋನಂತೆ. ...ವುನತ್ತಕೋಗಕ್ಕೆ ಅಧಿಕಾರಿಗಳು ಹೆದರತಿರಲಿಲ್ಲವಂತೆ. ...ಕಾರಿಗಳಿಗೆ ಅವುನು ಪ್ರೋತ್ಸಾಹ ಕೊಡ್ತಿದ್ದನಂತೆ. ಅಂತೂ ...ಟ್ಟೊಂದು ತಿಂಗಳು ಹೋದದ್ದೇ ಗೊತ್ತಾಗಲಿಲ್ಲ, ಇಡೀ ...ರ್ನಾಟಕನೆ ತಣ್ಣಗಿತ್ತು."

"ಅಂಥೋನ್ನ ಇಳಿಸಿದೋರಿಗೆ ವಳ್ಳೆದಾದತೆ?" ಎಂದಳು ಜುಮ್ಮಿ.

"ಜಾತಿರಾಜಕಾರಣದಲ್ಲಿ ವಳ್ಳೇದೆ ಆಯ್ತದೆ ಕಣೆ. ಅದಕ್ಕೆ ...ತ್ತೆ ಇಳಿಸಿದ್ದು. ಆದ್ರೂ ಲಿಂಗಾಯಿತ್ರ, ಒಕ್ಕಲಿಗರು ಅನ್ನೊ ಜಾತಿರಾಜಕಾರಣ ಎದ್ದುಬಿಡ್ತು. ಇದಂತೂ ಒಳ್ಳೆದಲ್ಲ, ...ವತ್ತಿಗೂ ವಳ್ಳೆದಲ್ಲ ಕಂಡ್ರ."

"ಅದೇಳು ದೊಡಪ್ಪ ಮುತ್ತಿನಂಥ ಮಾತು" ಎನ್ನುತ್ತಾ ...ಟಿಸ್ಸೆ ಬಂದ.

"ಬೆಂಗಳೂರಿಂದ ಯಾವಾಗ ಬಂದ್ಲಾ?"

"ಇದೇ ಈಗ ಬಂದೆ ಕಣಕ್ಕ. ಅಲ್ಯಲ್ಲಿ ತಿರುಗಾಡಿದ ...ಮ್ಯಾಲೆ ಅನ್ನುಸ್ತು, ಸದ್ಯದ ಕರ್ನಾಟಕದ ಸಿಟುಯೇಶನ್ ...ಳ ಕೆಟ್ಟೊಗ್ಯದೆ. ಇದ ಸರಿ ಮಾಡಕ್ಕೆ ಯಾವನಾದ್ರು ...ಗಾಗಿರೊ ಜಾತ್ಯತೀತ ಲೀಡ್ರು ಬರಬೇಕು. ಇಲ್ಲ ಅಂದ್ರೆ ಒಕ್ಕಲಿಗರು, ಲಿಂಗಾಯಿತ್ರ ಮಾರಾಮಾರಿ ಮಾಡಿಕತ್ತರೆ" ...ದ ವಾಟಿಸ್ಸೆ.


"ಇದೇನೂ ವಾಟಿಸ್ಸೆ ಹಿಂಗೆ ಮಾತಾಡ್ತಿ? ನಾವು ಅವುರು ಯಾವತ್ತು ಜಗಳಾಡಿಲ್ಲ, ರಾಜಕಾರಣದಲ್ಲಿ ಏನೊ ಮನಸ್ತಾಪ ಬತ್ತವೆ ಹೋಯ್ತವೆ."

"ಅಂಗಂತ ತಿಳಕಂಡು ಸುಮ್ಮನಿರಬೇಕು ಕಣೊ ಉಗ್ರಿ. ಸಾಮಾನ್ಯ ಜನಗಳು ಬೀದಿಗಿಳಿಯೋ ತರ ರಾಜಕಾರಣ ಮಾಡಬಾರ್ದು."

"ಮಾಡಿದೋರ್ಯಾರೇಳು?"

"ನನಗನ್ನಿಸುತ್ತೆ, ಇದರ ಉದ್ಘಾಟಕರು ದ್ಯಾವೇಗೌಡ್ರು ಅಂತೆ."

"ನಿನಿಗೆ ದ್ಯಾವೇಗೌಡ್ರು ಬುಟ್ರೆ ಇನ್ಯಾರೂ ಹ್ವಳಿಯದಿಲ್ಲ?"



"ನೋಡೊ ಉಗ್ರಿ, ಇತಿಹಾಸ ಕೆದಕಿದ್ರೆ ಕೆಲವು ಹಳೆ ಮ್ಯಾಟ್ರು ಸಿಗತವೆ. ನಮ್ಮ ರಾಜ್ಯದಲ್ಲಿ ಮೊದ್ಲಿಂದ ಯರಡು ಪ್ರಬಲವಾದ ಜಾತಿರಾಜಕಾರಣ ಸಮತೂಕವಾಗೆ ನ್ಯಡಕಂಡು ಬಂದದೆ. ಹರ್ಗ್‌ಜಾಂಪಲ್, ಆಗ ಕೆಂಗಲ್ ಹನುಮಂತಯ್ಯನ ಎದ್ರುಗೆ ನಿಜಲಿಂಗಪ್ಪ ಇದ್ರು. ಆನಂತ್ರ ವಿರೇಂದ್ರ ಪಾಟೀಲ್ ಕಾಲದಲ್ಲಿ ಇಂತ ಎದುರಾಬದುರಾ ಜಗಳನೇ ಇರಲಿಲ್ಲ. ಯಾಕಂದ್ರೇ ವಿರೇಂದ್ರ ಪಾಟೀಲ್ ಅಂಗಿದ್ರು."

"ದೊಡ್ಡ ಮನ್ಸ ಬಿಡವುನು" ಎಂದ ಕಾಳಮಾವ.

"ನಿಜ ದೊಡಪ್ಪ, ಗ್ರೇಟ್ ಲೀಡ್ರು. ಆನಂತರ ಅರಸು ಕಾಲ್ದಲ್ಲಿ ಲಿಂಗಾಯತರ ದೊಡ್ಡ ಲೀಡ್ರು, ಒಕ್ಕಲಿಗರ ದೊಡ್ಡ ಲೀಡ್ರು ಹದ್ದುಬಸ್ತಲ್ಲಿಟ್ಟಿದ್ದ ದೇವರಾಜ ಅರಸು ಕಾರ್ಯಕ್ರಮದ ಎದುರಿಗೆ ಇವುರ ಪುಂಗಿ ಬಂದಾಗಿದ್ದೊ. ಆಗ ನೋಡಪ್ಪ ಲಿಂಗಾಯಿತ್ರ ಬಮ್ಮಾಯಿ, ಒಕ್ಕಲಿಗರ ದ್ಯಾವೇಗೌಡ್ರು ಒಂದಾಗಿ ರಾಜಕಾರಣ ಸುರುಮಾಡಿದ್ರು. ಅವತ್ತಿಂದ ಇವತ್ತುಗಂಟ ಇವುರಿಬ್ರು ಹಂಚಗಂಡು ತಿಂದು ಉಳದದ್ದ ಹಿಂದುಳದೋರಿಗೆ ಬುಟಗಂಡು ಬಂದ್ರೆ ವರತೂ, ಹಿಂದುಳದೋರಿಗೆ ಲೀಡ್ರುಶಿಪ್ಪ ಕೊಡಲಿಲ್ಲ. ಯಾಕೆ ಅಂದ್ರೆ, ಜನತಾ ಪಾರ್ಟಿನೆ ಮೇಲುಜಾತಿ ಜನಗಳ ಪಾರ್ಟಿ ಆಗಿತ್ತು. ದಳನೂ ಅಂಗೇ ಇತ್ತು, ಈ ಬಿಜೆಪಿ ಹುಟ್ಟಿದ್ದೇ ಜಾತಿ ಒಕ್ಕಳದಿಂದ. ಅವುರು ಓಟು ತಗಂಡಿರದೂ ಅಂಗೆಯಾ. ಅದ್ಕೆ ಆ ಮುಂಡೆಮಕ್ಕಳು ಜಾತಿ ಬುಟ್ಟು ರಾಜಕಾರಣ ಮಾಡಕ್ಕೇ ಆಗಲಿಲ್ಲ, ಅದರ ಪರಿಣಾಮನೆ ಇದು ಕಣೊ ಉಗ್ರಿ."

"ಆದ್ರೆ ಬಿಜೆಪಿಗಳು ಈ ತರ ಆಯ್ತರೆ ಅಂತ ಅನ್ನಕಂಡಿರಲಿಲ್ಲ ಕಣೊ ವಾಟಿಸ್ಸೆ. ಜಾತಿನ್ಯಲ್ಲ ರಾಡಿ ಎಬ್ಬಿಸಿಬುಟ್ರು ಮುಂಡೆಮಕ್ಕಳು."

"ನಿಜ ಕಣೊ ಉಗ್ರಿ. ಜ್ಯಾತಿ ನ್ಯಲೆ ಊರಬೇಕು ಅಂದ್ರೆ ಜಾತಿ ಸುದ್ದಿ ಮಾತಾಡ್ತ ಇರಬೇಕು ಅನ್ನೊ ಜನ ಅವುರು. ಅವುರಿಗೆ ಮಾತ್ರ ಇದೇನೂ ಅನ್ನಿಸಿಲ್ಲ, ನಮಿಗೇ ಒಂಥರಾ ಆಗಿರದು."

"ಆಗ ಧರ್ಮಸಿಂಗನ್ನ ಇಳಿಸಿದಂಗೇ ಈಗ ಸದಾನಂದ ಗೌಡನ್ನ ಇಳಿಸಿದ್ರು ಅಂತ ದ್ಯಾವೇಗೌಡರಂದವುರಲ್ಲ, ನಿಜವೆ?"

"ನಿಜ ಕಣೊ ಉಗ್ರಿ. ಧರಮಸಿಂಗನ್ನ ಅಪ್ಪಮಗ ಸೇರಿಕಂಡು ಗಾಡಿಯಿಂದ ಮೂಟೆ ಯಸ್ತಂಗೆ ಯಸ್ತು ಬುಟ್ರು."

"ಥೂ, ಕಾಂಗ್ರೆಸ್ಸಿನೋರೆ ಇಳಿಸಿದ್ರು ಅಂತ ದ್ಯಾವೇಗೌಡ್ರೇಳಿರದು."

"ಅದ್ಯಾವ ಬಾಯಲಿ ಹೇಳ್ತರೊ ದ್ಯಾವೇಗೌಡ್ರು? ಇಡೀ ರಾಜ್ಯಕ್ಕೇ ಗೊತ್ತಿರಂಗೆ ದ್ಯಾವೇಗೌಡ್ರು, ಕುಮಾರಸ್ವಾಮಿ ಸೇರಿಕಂಡು ಪಾಪ ಆ ಧರಮಸಿಂಗನ್ನ ಮನಿಗೆ ಕಳಿಸಿದ್ರು. ಕೇಳಿದ್ಕೆ ಕಾಂಗ್ರೆಸ್ಸಿನವರು ನಮ್ಮ ದಳದ ಜನಗಳನ್ನ ಸೆಳೆಯಕ್ಕೆ ನೋಡಿದ್ರೂ ಅದ್ಕೆ ನನ್ನ ಮಗ ಪಾರ್ಟಿ ಉಳಿಸಿಗಂಡ ಅಂದಿದ್ರು. ಈಗ ತಿರಗ ಉಲ್ಟಾ ವಡದವುರೆ. ಅಂದ್ರೆ ರಿಯಲ್ಲಿ ವಂಡ್ರುಪುಲ್ ರಾಜಕೀಯ ಕಣೊ. ಎಡೂರಪ್ಪ ದ್ಯಾವೇಗೌಡ್ರತ್ತ ಇನ್ನು ಕಲಿಯದು ತುಂಬಾ ಇದೆ."

"ಹಿಂಗ್ಯಲ್ಲ ನ್ಯಡಿತಾಯಿರದು ಎಡೂರಪ್ಪನಿಂದ್ಲೆ ಅಲವೇನ್ಲ?"

"ನಾನೇನು ಇಲ್ಲ ಅಂದನೇನಕ್ಕ, ಅವುನು ಅವತ್ತಿನದಿನ ನನ್ನ ಮಾತ ಹೇಳಿದಂಗೆ ಕೇಳ್ತನೆ ಅಂತ ಸದಾನಂದಗೌಡುನ್ನ ಮುಖ್ಯಮಂತ್ರಿ ಮಾಡಿದ. ಅದೂ ಆರು ತಿಂಗಳಿಗೆ ಸೀಟು ಬುಟ್ಟು ಕೊಡಬೇಕು ಅಂತ. ಆದ್ರೆ ಸದಾನಂದಗೌಡ ಬುದ್ಧಿಲ್ಲ, ವಳ್ಳೆ ಜನಮೆಚ್ಚೊ ಆಡಳತ ಮಾಡ್ತಿದ್ದ. ಆದ್ರೆ ಯಾವತ್ತು ಅವುನು ಮುಖ್ಯಮಂತ್ರಿಯಾದಿದ್ದೇ ನಮ್ಮೊರಿಂದ ಅಂದನೊ ಅವತ್ತೇ ಎಡೂರ ಅನ್ನೊ ಶನಿ ಯಗಲೇರಿಬುಟ್ಟ. ಶನಿಕಾಟದ ವಿಶೇಷ ಏನಂದ್ರೇ ಅದು ಬುದ್ಧಿ ಕಲಸೊವರಿಗೂ ಬುಡದಿಲ್ಲ."

"ಇನ್ನೊಸಿದಿನ ಅವುನೆ ಇದ್ದಿದ್ರೆ ಎಡೂರಪ್ಪನಿಗೂ ಹೆಸುರು ಬತ್ತಿರಲಿಲ್ಲವೇನ್ಲ?"

"ಎಡೂರಪ್ಪ ಯಾವತ್ತೂ ವಳ್ಳೆ ಹೆಸರಿಗೆ ಹಾತೊರದಿಲ್ಲ ದ್ವಡಪ್ಪ, ಅವುನು ಹೋರಾಡಿರದ್ಯಲ್ಲ ಕ್ಯಟ್ಟ ಹೆಸರಿಗೇ ಅಲವೆ. ಯಲ್ಲಾರು ಅವುನ್ನ ಹೋರಾಟಗಾರ, ಹೋರಾಟದಿಂದ ಬಂದೋನು ಅಂತ ಹೇಳ್ತರೆ. ಮತೀಯವಾದ ಹೋರಾಟ ಯಾವತ್ಲೂ ನಿಜವಾದ ಹೋರಾಟ ಅನ್ನಿಸಿಗಳದಿಲ್ಲ. ಜಾತಿ ಹೋರಾಟದಿಂದ ಬಂದೊನು ಅದ್ನೆ ಮಾಡಿ ಇವತ್ತು ಇಡೀ ಕರ್ನಾಟಕದ ಲಿಂಗಾಯತ್ರ, ಒಕ್ಕಲಿಗರು ಕಿತ್ತಾಡಂಗೆ ಮಾಡಿಬುಟ್ಟವುನೆ."

"ಆದ್ರು ನಮ್ಮೋರು ಬೀದಿಗಿಳಿಬಾರದಿತ್ತಲವೆ?"

"ನಮ್ಮೊರು ಯಾವತ್ತೂ ಬೀದಿಗಿಳಿದಿಲ್ಲ ಕಣೊ ಉಗ್ರಿ. ಯಾರೋ ಇಳಿಸ್ಯವುರೆ. ಅಂತಾ ಕ್ಯಂಗಲ್ ಹನುಮಂತಯ್ಯನ್ನ ಇಳಿಸಿದಾಗ ಯಾರೂ ಚಕಾರ ಎತ್ತಿಲ್ಲ. ದ್ಯಾವೇಗೌಡ್ರು ಅಧಿಕಾರ ಬುಟ್ಟಾಗ, ಅಮ್ಯಾಲೆ ಪ್ರಧಾನಿಯಾಗಿ ಅಧಿಕಾರ ಕಳಕಂಡಾಗ್ಲು ಯಾರೂ ಮಾತಾಡಿಲ್ಲ, ಬದ್ಲಿಗೆ ಒಬ್ಬ ಮಾಜಿ ಪ್ರಧಾನಿನ ಹಾಸನದಲ್ಲಿ ಸೋಲಿಸಿ ಕಳಿಸಿದ್ರು. ನಮ್ಮ ಜನ ಯಾವತ್ತೂ ಇಂತ ಹಲ್ಲಂಡೆ ರಾಜಕಾರಣಕ್ಕೆ ಬೀದಿಗೆ ಬಂದೋರೆ ಅಲ್ಲ, ಆದ್ರೆ ಯಾರೊ ಅವುರ್ನ ಪ್ರಚೋದನೆ ಮಾಡಿ ಬೀದಿಗೆ ಕಳುಸ್ತಾ ಅವುರೆ."

"ಅವುನ್ಯಾರೊ ನಂಜಾವದೂತ ಅನ್ನೊ ಸ್ವಾಮಿಯಂತೆ ಕಂಡ್ರ."

"ನಾನು ಅವುನ್ನ ನೋಡಿದ್ದಿನಿ ಚಿಗಪ್ಪ, ಥೇಟ್ ನಿನ್ನಂಗೇ ಅವುನೆ. ಪಾಪ ಆಧ್ಯಾತ್ಮ ಅರ್ಥಾಗಿಲ್ಲ. ಅದ್ಕೆ ಅಂಗಾಡ್ತ ಇರಬವುದು. ಹೋಗ್ಲಿ ಬುಡತ್ತಗೆ."

"ಈ ಜಗದೇಸ್ ಸೆಟ್ರು ಅನ್ನೋನು ಯಂಗ್ಲಾ?"


"ಅವುನು ಒಳ್ಳೆ ಕುಟುಂಬವಂತ ಕಣಕ್ಕ. ಆಗಿನ ಕಾಲಕ್ಕೆ ಒಂದು ವೆಸ್ಪಾ ಸ್ಕೂಟರ್ ತಗಂಡು, ಹೆಡತಿ ಕರಕಂಡೋಗಿ, ಮಸಾಲೆ ದೋಸೆ ಕೊಡಿಸಿಕೊಂಡು ಬತ್ತಿದ್ದನಂತೆ. ಒಳ್ಳೆ ಗಂಡನಂತೆ. ಸುಮಾರಾಗಿದ್ದ ಲಾಯರಂತೆ. ಕ್ಯಾಕರಿಸಿ ಉಗುದ್ರು ಕ್ಯಾಪ ಬರದಿಲವಂತೆ. ಟೋಟಲ್ಲಿ ವಳ್ಳೆ ಮನುಸ್ನಂತೆ, ಸದಾನಂದಗೌಡ ಹಲ್ಲುಬುಟ್ಟು ನಗಾಡಿದ್ರೆ, ಇವುನು ಹಲ್ಲು ಕಾಣದಂಗೆ ಮುಗುಳುನಗ್ತನೆ. ಈ ಬದ್ಲಾವಣೆಯಿಂದ ಅಂತ ಡಿಫರೆಂಟೇನೂ ಆಗಿಲ್ಲ. ಊದದು ಬುಟ್ಟು ಬಡಿಯದ ಕೊಂಡಕಂಡಂಗೆ ಆಗ್ಯದೆ. ಆದ್ರೆ ಜಾತಿ ಸಾಮರಸ್ಯ ಹಾಳಾಗ್ಯದೆ. ಬಿಜೆಪಿ ಪಾರ್ಟಿ ಯಕ್ಕುಟ್ಟಿ ಹೋಗ್ಯದೆ. ಇದ್ದಕ್ಕಿದ್ದಂಗೆ ಸದಾನಂದಗೌಡ್ರು ಕಮ್ಯುನಿಟಿ ಲೀಡ್ರು ತರ ಆಗಿ, ಕುಮಾರಣ್ಣ ಡೌನಾದಂಗೆ ಕಾಣ್ತಾ ಅವುನೆ!"

❖


...ಹುತ್ತ ಗಟ್ಟುವುದು ಎಂದು? ಹೇಗೆ?

ಮೊದಲ ಬಾರಿಗೆ ಚಿತ್ರದಲ್ಲಿ ಹೀರೋ ಆಗಿ ನಟಿಸಿದವನಿಗೆ ಆತನ ನಿರ್ದೇಶಕ ಹೇಳುವುದು, 'ನೀನೀಗ ...ಹೀರೋ, ನೀನು ಎಲ್ಲೆಂದರಲ್ಲಿ ಕಾಣಿಸಿಕೊಂಡು ಸರ್ವೇಸಾಮಾನ್ಯ ಮನುಷ್ಯನಾಗಬಾರದು. ಜನರಿಂದ ದೂರವಿರುವುದನ್ನು ...ಕಲಿತುಕೋ.'

ದೂರವಿದ್ದವನನ್ನು ಕಲ್ಪಿಸಿಕೊಂಡು ಹೀರೋ ಗುಣವನ್ನು ಆತನಿಗೆ ಕೊಡುವುದು ಜನಸಾಮಾನ್ಯರ ...ಚಾಳಿ. ಜನರ ಕಲ್ಪನೆಯಲ್ಲಿ ಬೆಳೆಯುವುದಕ್ಕಾಗಿಯೇ ನಟ ಅವರಿಂದ ದೂರ ಇರುತ್ತಾನೆ. ದೂರ ...ಇರುತ್ತಲೇ ಆತ ಜನಸಾಮಾನ್ಯರ ನುಡಿಕಟ್ಟು, ವ್ಯವಹಾರ, ಆಸಕ್ತಿ ಎಲ್ಲದರಿಂದ ವಂಚಿತನಾಗುತ್ತಾನೆ. ...ರಾಜ ಗಂಭೀರನಾಗಿರಬೇಕೆಂದು ಆತನನ್ನು ಎಲ್ಲಿಯೂ ಬಿಡುತ್ತಿರಲಿಲ್ಲ; ಹಾಗಾಗಿ ಈ ಶತಮಾನದ ...ಆರಂಭದಲ್ಲಿದ್ದ ಮೈಸೂರಿನ ರಾಜರಿಗೆ ಮಸಾಲೆದೋಸೆ ತಿನ್ನುವ ಆಸೆಯಾಗಿ ಒಂದೊಂದು ದೋಸೆಗೆ ...ಹತ್ತು ರೂಪಾಯಿ ತೆರಬೇಕಾಗುತ್ತಿತ್ತು. ಅವರ ಸಹಾಯಕರ ಮೋಸ ಬೆಳೆದದ್ದೇ ಹಾಗೆ.



ನಿಮ್ಮ ಏಕಾಂಗಿತನ ನಿಮ್ಮ ಬಗ್ಗೆ ಸದಭಿಪ್ರಾಯ ಮೂಡಿಸಬಹುದು; ಆದರೆ ಏಕಾಂಗಿತನಕ್ಕೆ ...ಬೇಕಾದ ವ್ಯಕ್ತಿತ್ವದ ಸಂಪತ್ತು ಇಲ್ಲದಿದ್ದರೆ ನಿಮ್ಮ ನಾಶ ಖಂಡಿತ. ಕವಿಯೊಬ್ಬ ಏಕಾಂಗಿಯಾದರೆ ...ಆತನ ಭಾಷೆಯೇ ಸೊರಗುತ್ತದೆ; ಕವಿಗೆ ಅವನ ಭಾಷೆ ನೇಕಾರನಿಗೆ ಹತ್ತಿ, ರೇಷ್ಮೆ ಇದ್ದಂತೆ. ಅದು ...ದುರ್ಬಲವಾದರೆ ಅವನ ಕಾವ್ಯವೂ ದುರ್ಬಲ. ಅರಣ್ಯದ ಕರೆಯ ಬಗ್ಗೆ ಯೋಚಿಸಿ. ನೀವು ...ರೈಲಿನಲ್ಲಿ ಕೂತು ನೋಡಿದರೆ ಅರಣ್ಯ ರಮ್ಯಭೀಕರವಾಗಿ, ಮನುಷ್ಯನ ಶ್ರೇಷ್ಠ ತಪಸ್ಸಿಗೆ ಹೇಳಿಮಾಡಿಸಿದ ...ಪರಿಸರವಾಗಿ ಕಾಣುತ್ತದೆ. ಆದರೆ ಅರಣ್ಯದಲ್ಲೇ ವಾಸಿಸತೊಡಗಿದರೆ ಬೇಸರ ಶುರುವಾಗುತ್ತದೆ. ...ಸೊಳ್ಳೆ, ಚಿಗುಟದಿಂದ ಹಿಡಿದು ಥಂಡಿ, ಗಾಳಿ, ಬಿಸಿಲು ಇವೆಲ್ಲವನ್ನೂ ಒಳಗೊಂಡು ಪ್ರಾಥಮಿಕ ಸೌಕರ್ಯಗಳಾದ ...ದೀಪ, ನಲ್ಲಿ, ಫೋನ್, ಟಿವಿ ಯಾವುದೂ ಇಲ್ಲವೆನ್ನುವ ಸತ್ಯ ಶುರುವಾಗಿ ಅರಣ್ಯದ ಜೀವಕೋಟಿಗೂ ನಮಗೂ ...ಸಂಬಂಧವೇ ಇಲ್ಲವೆನ್ನುವ ಸತ್ಯ ತಿಳಿಯುತ್ತದೆ. ಹುಲಿ ನಮಗಾಗಿ ಹಟ್ಟಿ ಹೊಡೆದುಕೊಂಡಿಲ್ಲ, ಚಿಟ್ಟೆ ತನ್ನ ಬಣ್ಣ ...ಬೆಳೆಸಿಕೊಂಡಿಲ್ಲ, ಆನೆ ಸೊಂಡಿಲು ಸೃಷ್ಟಿಸಿಕೊಂಡಿಲ್ಲ... ಆದ್ದರಿಂದ ನೀವು ಕೆಲವು ದಿನಗಳಲ್ಲೇ ಮನುಷ್ಯನಿರ್ಮಿತ ...ನಾಗರಿಕತೆಗಾಗಿ ಹಂಬಲಿಸತೊಡಗುತ್ತೀರಿ. ಇದನ್ನು ನೋಡಿದಾಗಲೇ ಮೈಮೇಲೆ ಹುತ್ತ ಬೆಳೆಯುವವರೆಗೆ ಕೂತು ...ತಪಸ್ಸು ಮಾಡುತ್ತಿದ್ದ ಋಷಿಗಳು ... ನಮ್ಮಂಥವರಿಗಲ್ಲ, ಎಂದು ಮನವರಿಕೆಯಾಗುತ್ತದೆ ಅಥವಾ ಈ ಋಷಿಗಳ ತಪಸ್ಸು ಕೂಡಾ ಮನುಷ್ಯನ ಆಶಯದ ಒಂದು ರೂಪ ಇರಬಹುದು. ನಾವು ಸಿನಿಮಾದಲ್ಲಿ ಈ ಋಷಿಗಳನ್ನು ನೋಡಿದ್ದೇವೆಯೇ ಹೊರತು ತಮ್ಮ ಶಿಷ್ಯರೊಂದಿಗೆ ಘೋರ ಅರಣ್ಯದಲ್ಲಿ ತಿಂಗಳುಗಟ್ಟಲೇ ಧ್ಯಾನದಲ್ಲಿ ಮುಳುಗಿರುವ ಋಷಿಗಳನ್ನು ನೋಡಿಲ್ಲ. ಅಂಥವರು ಅಕಸ್ಮಾತ್ ನಿಮಗೆ ಕಂಡರೂ ಅವರು pose ಕೊಡುತ್ತಿರುತ್ತಾರೆ; ಹತ್ತು ಗ್ರಾಂ ಗಾಂಜಾಕ್ಕೆ ಬೇಕಾದ ಕಾಸಿಗಾಗಿ ನಮ್ಮೆದುರು ತಪಸ್ಸಿನ ನಾಟಕ ಆಡುತ್ತಿರುತ್ತಾರೆ. ಇದು ಕಲ್ಪನೆಯಲ್ಲ ಎಂದುಕೊಂಡಿದ್ದೇವೆ. ಯಾಕೆಂದರೆ ಸಿದ್ಧಾರ್ಥನಂಥವರು ಲೌಕಿಕ ವಿಷಯಗಳ ಬಗ್ಗೆ ಮಾತಾಡುತ್ತಾ ಓಡಾಡುತ್ತಿದ್ದಾಗ ತಮ್ಮ ತಪಸ್ಸಿನ ಬಲದಿಂದ ಆತ್ಮವನ್ನು ತೋರುವ ಜನರು ಇರಲಿಲ್ಲ. ಇದು ಎರಡೂವರೆ ಸಾವಿರ ವರ್ಷಗಳ ಹಿಂದೆ.



ಇದೆಲ್ಲ ಸಿನಿಕತನವಲ್ಲ, ಮನುಷ್ಯನ ಮನಸ್ಸಿನಲ್ಲಿ ಪುರಾಣಗಳು ಮತ್ತು ವಾಸ್ತವ ಬೆರೆತುಹೋಗಿ ಅಸಾಧ್ಯ ವಿಷಯಗಳನ್ನು ಆತ ನಂಬತೊಡಗುತ್ತಾನೆ. ಅದೇನೇ ಇರಲಿ, ಸಾಮಾನ್ಯರು ಅರಣ್ಯವನ್ನು ಮೆಚ್ಚುತ್ತ ನಡೆದಿರುವುದು ನಾಗರಿಕ ಸಂಗದತ್ತ, ಹರಟೆ, ಪ್ರೇಮ, ಯುದ್ಧ, ಜೂಜು, ಒಳನೋಟ...ಎಲ್ಲವೂ ಹುಟ್ಟಿದ್ದು ಸಂಗದಲ್ಲಿ ಮತ್ತು ಏಕಾಂಗಿತನದಲ್ಲಿ. ಏಕಾಂಗಿತನವನ್ನು ಅನುಭವಿಸದೆ ಸ್ನೇಹ ಮತ್ತು ಪ್ರೇಮವನ್ನು ತೀವ್ರವಾಗಿ ಅನುಭವಿಸುವುದು ಕಷ್ಟ. ಜನರ ಜೊತೆಗಾರಿಕೆ ಹೆಚ್ಚಾದಷ್ಟೂ ಒಬ್ಬಂಟಿಯಾಗಿರಲು ಮನುಷ್ಯ ಕಾತರಿಸುವುದು ಸಹಜ. ಈಗ ಮತ್ತೆ ಏಕಾಂಗಿತನ ಮತ್ತು ಹೀರೋಗಳತ್ತ ಬನ್ನಿ. ಹೀರೋ ನಿಜಕ್ಕೂ ಹೀರೋ ಆಗಿರುವುದೇ ಜನರ ಮಧ್ಯೆ ಆತ ಸುಲಭವಾಗಿ ನೋಡಲು ಸಿಕ್ಕುವುದಿಲ್ಲವಾದ್ದರಿಂದ ಹೀರೋ. ಸಮಾಜದ ಕೆಡುಕುಗಳ ಬಗ್ಗೆ ಕೋಪಗೊಂಡು ಥೋರೋ ಎಂಬ ಅಮೆರಿಕನ್ ಚಿಂತಕ ವಾಲ್ಡನ್ ಸರೋವರದ ದಡಕ್ಕೆ ಹೋಗಿ ವಾಸಿಸತೊಡಗಿದ. ಆತನ ಈ ಪ್ರಕೃತಿಪ್ರೇಮಕ್ಕೆ ಸಾಕಷ್ಟು ಪ್ರಚಾರ ಸಿಕ್ಕಿತು. ಪ್ರಕೃತಿಯ ಸಹಜತೆ ಮತ್ತು ಉತ್ಕಟತೆಯ ಬಗ್ಗೆ ಸಾಕಷ್ಟು ಬರೆದ. ಆದರೆ ವರ್ಷಗಟ್ಟಲೇ ವಾಲ್ಡನ್ ಸರೋವರದ ಹತ್ತಿರ ವಾಸಿಸುವುದಾಗಿ ಹೇಳಿದ್ದ ಥೋರೋ ಕೆಲವೇ ತಿಂಗಳುಗಳಲ್ಲಿ ಪಟ್ಟಣಕ್ಕೆ ಹಿಂದಿರುಗಿದ. ಆಗ 'ಅವರ ಅಭಿಮಾನಿಗಳು ಯಾಕೆ ಇಷ್ಟು ಬೇಗ ವಾಲ್ಡನ್‌ನಿಂದ ಬಂದಿರಿ?' ಅಂದರು. ಥೋರೋಗೆ ಸಿಟ್ಟು ಬಂದು. 'ನಾನು ಹುಟ್ಟಿದ್ದು ಕಗ್ಗಾಡಿನಲ್ಲಿ ಸಾಯುವುದಕ್ಕಲ್ಲ' ಎಂದು ಹೇಳಿದ.

ಜುಲೈ 23, 1997

ಭಾನುವಾರ ಜಯಂತಿಗೂ ರಜ!

ಕೆಲವು ಪ್ರಖ್ಯಾತನಾಮರು ಇದ್ದಾರೆ. ಜೀವನದಲ್ಲಿ ಮಹತ್ತರವಾದುದನ್ನು ಸಾಧಿಸಿರುತ್ತಾರೆ. ಅಂತಹವರನ್ನು ನೆನೆಯುವುದು ಸುಸಂಸ್ಕೃತಿಯ ಕುರುಹು ಎಂದು ನಂಬಲಾಗಿದೆ. ಪ್ರಶ್ನೆ ಏನು ಅಂದರೆ ಮಹಾಪುರುಷರಿಗೆ ಕೃತಜ್ಞತೆ ಸಲ್ಲಿಸುವುದು ಹೇಗೆ?

ಅವರ ಜಯಂತಿಗಾಗಿ ರಜ ಘೋಷಿಸಿ!

ಇದು ಭಾರತೀಯ ಸಂಪ್ರದಾಯ!

ಗಾಂಧೀಜಿ ರಾಷ್ಟ್ರಪಿತ. ಆತನ ಜಯಂತಿಯಂದು ರಜ!

ಅಂಬೇಡ್ಕರ್ ಸಂವಿಧಾನ ಶಿಲ್ಪಿ, ಅವರ ಜಯಂತಿಗೂ ರಜ!

ಬಸವ ಜಗದ ಜ್ಯೋತಿ. ರಜ ನೀಡದೆ ಜ್ಯೋತಿ ಬೆಳಗುವುದಿಲ್ಲ!

ವಾಲ್ಮೀಕಿ ರಾಮಾಯಣ ಬರೆದ ಮಹಾಪುರುಷ. ಅವನ ಜಯಂತಿಗೆ ರಜ ನೀಡದಿದ್ದರೆ ಅವನಿಗೆ ಅವಮಾನ ಎಸಗಿದಂತೆ!

ಹುಟ್ಟಿದ ದಿನದಂದು ರಜ ನೀಡಲೆಂದೇ ಅವರೆಲ್ಲ ತಮ್ಮ ಜೀವನದ ಸಾಧನೆಗಳನ್ನು ಸಿದ್ಧಿಸಿರಬಹುದು!

ಒಂದು ವೇಳೆ ಸರ್ಕಾರ ಹೀಗೆ ಆಲೋಚಿಸಿತು: ಗಾಂಧಿ ಸಿದ್ಧಾಂತಗಳ, ಸಂವಿಧಾನದ ಆಶಯಗಳ, ರಾಮಾಯಣದ ಆದರ್ಶಗಳ, ಬಸವ ಬೆಳಗಿದ ಜ್ಯೋತಿಯ ಚಿಂತನ ಮಂಥನಕ್ಕೆ ಅವರು ಹುಟ್ಟಿದ ದಿನ ಮೀಸಲಾಗಿರಬೇಕು ಎಂದೇ ಆ ದಿನಗಳಲ್ಲಿ ರಜ ಘೋಷಿಸಲಿಲ್ಲ, ಆಗ ಏನಾಗಬಹುದು?

ಸಿಡಿದೇಳುವರು ಸ್ವಾಭಿಮಾನಿ ಭಕ್ತರು!

ಬೇಕಿಲ್ಲ ಅವರ ನಡೆನುಡಿ; ರಜವೇ ಪರಮ ಗುರಿ!

ಪ್ರಜಾಪ್ರಭುತ್ವ. ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ. ಅದು ದೊರೆಯಿತು. ಎಲ್ಲರಿಗೂ ತೃಪ್ತಿ!

ಆಯಿತು. ಅವರ ಜಯಂತಿ ಭಾನುವಾರ ಬಂದರೆ?

ಒಂದು ದಿನದ ರಜ ನಷ್ಟ!

ಇದು ಆಗಬಾರದು. ಭಾನುವಾರ ವಿಶ್ರಾಂತಿ ದಿನ. ಸರ್ಕಾರಿ ಸೇವೆಯಲ್ಲಿರುವವರಿಗೆ ಇದು ಅತ್ಯಗತ್ಯ! ಆ ದಿನವೂ ಕೆಲಸ ಹಚ್ಚುವುದು ಅಪಚಾರ! ಅವರಿಗೆ ಬಗೆದ ದ್ರೋಹ!

ಇದಕ್ಕೇನು ಪರಿಹಾರ?

ಮಹಾ ಪುರುಷರನ್ನು ಕೆಲಸದ ದಿವಸ ಹುಟ್ಟಿಸಿ!

ಇದನ್ನು ಹೇಳಲು ಕಾರಣ ಇದೆ.

ಮಮತಾ ದೀದಿ ರಾಜಕಾರಣಿ. ಪ್ರತಿಯೊಂದು ನಡೆಯಲ್ಲೂ ಅದು ಎದ್ದು ತೋರುತ್ತೆ. ಅವರ ಬದ್ಧವೈರಿಗಳು ಎಂದರೆ ಕಮ್ಯುನಿಸ್ಟರು. ಈಗ ಜ್ಯೋತಿಬಸು ಜಯಂತಿ ಬಂದಿದೆ. ಜನರಿಗೆ ಅವರ ಮೇಲೆ ಅಪಾರ ಪ್ರೀತಿ, ಅಭಿಮಾನ ಇದೆ. ಅವರ ಜಯಂತಿ ಆಚರಿಸಬೇಕು. ಆದರೆ ಅವರು ಕಮ್ಯುನಿಸ್ಟರು! ಅವರ ಜಯಂತಿಯನ್ನು ಕಮ್ಯುನಿಸ್ಟರು ಆಚರಿಸುತ್ತಾರೆ. ನಿಜ. ತನ್ನ ಸರ್ಕಾರವೂ, ಅದರಲ್ಲಿ ತೊಡಗಿಕೊಂಡರೆ ಅವರಿಗೆ ಪೂರಕವಾಗಿದ್ದಂತೆ ಆಗುತ್ತದೆ. ಆಚರಿಸದೆ ಹಾಗೆ ಇದ್ದರೆ ಜನರಿಗೆ ಅಸಮಾಧಾನ. ಈ ತೊಳಲಾಟದಲ್ಲಿ ಅವರ ಆಸರೆಗೆ ಬಂದದ್ದು-ಹುಟ್ಟಿದ ದಿನದ ಎಳೆ!

ಜ್ಯೋತಿಬಸು ಜನ್ಮ ತಾಳಿದ್ದು ಜುಲೈ 8 ರಂದು. ಈ ಸಲ ಅದು ಭಾನುವಾರ. ಕಮ್ಯುನಿಸ್ಟರು ಹುಟ್ಟಿದ ದಿನದಂದೇ ಜನ್ಮದಿನ ಆಚರಿಸುತ್ತಾರೆ ಎಂಬುದು ಖಚಿತವಾಗಿತ್ತು, ಮಮತಾ ದೀದಿಗೆ ಇಷ್ಟೇ ಸಾಕಾಗಿತ್ತು, ತಮ್ಮ ಬತ್ತಳಿಕೆಯಿಂದ ಬಿಟ್ಟರು ಒಂದು ಬಾಣ- 'ರಜಾ ದಿನದಂದು ಜಯಂತಿ ಆಚರಿಸುವುದು ಎಷ್ಟು ಸರಿ? ರಜಾದಂದು ಜನರೇ ಇರುವುದಿಲ್ಲ, ಜನರೇ ಇಲ್ಲದ ಜಯಂತಿ ಆಚರಣೆ ವ್ಯರ್ಥ.'

ಬಸುಜಯಂತಿಯನ್ನೇ ಆಚರಿಸಲಿಲ್ಲವೆ ದೀದಿ?

ಶಾಂತಂ ಪಾಪಂ. ಆಚರಿಸಿದರು. ಇದಕ್ಕೆ ಪರಿಹಾರ ಅವರ ಬಳಿ ಇದ್ದಿತು.

ಏನು ಪರಿಹಾರ?

ಮಮತಾ ದೀದಿ ಎರಡು ದಿವಸ ಮುನ್ನವೇ ಬಸು ಅವರ ಜಯಂತಿ ಆಚರಿಸಿದರು!


ದೀದಿ ಚಾಣಾಕ್ಷತನವನ್ನು ಮೆಚ್ಚೋಣ. ಒಂದು ವೇಳೆ ಯಾವುದೋ ಕಾರಣಕ್ಕೆ ಒಂದು ವಾರ ರಜ ಬಂದಿತ್ತು, ಆಗ ಏನು ಮಾಡುತ್ತಿದ್ದರು ದೀದಿ?



ಪ್ರಾಯಶಃ ಜಯಂತಿಯನ್ನ ಒಂದು ವಾರ ಹಿಂದೂಡುತ್ತಿದ್ದರು!

ಹಿಂದೂಡಬೇಕೆ? ಯಾಕೆ ಮುಂದೂಡಬಾರದು?

ಮಗುವಿಗೆ ಜೀವಾಂಕುರವಾಗುವುದು ಗರ್ಭಧಾರಣೆ ಆದ ಕ್ಷಣದಲ್ಲಿ. ಆ ಕ್ಷಣದಿಂದ ತಾಯಿಯ ಗರ್ಭದಿಂದ ಹೊರಬರುವ ತನಕ ಎಂದಾದರೂ ಜಯಂತಿ ಆಚರಿಸಬಹುದು ಎನ್ನಬಹುದೇನೋ ದೀದಿ......!



ಎಚ್.ಎಲ್. ಕೇಶವಮೂರ್ತಿ

ಅಣಕ

ಬಡವನ ಬಡಿವಾರ

ಒಂದು ಊರು. ಅಲ್ಲಿ ಒಬ್ಬ ತೋರಿಕೆ ಮನುಷ್ಯ ಇದ್ದನಂತೆ. ಔಷಧಿಗೆ ಬೇಕು ಅಂದರೂ ಬಾನದಲ್ಲಿ ಮೂರು ಅಕ್ಕಿಕಾಳು ಸಿಗುತ್ತಿರಲಿಲ್ಲವಂತೆ. ಆದರೂ ಅವನ ಬಡಿವಾರಕ್ಕೆ ಮಾತ್ರ ಅಂತ್ಯವೇ ಇರಲಿಲ್ಲವಂತೆ. ಅನ್ನದ ಅಗುಳನ್ನ ಮೀಸೆ ಮೇಲೆ ಕೂರಿಸಿಕೊಂಡು ತಾನು ಮೃಷ್ಟಾನ್ನ ಉಂಡೆ ಅನ್ನುವ ತರಹ ಆಡುತ್ತಿದ್ದನಂತೆ. ಹಾಗಾಗಿದೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಕತೆ ಅಂತ ಯಾರೋ ಹೇಳುತ್ತಿರುವುದನ್ನು ಕೇಳಿಸಿಕೊಂಡಿದ್ದೆ. ಯುವ ಮುಖ್ಯಮಂತ್ರಿ. ದಡ್ಡನೂ ಇರಲಾರ. ಇಂಜಿನಿಯರಿಂಗ್ ಪದವೀಧರ. ಅತಿಬುದ್ಧಿವಂತಿಕೆ ತೋರಿಸಲು ಹೋಗಿ ಏನೋ ಯಡವಟ್ಟು ಮಾಡಿಕೊಂಡಿರಬೇಕು. ಅದಕ್ಕೆ ಅವರು ಹಾಗೆಂದಿದ್ದಾರೆ. ಅದು ಏನಿರಬಹುದು ಅಂತ ಹಾಗೇ ಕೊಂಚ ಪತ್ತೇದಾರಿ ಕೆಲಸ ಮಾಡಿದೆ.

ಅದೇನಾಗಿತ್ತು ಅಂದ್ರೆ ಉತ್ತರ ಪ್ರದೇಶವೇ ಸಾಲದಲ್ಲಿ ಮುಳುಗಿತ್ತಂತೆ. ಎರಡು ಲಕ್ಷ ಕೋಟಿ ಸಾಲ ಇದೆಯಂತೆ ಅದಕ್ಕೆ, ಬಡವರ ಉದ್ಧಾರ ಮಾಡೋಕೆ ಹೋಗಿ ಸಾಲ ಮೈಮೇಲೆ ಬಂದಿರಬಹುದು! ಅದು ಯಾಕೋ ಏನೋ ಬಡವರ ಉದ್ಧಾರಾನೇ ಆಗಲಿಲ್ಲವಂತೆ. ಆದರೂ ತಗೊಂಡ ಸಾಲ ತೀರಿಸಲೇಬೇಕಲ್ಲವಾ. ತೀರಿಸೋಕೆ ಅಂತ ಆದಾಯಾನೂ ಬರ್ತಿರಲಿಲ್ಲವಂತೆ. ಅದಕ್ಕೇ ನೀವು ಕೈಹಿಡೀದೆ ಇದ್ದರೆ ಮುಳುಗೇಹೋಗ್ತೀನಿ ಅಂತ ಕೇಂದ್ರ ಸರ್ಕಾರದ ಸಹಾಯಕ್ಕೆ ಅಂಗಲಾಚುತ್ತಿದೆಯಂತೆ.

ಪರಿಸ್ಥಿತಿ ಹೀಗಿದ್ದರೂ ಅಲ್ಲಿನ ಮುಖ್ಯಮಂತ್ರಿಗೆ ಜನರ ಮೇಲೆ ಯದ್ವಾತದ್ವಾ ಪ್ರೀತಿಯಂತೆ. ಅವರ ಸೇವೆಯನ್ನು ತೃಪ್ತಿಕರವಾಗಿ ಮಾಡಬೇಕಾದರೆ ಅವರ ಕಷ್ಟಸುಖ ಅರೀಬೇಕು. ಇದಾಗಬೇಕು ಅಂದರೆ ಕ್ಷೇತ್ರವನ್ನು ಶಾಸಕರು ಸುತ್ತಬೇಕು. ಆದರೆ ತೊಂದರೆ ಏನು ಅಂದರೆ ಹೀಗೆ ಜನಸಂಪರ್ಕ ಬೆಳೆಸಿಕೊಳ್ಳಲು ಶಾಸಕರ ಬಳಿ ಕಾರೇ ಇರಲಿಲ್ಲವಂತೆ!

ಇದೇನು ಹೊಸವರಸೆ. ಅಲ್ಲಿನ ಶಾಸಕರಲ್ಲಿ ಶೇಕಡ ಅರವತ್ತಕ್ಕೂ ಹೆಚ್ಚುಮಂದಿ ಕೋಟ್ಯಾಧೀಶರೇ ತುಂಬಿದ್ದಾರೆ, ಅವರಿಗೆ ಕಾರಿಲ್ಲ ಎಂದರೆ ಅರ್ಥ ಇದೆಯ ಎನ್ನಿಸಬಹುದು. ನಾನೂ ಹಾಗೇ ತಿಳಿದಿದ್ದೆ. ಕೋಟ್ಯಾಧೀಶರೆಲ್ಲ ಸ್ವಂತ ಕಾರಲ್ಲೇ ಓಡಾಡ್ತಾರೆ ಎಂದು ಪೆದ್ದುಪೆದ್ದಾಗಿ ಯೋಚಿಸಿದ್ದೆ. ಲಾಂಗೂಲಾಚಾರ್ಯರ ಪ್ರಬಂಧ ಓದಿದಾಗ ಕೋಟ್ಯಾಧೀಶರ ಕೋಟಲೆಗಳು ಎಷ್ಟೊಂದು ಇದಾವೆ ಅನ್ನುವುದು ತಿಳೀತು. ಪಾಪ ಅವರಿಗೆ ಆದಾಯ ತೆರಿಗೆ, ಆಸ್ತಿ ತೆರಿಗೆ ಹಾಳುಮೂಳು ಅಂತ ನೂರೆಂಟು ತೆರಿಗೆಗಳು ಇರ್ತಾವಂತೆ. ಕೋಟ್ಯಾಧೀಶ ಅಂದಮೇಲೆ ಜೀವನಶೈಲಿನೂ ಹಾಗೇ ಇರಬೇಕಾಗುತ್ತೆ ಅಲ್ವಾ. ಮಕ್ಕಳುಮರೀನೂ ಹಾಗೇ ಬೆಳೆಸಬೇಕಾಗುತ್ತೆ, ಆಳುಕಾಳು ಇರಲೇಬೇಕಾಗುತ್ತೆ. ತಾಪತ್ರಯಗಳು ಅವರ್‍ನೇ ಹುಡುಕಿಕೊಂಡು ಬರುತ್ತವಂತೆ. ಹೀಗಾಗಿ ಅವರು ಮನೆಮಠ, ಆಸ್ತಿಪಾಸ್ತಿ, ಕಾರುಗೀರು ಎಲ್ಲಾನೂ ಬೇನಾಮಿ ಹೆಸರಿನಲ್ಲೇ ಮಾಡಬೇಕಾಗುತ್ತದಂತೆ. ಹೆಸರಿಗೆ ಕೋಟ್ಯಾಧೀಶ ಆದರೂ ಯಾರದೋ ಕಾರಿನಲ್ಲಿ ಓಡಾಡಬೇಕಾಗ್ತದಂತೆ!

ಸ್ವಂತ ಕಾರು ಇಲ್ಲ ಅನ್ನುವ ಒಂದೇ ಕಾರಣಕ್ಕೆ ಜನರ ಸೇವೆ ಮಾಡುವುದನ್ನ ತಪ್ಪಿಸಬಾರದು ಅಲ್ಲವಾ. ಅದಕ್ಕೇ ಮುಖ್ಯಮಂತ್ರಿಯಾದೋರು ಏನು ಮಾಡಿದರ... 'ಕಾರಿಲ್ಲ ಅಂತ ಜನಸೇವೆ ತಪ್ಪಿಸಬಾರದು. ಪ್ರತಿಯೊ... ಶಾಸಕರಿಗೂ ಇಪ್ಪತ್ತು ಲಕ್ಷ ರೂಪಾಯಿ ಸರ್ಕಾರದಿ... ಮಂಜೂರು ಮಾಡ್ತೀನಿ. ಕಾರ ತಗಳ್ಳಿ, ಯಾವುದೇ ಕಾರಣ... ಜನಸೇವೆ ನಿಲ್ಲಿಸಬೇಡಿ' ಅಂದರಂತೆ! ಅದೇನು ಭಾ... ಹಣ ಅಲ್ಲಬಿಡಿ. ಅಮ್ಮಮ್ಮ ಅಂದರೆ ಒಟ್ಟು ಎಂಬ... ಕೋಟಿ ಅಷ್ಟೇಯ!


ಅರೆ ದುಡ್ಡು ಕೊಡ್ತೀನಿ ಅಂದರೆ ಅದಕ್ಕೇನು ಲೆಕ್ಕ... ಇಲ್ಲವಾ? ಯಾವ ಲೆಕ್ಕದಲ್ಲಿ ಕೊಡ್ತಾರಂತೆ? ಅಂದ್ರೆ ಅದಕ... ಹಾದಿ ಹುಡುಕಿದ್ದಾರಂತೆ. ಶಾಸಕರ ಪ್ರಾದೇಶಿಕ ಅಭಿವ... ನಿಧಿ ಅಂತ ಅದಲ್ಲ ಅದರಲ್ಲಿ ಬಳಸಿಕೊಳ್ಳಿ ಅಂದ್ರ... ಕ್ಷೇತ್ರದ ಅಭಿವೃದ್ಧಿ ಮಾಡಲಿ ಎಂದಲ್ಲವೆ ಅದನ್ನು ನೀಡುವು... ಎಂದರೆ ಅವರು ಇದ ಕೊಡುತ್ತಿರುವುದೂ ಅದಕ್ಕೇ ಅಂ... ಐಷಾರಾಮಿ ಕಾರಿನಲ್ಲಿ ಶಾಸಕ ಓಡಾಡಿದರೆ ಕ್ಷೇತ್ರದ ಅಭಿವ... ಹೇಗಾಗುತ್ತೆ ಅಂದರೆ ಅರೆ ಕ್ಷೇತ್ರ ನೋಡಬಾರದೇನ... ಅದನೋಡದೆ ಅಭಿವೃದ್ಧಿ ಹೇಗ್ರಿ ಪಡಿಸ್ತೀರಾ? ಅ... ನೋಡಾಕೆ ಕಾರು ಬೇಡವೇನ್ರಿ? ಅಂತಾರಂತೆ ಯು... ಮುಖ್ಯಮಂತ್ರಿಗಳು! ಅದೂಅಲ್ಲದೆ ಇದರಿಂದ ಕ್ಷೇತ್... ಅಭಿವೃದ್ಧಿಗೆ ಹಣದ ಕೊರತೆ ಬೀಳುವುದಿಲ್ಲವಂ... ಇದುವರೆವಿಗೆ ಅದಕ್ಕೆ ಅಂತ ಒಂದು ಕೋಟಿ ಇಪ್ಪತ್ತೈ... ಲಕ್ಷ ನೀಡುತ್ತಿದ್ದರಂತೆ. ಈಗ ಅದು ಒಂದೂವರೆ ಕೋಟಿ... ಏರಿಸಿದ್ದಾರಂತೆ. ಅಂದಮೇಲೆ ಇನ್ನೂ ಐದು ಲಕ್ಷ ಹೆಚ್ಚಿಗೆ... ಸಿಗುತ್ತಲ್ಲಾ ಅಂತಾರಂತೆ!

ಕೋಟ್ಯಾಧೀಶ ಶಾಸಕರಿಗೆ ತೆರಿಗೆ ಹೊರೆಬೀಳುತ್ತ... ಅನ್ನುವುದಕ್ಕೂ ಒಂದು ದಾರಿ ಹುಡುಕಿದ್ದಾರಂತೆ. ಕಾ... ಸರ್ಕಾರದ ಹೆಸರಿನಲ್ಲೇ ಇರುತ್ತಂತೆ. ಬಳಸುವವರು ಮಾ... ಶಾಸಕರಂತೆ!

'ಜನಸೇವೆ'ಯನ್ನು ಯಶಸ್ವಿಯಾಗಿ ಮಾಡಲಿ ಎಂ... ಇಂತಹ ಅದ್ಭುತ ಯೋಜನೆಯನ್ನು ಜಾರಿಗೆ ತಂದರೆ ಅವ... ತಾರೀಫ್ ಮಾಡಬಾರದಾ. ಉಹುಂ. ಬದಲಿಗೆ ಉಗೀ... ಬಿದ್ದವಂತೆ. ಆ ಬೈಗುಳ ಕೇಳಲಾರದೆ ಯುವ ಮುಖ್ಯಮಂ... ತನ್ನ ಅದ್ಭುತ ಯೋಜನೆಯನ್ನು ಹಿಂಪಡೆಯಬೇಕಾಯಿತಂ... ಪಾಪ ಯುವ ಮನಸ್ಸು ಅದೆಷ್ಟು ನೊಂದುಕೊಳ್ತೋ...

ಇದನ್ನೆಲ್ಲ ಅರ್ಥಮಾಡಿಕೊಳ್ಳಲಾರದ ಕೆಲವರು 'ಕಾರು... ವ್ಯವಹಾರದಲ್ಲಿ ಎಷ್ಟು ಕಮಿಷನ್ ಸಿಗುತ್ತಿತ್ತೋ ಏನೋ... ಅದು ನಷ್ಟ ಆಯಿತಲ್ಲಾ ಅಂತ ದಲ್ಲಾಳಿಗಳಿಗೆ ಬ... ಬೇಸರವಾಗಿರಬಹುದು' ಅಂತ ಅರ್ಥಗರ್ಭಿತವಾಗಿ ಕ... ಮಿಟುಕಿಸಿದರೆ ಇನ್ನು ಕೆಲವರು 'ಶಾಸಕರನ್ನ ಓಲೈಸ... ಯಡ್ಯೂರಪ್ಪನವರು ಸೈಟ್ ದಾನ ಮಾಡಿದ್ದರು. ಇವ... ಕಾರ್ ದಾನ ಮಾಡಲು ಮುಂದಾಗಿದ್ದರು. ಇನ್ನೂ ಯಾ... ಯಾವ ಮುಖ್ಯಮಂತ್ರಿ ಏನೇನು ದಾನ ಮಾಡುತ್ತಾನೆಯೊ... ಅಂತ ಜೋಲುಮುಖ ಹಾಕ್ತಾರಲ್ಲಾ.....

ಜಗದೀಶ್ ಶೆಟ್ಟರ್ ಅವರಿಗೊಂದು ಬಹಿರಂಗಪತ್ರ



ಉತ್ತರ ಕರ್ನಾಟಕ ಭಾಗದ ಪ್ರಭಾವಿ ಕೋಮಿನ ನಾಯಕರೆಂದು ಬಿಂಬಿಸಿಕೊಂಡು, ಪ್ರಾದೇಶಿಕ ಪ್ರಾತಿನಿಧ್ಯದ ಹೆಸರಿನಲ್ಲಿ ಅಖಂಡ ಕರ್ನಾಟಕದ ಮುಖ್ಯಮಂತ್ರಿ ಹುದ್ದೆಯ ಫಲಾನುಭವಿಯಾಗಲು ಸಜ್ಜಾಗಿರುವ ಮಾನ್ಯ ಜಗದೀಶ ಶೆಟ್ಟರ್ ಅವರಿಗೆ ನಮಸ್ಕಾರಗಳು.

ತಾವು ಮುಖ್ಯಮಂತ್ರಿಯ ಸ್ಥಾನಕ್ಕೆ ಯೋಗ್ಯ ವ್ಯಕ್ತಿಯೇ ಹೌದು. ಆದರೆ ನೀವು ಮುಖ್ಯಮಂತ್ರಿಯಾಗುತ್ತಿರುವ ವಿಧಾನ ಮಾತ್ರ ಈ ರಾಜ್ಯದ ಜನತೆ ತಮ್ಮನ್ನು ಕ್ಷಮಿಸಲಾರರೇನೋ ಎಂಬ ಅನುಮಾನ ಕಾಡದೇ ಇರದು. ರಾಜ್ಯ ರಾಜಕೀಯ ಇತಿಹಾಸದಲ್ಲಿಯೇ ನಿಮ್ಮಂಥ ಸಾಂದರ್ಭಿಕ ಬಲಿಪಶು ನಾಯಕರನ್ನು ಕಾಣಲಿಲ್ಲ ಮತ್ತು ಮುಂದೆಯೂ ಕಾಣುವುದಿಲ್ಲವೇನೋ. ತಾವು ಇಂತಹ ಅಪ್ರಸ್ತುತ ಸಂದರ್ಭದಲ್ಲಿ ಈ ರಾಜ್ಯಕ್ಕೆ ಕಳಂಕ ತಂದಿರುವ ಭ್ರಷ್ಟಕೂಟದ ಜೊತೆಗೂಡಿ ಅವರು ಆಡುವ ಆಟಕ್ಕೆ, ಮಾಡುವ ಮಾಟಕ್ಕೆ, ನೋಡುವ ನೋಟಕ್ಕೆ, ಬಲಿಪಶು ಮುಖ್ಯಮಂತ್ರಿಯಾಗುತ್ತಿದ್ದಿರ.


ತಮ್ಮ ಪಕ್ಷದಲ್ಲಿ ಈಗ ಎರಡು ಗುಂಪುಗಳಿವೆ. ಒಂದು ಸಜ್ಜನರ ಗುಂಪು. ಇನ್ನೊಂದು ಜನತೆ ಕೊಟ್ಟ ಅಧಿಕಾರವನ್ನು ದುರುಪಯೋಗಮಾಡಿಕೊಂಡು ಭ್ರಷ್ಟಾಚಾರ, ಸ್ವಜನಪಕ್ಷಪಾತ ಮಾಡಿ, ಧರ್ಮವನ್ನು ರಾಜಕೀಯ ಕರಣಗೊಳಿಸಿ, ಮಾಡಬಾರದ್ದನ್ನೆಲ್ಲ ಮಾಡಿ ರಾಜ್ಯದ ಮಾನ ಹರಾಜು ಮಾಡಿದ ದುರ್ಜನರ ಗುಂಪು. ಇವೆರಡು ಗುಂಪುಗಳ ಮಧ್ಯೆ ನಿಮ್ಮಂಥವರು ಹೇಗೆ ರಾಜ್ಯಭಾರ ಮಾಡಿ ಕರುನಾಡನ್ನಾಳುವ ಜಗದೀಶನಾಗುತ್ತೀರೆಂಬುದೇ ಈಗಿರುವ ಆತಂಕ.

ತಾವು ಮುಖ್ಯಮಂತ್ರಿ ಹುದ್ದೆ ಪಡೆದಿರುವುದು ರಾಜಮಾರ್ಗದಿಂದಲ್ಲ ಅದು ವಾಮಮಾರ್ಗದಿಂದ ಎಂಬ ಸತ್ಯ ನಿಮ್ಮ ಆತ್ಮಸಾಕ್ಷಿಗೂ ಗೊತ್ತಿರುವ ಸಂಗತಿಯೇ ಸರಿ. ಯಾವುದೇ ಕಳಂಕವಿಲ್ಲದೆ, ವಿವಾದರಹಿತ ಮುಖ್ಯಮಂತ್ರಿಯಾಗಿ ಉತ್ತಮ ಆಡಳಿತ ನೀಡಿದ ಸದಾನಂದಗೌಡರಿಗೆ ನೀವೆಲ್ಲರೂ ಮಾಡಿದ ದ್ರೋಹ ಈ ರಾಜ್ಯದ ಜನತೆ ಅಷ್ಟು ಸುಲಭವಾಗಿ ಮರೆಯುವುದಿಲ್ಲವೆಂಬ ಅರಿವು ನಿಮಗೆ ಇರಲಿ. ಯಡಿಯೂರಪ್ಪನಂಥ ಭ್ರಷ್ಟ ಹಾಗು ದುಷ್ಟಕೂಟದ ನಾಯಕನ ಋಣದಲ್ಲಿ ಮುಖ್ಯಮಂತ್ರಿ ಯಾಗುವ ಅವಶ್ಯಕತೆ ನಿಮಗಿತ್ತೇ? ಯಡಿಯೂರಪ್ಪನವರು ಮುಖ್ಯಮಂತ್ರಿ ಯಾದಾಗ ನಿಮ್ಮನ್ನು ಸಭಾಪತಿಯ ಸ್ಥಾನದಲ್ಲಿ ಕೂರುವಂತೆ ಮಾಡಿದ್ದರ ಹುನ್ನಾರ ಮರೆತಿರೆ? ಸದಾನಂದ ಗೌಡರು ಮುಖ್ಯಮಂತ್ರಿ ಯಾಗುವ ಸಂದರ್ಭದಲ್ಲಿ ನಿಮಗೆ ಅವರು ಮಾಡಿದ ದ್ರೋಹವನ್ನು ಅಷ್ಟು ಬೇಗ ಮರೆತಿರೆ? ಅನೇಕ ಸಲ ನಿಮ್ಮ ಸ್ವಾಭಿಮಾನಕ್ಕೆ ಧಕ್ಕೆ ತಂದಿರುವ ದುರಹಂಕಾರಿ ಯಡಿಯೂರಪ್ಪನ ಬೆಂಬಲದಿಂದ ಅಧಿಕಾರ ಹಿಡಿಯುವುದು ಎಷ್ಟು ಸರಿ? ಇದರಿಂದ ನಿಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾಗುವದಿಲ್ಲವೇ? ಅಧಿಕಾರದ ಮುಂದೆ ಸ್ವಾಭಿಮಾನಕ್ಕೆ ಹಾಗೂ ನೈತಿಕತೆಗೆ ಬೆಲೆಯೇ ಇಲ್ಲವೇ?

ಕುಮಾರಸ್ವಾಮಿಯವರು ಯಡಿಯೂರಪ್ಪ ನವರಿಗೆ ದ್ರೋಹ ಮಾಡಿದರೆಂಬ ಕಾರಣ ಮುಂದಿಟ್ಟುಕೊಂಡು ಬಿಜೆಪಿಗೆ ಅಧಿಕಾರ ಕೊಟ್ಟರೆ ನಿಮ್ಮ ಪಕ್ಷದವರು ಮಾಡಬಾರದ್ದನ್ನೆಲ್ಲ ಮಾಡಿ, ಪಕ್ಷದ ಹಾಗೂ ರಾಜ್ಯದ ಮಾನ ಮರ್ಯಾದೆಯನ್ನು ಮೂರು ಕಾಸಿಗೆ ಹರಾಜು ಮಾಡಿ ದೇಶದ ಜನತೆ ಮುಂದೆ ರಾಜ್ಯ ತಲೆತಗ್ಗಿಸುವಂತೆ ಮಾಡಿದ ನಿಮ್ಮಗಳ ಸಾಧನೆಗೆ ಧನ್ಯವಾದಗಳು!

- ಟಿ.ಶಶಿಧರ, ರಸ್ತಾಪುರ, ಯಾದಗಿರಿ ಜಿಲ್ಲೆ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.




ಜಾತಿ ವ್ಯವಸ್ಥೆಯೇ ರೌಡಿಸಂ


ರೌಡಿಸಂ ಮತ್ತು ಪಿಕ್ ಪಾಕೆಟ್ ಕೃತ್ಯಗಳು ನಮ... ದೇಶಕ್ಕೆ ಬ್ರಿಟಿಷರಿಂದ ಬಂದ ಬಳುವಳಿಯಾಗಿವೆ ಮತ... ನಮ್ಮಲ್ಲಿ ಜಾತಿವ್ಯವಸ್ಥೆಯನ್ನು ಗಟ್ಟಿಗೊಳಿಸಿದ್ದು ಬ್ರಿಟಿಷರ... ಎಂಬುದಾಗಿ ಹಂಪಿ ವಿಶ್ವವಿದ್ಯಾನಿಲಯದ ಉಪನ್ಯಾಸ... ಡಾ. ಮಾಧವ ಪೆರಾಜೆಯವರು ಕರ್ನಾಟಕ ದಲಿತ ಸಂಘರ್ಷ... ಸಮಿತಿ(ಭೀಮವಾದ)ಯ ವಿಚಾರ ಸಂಕೀರ್ಣ ಒಂದರ... ಪ್ರತಿಪಾದಿಸಿದರು ಎಂಬುದಾಗಿ ವರದಿಯಾಗಿದೆ. ರಾ... ಕವಿ ಕುವೆಂಪುರವರು ಬ್ರಿಟಿಷರು ಭಾರತಕ್ಕೆ ಬಾರದ... ಇದ್ದಿದ್ದರೆ ತಾನು ಹಾರುವರ ಮೃಗಾಲಯದಲ್ಲಿ ಸೆಗ... ಹೆಕ್ಕುವ ಕೆಲಸವನ್ನೇ ಮಾಡಿಕೊಂಡಿರ ಬೇಕಾಗಿರುತ್ತಿತ್... ಎಂದಿರುವರು. ಚಾತುರ್ವರ್ಣೀಯ ಜಾತ್ಯಾಧಾರಿತ ಬಹ... ತಾರತಮ್ಯವನ್ನೊಳಗೊಂಡಿರುವ ನಮ್ಮ ಸಮಾಜದ... ಬಹುಸಂಖ್ಯಾತ ಜನರಿಗೆ ದೇವರಲ್ಲಿ ಪ್ರಾರ್ಥಿಸುವುದ... ಸಹಿತವಾಗಿ ವಿದ್ಯೆ, ಧನಕನಕಗಳನ್... ಗಳಿಸುವುದನ್ನೂ ನಿಷೇಧಿಸಿದ ಅಮಾನವೀಯ... ಅನಿಷ್ಟ ಮತ್ತು ಕ್ರೂರ ಪದ್ಧತಿಗಳನ... ಹೋಗಲಾಡಿಸಲು ಬ್ರಿಟಿಷರ ಆಗಮ... ಮತ್ತು ಆಡಳಿತ ಬಹ... ಸಹಾಯಕವಾಗಿರುವುದನ್ನು ಮಾನ... ಪ್ರೇಮಿಗಳು ಯಾರೂ ಅಲ್ಲಗಳೆಯಲಾರರು

ಸೂರಪ್ಪ ಬಾಬುವಿನ ಅವಾಂತರ

ಕನ್ನಡ ಚಿತ್ರರಂಗದಲ್ಲಿ ದಿನಕ್ಕೊಂದು ವಿವಾದ ತಲೆಯೆತ್ತು ...ವುದು ನಿಜಕ್ಕೂ ಆಶ್ಚರ್ಯ. ಮೊನ್ನೆ ಮೊನ್ನೆ ಟಿ.ವಿ.ಗಳಲ್ಲಿ ...ರಪ್ಪಬಾಬು ಅವಾಂತರವನ್ನು ನೀವು ದಿನವಿಡೀ ...ೋಡಿರಬಹುದು.



ಈ ವಿವಾದದ ಒನ್‌ಲೈನ್ ಸ್ಟೋರಿ ...ಗಿದೆ. ಅದೇನೆಂದರೆ, ಮೂರು ವರ್ಷ ... ಹಿಂದೆ ಮೈಸೂರಿನ ಹೋಟೆ ...ಂದರಲ್ಲಿ ತನ್ನ ಗೆಳೆಯರೊಂದಿಗೆ ...ಂಡುಹಾಕುತ್ತ ಸೂರಪ್ಪಬಾಬು ...ಳಿತಿದ್ದಾಗ ದಿವಂಗತ ತೂಗುದೀಪ ...ೀನಿವಾಸ್ ಅವರನ್ನು ಕುರಿತು 'ಸಂಸ್ಕೃತ ...ಷೆ'ಯಲ್ಲಿ ಮತ್ತು ಏಕವಚನದಲ್ಲಿ ...ಾತನಾಡಿದ್ದರಂತೆ. ಅದನ್ನು ಆತನ ...ೆಯರು ರೆಕಾರ್ಡ್ ಮಾಡಿದ್ದರು. ...ೂರು ವರ್ಷಗಳ ನಂತರ ಮೊನ್ನೆ ...ಾವಿಕಿ ಇದು 'ಯೂ ಟ್ಯೂಬ್'ನಲ್ಲಿ ...ಣಿಸಿಕೊಂಡಿತು. ಅಲ್ಲಿಂದಾಚೆಗೆ ಟಿ.ವಿ. ...ನೆಲ್‌ಗಳಲ್ಲೂ ಪ್ರತ್ಯಕ್ಷವಾಯಿತು. ...ಮರೆ ಟಿ.ವಿ. ಚಾನೆಲ್‌ನವರು ಅದಕ್ಕೆ ಉಪ್ಪು-ಖಾರ-ಮಸಾಲೆ ...ರಿಸಿ ಇನ್ನಷ್ಟು ರಂಜನೀಯವಾಗಿ ಬಿತ್ತರಿಸಿದರು. ಸಂಜೆ ...ೊತ್ತಿಗೆ ಇದರ ಬಗ್ಗೆ ಪ್ಯಾನಲ್ ಡಿಸ್‌ಕಶನ್‌ಗಳು ಕೂಡ ...ಿ.ವಿ.ಗಳಲ್ಲಿ ಆರಂಭವಾಯಿತು.



ಇದಕ್ಕಿಂತ ಒಂದೆರಡು ದಿನ ಮೊದಲು ...ದೇ ಸೂರಪ್ಪಬಾಬು ಶಿವರಾಜ್‌ಕುಮಾರ್ ...ರುದ್ಧ ಚಲನಚಿತ್ರ ವಾಣಿಜ್ಯ ಮಂಡಳಿಗೆ ...ಂದು ದೂರು ನೀಡಿದ್ದರು. "ನನ್ನ ಚಿತ್ರ ...ೊಂದರಲ್ಲಿ ನಟಿಸುವುದಕ್ಕೆ ಶಿವರಾಜ್‌ಕುಮಾರ್ ...ವರು 20 ಲಕ್ಷ ರೂಪಾಯಿಗಳನ್ನು ...ುಂಗಡವಾಗಿ ಪಡೆದಿದ್ದರು. ಆದರೆ ಈಗ ...ವರು ನನ್ನ ಯಾವುದೇ ಚಿತ್ರವನ್ನೂ ...ಾಡುತ್ತಿಲ್ಲ, ಜೊತೆಗೆ ನನ್ನ ಮುಂಗಡ ಹಣವನ್ನೂ ವಾಪಸ್ ...ಡುತ್ತಿಲ್ಲ, ದಯವಿಟ್ಟು ನನ್ನ ಹಣವನ್ನು ನನಗೆ ವಾಪಸ್ ...ಡಿಸಿ" ಎಂಬುದು ಇವರ ದೂರಿನ ತಾತ್ಪರ್ಯವಾಗಿತ್ತು.

ಈ ಎರಡು ಘಟನೆಗಳು ಬೇರೆ ಬೇರೆಯದ್ದೇ ಆಗಿದ್ದರೂ ...ವರಾಜ್‌ಕುಮಾರ್ ಅವರ ವಿರುದ್ಧ ದೂರು ನೀಡಿದ ...ರುದಿನವೇ ಈ ಹಳೆಯ ದೃಶ್ಯ 'ಯೂ ಟ್ಯೂಬ್'ನಲ್ಲಿ ... ಪ್ರತ್ಯಕ್ಷವಾಯಿತು ಎಂಬುದು ಸೂರಪ್ಪಬಾಬುರವರ ...ದ.

ಈಗ ಒಂದು ಸಮಸ್ಯೆಗೆ ಪರಿಹಾರ ಸಿಕ್ಕಿದೆ. ...ದೇನೆಂದರೆ, ದಿವಂಗತ ತೂಗುದೀಪ ಶ್ರೀನಿವಾಸ್ ...ವರ ಪತ್ನಿ ಮೀನಾ ತೂಗುದೀಪ್ ಮತ್ತು ಪುತ್ರ ...ನಕರ್ ತೂಗುದೀಪ್ ಹಾಗೂ ದರ್ಶನ್ ...ಭಿಮಾನಿಗಳ ಸಮ್ಮುಖದಲ್ಲಿ ಸೂರಪ್ಪ ಬಾಬು ...ನು ಅವಾಚ್ಯವಾಗಿ ತೂಗುದೀಪ್ ಅವರ ಬಗ್ಗೆ ...ಾತನಾಡಿದ್ದಕ್ಕೆ ಕ್ಷಮೆ ಯಾಚಿಸಿದ್ದಾರೆ. ಅಲ್ಲಿಗೆ ಆ ...ರಣ ಬಹುತೇಕ ಮುಕ್ತಾಯವಾದಂತೆ.

ಆದರೆ "ಈ ದೃಶ್ಯವನ್ನು ಯೂ ಟ್ಯೂಬ್‌ಗೆ ...ಾರು ಅಪ್‌ಡೇಟ್ ಮಾಡಿದರು? ಅವರ ಉದ್ದೇಶವೇನು? ...ವರಿಗೆ ಈ ದೃಶ್ಯವನ್ನು ಯಾರು ನೀಡಿದರು? ಆ ದೃಶ್ಯಗಳಲ್ಲಿ ...ವೇ ಕೆಲವು ಭಾಗಗಳನ್ನು ಮಾತ್ರ ಅವರು ಯಾಕೆ ...ದರ್ಶಿಸಿದರು? ಎಂಬಿತ್ಯಾದಿ ಬಗ್ಗೆ ನಾನು ಸೈಬರ್ ಕ್ರೈಂ ಬ್ರ್ಯಾಂಚ್‌ಗೆ ದೂರು ನೀಡಿದ್ದೇನೆ. ಆ ವರದಿ ಬಂದ ನಂತರ ಉಳಿದ ವಿಷಯಗಳನ್ನು ಬಹಿರಂಗಪಡಿಸುತ್ತೇನೆ" ಎಂದು ಸೂರಪ್ಪ ಬಾಬು ಬಾಂಬ್ ಹಾಕಿದ್ದಾರೆ.

ಅದೇನೇ ಇರಲಿ, ಕನ್ನಡ ಚಿತ್ರರಂಗ ಉದ್ಧಾರವಾಗಿಲ್ಲ ಅಥವಾ ಅಭಿವೃದ್ಧಿಯಾಗುತ್ತಿಲ್ಲ ಎಂದು ಯಾವಾಗಲೂ ಆರೋಪ ಹೊರಿಸುವವರು ಈ ಘಟನೆಯಿಂದ ಸ್ವಲ್ಪವಾದರೂ ಸಮಾಧಾನಪಟ್ಟುಕೊಳ್ಳಬಹುದು. ಅದೇನೆಂದರೆ, ಇದೇ ಮೊದಲ ಬಾರಿಗೆ ಕನ್ನಡ ಚಿತ್ರರಂಗದಲ್ಲಿ ಎರಡು ಬಣಗಳ ನಡುವಿನ ಸಮರ ಸೈಬರ್ ಟೆಕ್ನಾಲಜಿ ಮುಖಾಂತರ ನಡೆಯುತ್ತಿರುವುದು ನಾವೆಷ್ಟು ಮುಂದಿದ್ದೇವೆ ಎಂಬುದನ್ನು ತೋರಿಸುತ್ತದೆ ಅಲ್ಲವೇ?!

ಮೇಲ್ನೋಟಕ್ಕೆ ನಮಗೆ ಇದು ಎರಡು ವಿಭಿನ್ನ ಪ್ರಕರಣಗಳು ಎಂಬಂತೆ ಕಾಣಿಸಿಕೊಂಡರೂ, ಇವುಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದರೆ ಅನೇಕ ವಿಷಯಗಳು ಹೊರಬೀಳುತ್ತವೆ. ಮೊದಲನೆಯದಾಗಿ, ಡಬ್ಬಿಂಗ್ ಬಗ್ಗೆ ಖಾರವಾಗಿ ಮಾತನಾಡಿದ ಶಿವರಾಜ್‌ಕುಮಾರ್ ಅವರನ್ನು ಹೇಗಾದರೂ ಮಾಡಿ ಬಗ್ಗುಬಡಿಯಲು ಉದ್ಯಮದಲ್ಲಿರುವ ಡಬ್ಬಿಂಗ್ ಪರ ಶಕ್ತಿಗಳು ಕೆಲಸ ಮಾಡುತ್ತಿರುವುದು ಈ ಘಟನೆಯಿಂದ ಸಾಬೀತಾಗಿದೆ. ಎರಡನೆಯದಾಗಿ, ಸದ್ಯಕ್ಕೆ ಕನ್ನಡ ಚಿತ್ರರಂಗದ ಬಾಕ್ಸ್ ಆಫೀಸ್ ಹೀರೋ ಪುನೀತ್ ರಾಜ್‌ಕುಮಾರ್ ಅವರ ಕಾಲ್‌ಶೀಟನ್ನು ಪಡೆಯಲು ಅನೇಕ ನಿರ್ಮಾಪಕರು ಭಗೀರಥ ಪ್ರಯತ್ನವನ್ನು ಮಾಡುತ್ತಲೇ ಇದ್ದರೂ ಅದರಲ್ಲಿ ಅವರು ವಿಫಲರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಶಿವರಾಜ್‌ಕುಮಾರ್‌ಗೆ ಸಂಬಂಧಪಟ್ಟಂತೆ ಈ ಒಂದು ವಿವಾದವನ್ನು ಹುಟ್ಟುಹಾಕಿ, ಆನಂತರ ಅದನ್ನು ಕೆಲವರು ಪರಿಹರಿಸುವುದು, ಆ ಮೂಲಕ ರಾಜ್‌ಕುಮಾರ್ ಸಂಸ್ಥೆಗೆ ತೀರ ಹತ್ತಿರವಾಗುವುದು ಕೆಲವು ನಿರ್ಮಾಪಕರ ಗೇಮ್‌ಪ್ಲಾನ್ ಆಗಿತ್ತು.




ಏಕೆಂದರೆ 25 ವರ್ಷಗಳನ್ನು ಚಿತ್ರರಂಗದಲ್ಲಿ ಪೂರೈಸಿರುವ ಶಿವರಾಜ್‌ಕುಮಾರ್ ವಿರುದ್ಧ ಈವರೆವಿಗೂ ಯಾರೂ ಒಂದೇ ಒಂದು ದೂರನ್ನೂ ಸಲ್ಲಿಸಿದ್ದೇ ಇಲ್ಲ, ಅಷ್ಟೇ ಯಾಕೆ? ಶಿವರಾಜ್‌ಕುಮಾರ್ ನಿರ್ಮಾಪಕರ ಡಾರ್ಲಿಂಗ್ ಎಂದೇ ಉದ್ಯಮದಲ್ಲಿ ಎಲ್ಲರಿಂದ ಕರೆಯಲ್ಪಟ್ಟವರು. ಇಂತಹ ಸಂದರ್ಭದಲ್ಲಿ ನಿರ್ಮಾಪಕರ ಸಂಘದ ಪ್ರಧಾನ ಕಾರ್ಯದರ್ಶಿಯಾದ ಸೂರಪ್ಪಬಾಬು ಏಕಾಏಕಿಯಾಗಿ ಛೇಂಬರ್‌ಗೆ ಶಿವಣ್ಣನ ವಿರುದ್ಧ ದೂರು ಕೊಟ್ಟಿರುವುದು ಎಲ್ಲರಲ್ಲೂ ಆಶ್ಚರ್ಯ ಹುಟ್ಟಿಸಿತ್ತು.


ಸೂರಪ್ಪಬಾಬುಗೆ ನಿರ್ಮಾಪಕರ ಸಂಘದ ಅಧ್ಯಕ್ಷ ಮುನಿರತ್ನಂ ನಾಯ್ಡುರವರ ಬೆಂಬಲವೂ ಇತ್ತೆಂಬುದು ಬಹುತೇಕ ಎಲ್ಲರಿಗೂ ಗೊತ್ತಿರುವ ವಿಷಯ. ಹಾಗೆಯೇ ಮುನಿಯವರ ಹತ್ತಿರದ ಸಂಬಂಧಿ ಹಾಗೂ ಸೂರಪ್ಪಬಾಬುರವರ ಪರಮಾಪ್ತ ಸ್ನೇಹಿತ ರಾಕ್‌ಲೈನ್ ವೆಂಕಟೇಶ್ ಕೂಡ ಪರೋಕ್ಷವಾಗಿ ಬಾಬು ಬೆನ್-ಬಲಕ್ಕೆ ಇದ್ದರು ಎಂಬುದು ಕೂಡ ಉದ್ಯಮದಲ್ಲಿ ಚಾಲ್ತಿಯಲ್ಲಿರುವ ಸುದ್ದಿ. ಅಂದರೆ, ಕೋಟಿ ಕೋಟಿ ಸಂಭಾವನೆಯನ್ನು ಪಡೆಯುವ ಕಲಾವಿದರನ್ನು ಹೇಗಾದರೂ ಮಾಡಿ ಹದ್ದುಬಸ್ತಿನಲ್ಲಿಡಬೇಕೆಂಬುದು ನಿರ್ಮಾಪಕರ ಬಹುದಿನದ ಒಂದು ಆಸೆ ಮತ್ತು ಬೇಡಿಕೆಯಾಗಿತ್ತು. ಬಹುಶಃ ಈ ಸಂದರ್ಭದಲ್ಲಿ ಶಿವಣ್ಣ ಅವರನ್ನೆ ನಿರ್ಮಾಪಕರ ಸಂಘದ ಪ್ರಧಾನ ಕಾರ್ಯದರ್ಶಿ ಮೊದಲಿಗೆ ಬಲಿ ತೆಗೆದುಕೊಂಡರೆ ಆ ನಂತರ ಹೊಸ ನಾಯಕ-ನಾಯಕಿಯರನ್ನೆಲ್ಲ ಸುಲಭವಾಗಿ ಹದ್ದುಬಸ್ತಿನಲ್ಲಿಡಬಹುದು ಎಂಬುದೇ ಹಲವರ ತಂತ್ರವಾಗಿತ್ತು. ಆದರೆ ಇಂತಹ ತಂತ್ರ ಮತ್ತು ಪಿತೂರಿಗಳೆಲ್ಲವೂ ಸೂರಪ್ಪಬಾಬು ಅವರ ಮದ್ಯಪಾನದ ಎಪಿಸೋಡ್‌ನಿಂದಾಗಿ ಸಂಪೂರ್ಣವಾಗಿ ವಿಫಲವಾಗಿದೆ.

ಸೂರಪ್ಪಬಾಬು ಬಗ್ಗೆ ಹೇಳುವುದಾದರೆ ನಾಲ್ಕೂವರೆ ಅಡಿ ಎತ್ತರದ ಈ ಮನುಷ್ಯ ತುಂಬಾ ಒಳ್ಳೆಯವರು. ಆದರೆ ಅವರ ಬಾಯಿ ತುಂಬಾ ಕೆಟ್ಟದು. ಸುಮಾರು ಎರಡು ದಶಕಗಳಿಂದಲೂ ಚಿತ್ರರಂಗದಲ್ಲಿ ನಿರ್ಮಾಪಕರಾಗಿ ಅನೇಕ ಒಳ್ಳೊಳ್ಳೆಯ ಸಿನಿಮಾಗಳನ್ನು ನಿರ್ಮಿಸಿದ್ದಾರೆ. ಇತ್ತೀಚೆಗಷ್ಟೇ ನಿರ್ಮಾಪಕರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿದ್ದಾರೆ. ಇವರ ಒಂದೇ ಒಂದು ದೌರ್ಬಲ್ಯ ಎಂದರೆ ಸಿಕ್ಕಾಪಟ್ಟೆ ಮಾತು. ಅವರು ಗುಂಡು ಹಾಕಿದಾಗಲಂತೂ ಅವರ ಮಾತು ಕೇಳುವುದೇ ಒಂದು ತಮಾಷೆ.

ಆರಂಭದಲ್ಲಿ ವಿಷ್ಣುವರ್ಧನ್ ಅವರ ಜೊತೆಗೆ ಗುರುತಿಸಿಕೊಂಡಿದ್ದ ಸೂರಪ್ಪಬಾಬು "ನಾನು ವಿಷ್ಣುವರ್ಧನ್ ಚಿತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ಚಿತ್ರ ಮಾಡುವುದಿಲ್ಲ" ಎಂದು ಘೋಷಿಸಿ ವಿವಾದ ಸೃಷ್ಟಿಸಿದ್ದರು. ವಿಷ್ಣು ಕ್ಯಾಂಪ್‌ನಿಂದ ಬಾಬು ಹೊರಬಿದ್ದನಂತರ ಅವರು ಹೋದದ್ದು ಸದಾಶಿವನಗರದ ವಜ್ರೇಶ್ವರಿ ಸಂಸ್ಥೆ ಕಡೆಗೆ. ಸೂರಪ್ಪಬಾಬು ಎಷ್ಟೇ ತಿಪ್ಪರಲಾಗ ಹಾಕಿದರೂ ವಜ್ರೇಶ್ವರಿ ಸಂಸ್ಥೆಯವರು ಅವರಿಗೆ ಎಂಟ್ರಿಯನ್ನೇ ಕೊಡುವುದಿಲ್ಲ ಎಂದು ಗಾಂಧಿನಗರದವರು ಭಾವಿಸಿದ್ದಾಗ ಶಿವರಾಜ್‌ಕುಮಾರ್ ಅವರಿಗೆ ತಮ್ಮ ಕಾಲ್‌ಶೀಟ್ ಕೊಟ್ಟರು. ಆನಂತರ ಪುನೀತ್ ರಾಜ್‌ಕುಮಾರ್ ನಾಯಕನಾಗಿ ನಟಿಸಿದ 'ಪೃಥ್ವಿ' ಚಿತ್ರವನ್ನೂ ನಿರ್ಮಿಸಿದ್ದರು. ತೀರ ಇತ್ತೀಚೆಗಷ್ಟೇ ಜೆ.ಪಿ.ನಗರದ ದಾದಾ ಸುದೀಪ್ ಜೊತೆ ಮಾತನಾಡಿ ವಿಷ್ಣುವರ್ಧನ್ ನಟಿಸಿರುವ 'ಕೋಟಿಗೊಬ್ಬ' ಚಿತ್ರದ ಭಾಗ-2 ನಿರ್ಮಿಸಲು ತಯಾರಿ ನಡೆಸಿದ್ದರು. ಉದ್ಯಮದಲ್ಲಿ ಹೀಗೆ ಎಲ್ಲಾ ಗುಂಪುಗಳಿಗೆ ಬೇಕಾಗುವ ವ್ಯಕ್ತಿಯಾಗಿ ಬೆಳೆಯುತ್ತಿದ್ದ ಸಂದರ್ಭದಲ್ಲೇ ಸೂರಪ್ಪಬಾಬು ಶಿವಣ್ಣನ ವಿರುದ್ಧ ಬಂಡಾಯವೆದ್ದು ತನ್ನ ವರ್ಚಸ್ಸಿಗೆ ತಾವೇ ಧಕ್ಕೆ ತಂದುಕೊಂಡಿದ್ದಾರೆ.









ಉದ್ಯಮದ ಮತ್ತೊಂದು ಮೂಲ ಹೇಳುವ ಪ್ರಕಾರ ಈಗ 'ಕೋಟಿಗೊಬ್ಬ' ಭಾಗ-2 ಚಿತ್ರ ಸೆಟ್ಟೇರುವ ಸಾಧ್ಯತೆ ಬಹಳ ಕಡಿಮೆ. ಏಕೆಂದರೆ ಸುದೀಪ್ ಮತ್ತು ದರ್ಶನ್ ಅತ್ಯಂತ ಆಪ್ತ ಸ್ನೇಹಿತರು. ಹೀಗಾಗಿ ದರ್ಶನ್ ತಂದೆಯ ಬಗ್ಗೆ ಕೆಟ್ಟದಾಗಿ ಮಾತನಾಡಿದ ಸೂರಪ್ಪಬಾಬುಗೆ ಸುದೀಪ್ ಕಾಲ್‌ಶೀಟ್ ಕೊಡದೇ ಇರುವ ಸಾಧ್ಯತೆಯೇ ಹೆಚ್ಚು. ಇದರರ್ಥ ಇತ್ತ ರಾಜ್ ಸಂಸ್ಥೆಯವರ ಕಾಲ್‌ಶೀಟೂ ಸಿಗಲ್ಲ, ಅತ್ತ ಇದೀಗ ರಾಷ್ಟ್ರಮಟ್ಟದಲ್ಲಿ ಮಿಂಚುತ್ತಿರುವ ಸುದೀಪ್ ಕಾಲ್‌ಶೀಟ್ ಕೈಜಾರುವ ಸಾಧ್ಯತೆ ಕಾಣಿಸುತ್ತಿದೆ.

ಆದರೆ ಒಂದು ಮಾತಂತೂ ನಿಜ. ಇತ್ತೀಚೆಗೆ ಡಾ. ರಾಜ್‌ಕುಮಾರ್ ಸಂಸ್ಥೆಯ ವಿರುದ್ಧ ಅನೇಕ ನಿರ್ಮಾಪಕ ಮತ್ತು ನಟ-ನಟಿಯರು ಆಗಿಂದಾಗ್ಗೆ ಸಣ್ಣ ರೀತಿಯಲ್ಲಿ ಬಂಡಾಯವೇಳುತ್ತಿದ್ದಾರೆ. ಇವೆಲ್ಲವನ್ನೂ ರಾಜ್ ಅವರ ಮಕ್ಕಳು ಒಗ್ಗಟ್ಟಿನಿಂದ ಎದುರಿಸುತ್ತಿದ್ದಾರೆ. ಅದೇ ಹೊತ್ತಿಗೆ ಸೂರಪ್ಪಬಾಬುವಿನ ಈ ಎಪಿಸೋಡ್ ಉದ್ಯಮದಲ್ಲಿ ಒಗ್ಗಟ್ಟಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಅಷ್ಟೇ ಅಲ್ಲ, ಈ ಎಪಿಸೋಡ್‌ನಿಂದ ಕನ್ನಡ ಚಿತ್ರರಂಗದಲ್ಲಿನ ಭಿನ್ನಮತ, ಮನಸ್ತಾಪ ಮತ್ತು ಅಸೂಯೆಗಳೆಲ್ಲ ಬಹಿರಂಗವಾದಂತಾಗಿದೆ. ಬಹುಶಃ ಮುಂಬರುವ ದಿನಗಳಲ್ಲಿ ಇಂತಹ ಇನ್ನೂ ಅನೇಕ ವಿಷಯಗಳು ಆಗಾಗ್ಗೆ ಟಿ.ವಿ.ಗಳಲ್ಲಿ ಕಾಣಿಸಿಕೊಂಡರೂ ಆಶ್ಚರ್ಯಪಡಬೇಕಾಗಿಲ್ಲ. ಏಕೆಂದರೆ ಇದು ಏನಿದ್ದರೂ ಜಸ್ಟ್ ಆರಂಭ ಅಷ್ಟೆ...

• ಶೆಣೈ

...ಸು ಮಾಡಿದ ಆಡಳಿತ ಮತ್ತು ಕಾನೂನುಗಳೆಲ್ಲವೂ ...ವರದೇ ಒಳಿತಿಗಾಗಿ ಮಾಡಲ್ಪಟ್ಟಿರಬಹುದಾದರೂ ...ಸಂಖ್ಯಾತ ನಮ್ಮ ಕೀಳ್ಜಾತಿಯ ಮಾನವರನ್ನು ...ಜಾತಿಯವರು, ಪ್ರಾಣಿಗಿಂತಲೂ ಕೀಳಾಗಿ ಪರಿಗಣಿಸುವ ... ಸಂಸ್ಕೃತಿಯನ್ನು ಬದಲಾಯಿಸುವುದರಲ್ಲಿ ಮತ್ತು ...ತ/ಶೂದ್ರವರ್ಗಕ್ಕೆ ವಿದ್ಯೆ ಗಳಿಸುವ ಅವಕಾಶ ...ರಕಿಸಿಕೊಡುವುದರಲ್ಲಿ ಅವರ ಪಾತ್ರ ಪ್ರಶಂಸನೀಯ.



ಎಲ್ಲ ಕ್ರಾಂತಿಗಳು ಜರುಗಿದ ಸಂದರ್ಭಗಳಲ್ಲೂ ಮೇಲ್ವರ್ಗದ ಆಳುವ ಜನ ಮತ್ತು ಅವರ ಹೊಗಳುಭಟ್ಟರು (ನಮ್ಮ ಹಾರುವರು) ಹೆಚ್ಚಿನ ಲಾಭವನ್ನು ಗಳಿಸಿರುವುದು ಸಾಮಾನ್ಯ. ಆದರೆ ಬ್ರಿಟಿಷರಿಂದಾದ ಸಾಮಾಜಿಕ ಕ್ರಾಂತಿಯಲ್ಲಿ ಅವರಿಂದಾಗಿ ದೊರಕಿದ ವಿದ್ಯೆಯೇ ದಲಿತರಿಗೆ ತಮ್ಮ ಶೋಷಣೆಯ ಮೂಲಗಳನ್ನು ಗುರುತಿಸಿ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಿ ಅವುಗಳಿಗಾಗಿ ಹೋರಾಡಲು ಸಹಾಯಕವಾದವು. ದಲಿತರಿಗೆ ಸಂಪತ್ತನ್ನು ಗಳಿಸಲು ಅವಕಾಶವಿಲ್ಲ, ಆದುದರಿಂದ ಬ್ರಾಹ್ಮಣರು ಅವರ ಸಂಪತ್ತನ್ನು ವಶಪಡಿಸಿಕೊಳ್ಳಬಹುದು ಎಂದು ನಮ್ಮ ಸಂಸ್ಕೃತಿಗಳು (ಮನು 8/417) ಹೇಳುತ್ತಿರುವ ಶಾಸ್ತ್ರವನ್ನು ಅನುಷ್ಠಾನಗೊಳ್ಳುತ್ತಿದ್ದುದು ರೌಡಿಸಂ ಅಲ್ಲ, ಅದೊಂದು ಹಕ್ಕಿನ ಪ್ರಕ್ರಿಯೆ! ನಮ್ಮ ದೇಶದಲ್ಲಿ ರೌಡಿಸಂ, ಪಿಕ್‌ಪಾಕೆಟ್ ಮತ್ತು ಜಾತಿ ವ್ಯವಸ್ಥೆಯನ್ನು ಬ್ರಿಟಿಷರು ಗಟ್ಟಿಗೊಳಿಸಿದರು ಎಂದು ಹೇಳಿರುವುದು ಅದೂ ದಲಿತ ಸಂಘರ್ಷ ಸಮಿತಿಯ ಸಭೆಯೊಂದರಲ್ಲಿ ವಿಪರ್ಯಾಸ. ಹಾಗಿರುವಾಗ ಯಾವ ಆಧಾರದಲ್ಲಿ ಅದನ್ನು ಹೇಳಿದರು ಎಂದು ಮಾನ್ಯ ಪೆರಾಜೆಯವರಿಂದ ತಿಳಿಯಲು ಅಪೇಕ್ಷಿಸುತ್ತೇನೆ.

- ಮೈಕಲ್ ದಿಸೋಜ, ಮಂಗಳೂರು

ಜನ ಬಿಜೆಪಿಗೆ ಪಾಠ ಕಲಿಸಬೇಕಿದೆ

'ಶೆಟ್ಟರ್-ಜಾಕ್‌ಪಾಟ್' ವರದಿ ನೋಡಿ ನೆನಪಾಯಿತು. ಇದೇ ಜಗದೀಶ್ ಶೆಟ್ಟರ್ ಸಚಿವನಾಗುವ ಸಾಧ್ಯತೆ ಇದ್ದಾಗ ಯಡಿಯೂರಪ್ಪ ಬಿಡಲಿಲ್ಲ, ಮುಖ್ಯಮಂತ್ರಿ ಆಗುವ ಅವಕಾಶ ಸಿಕ್ಕಾಗಲೂ ಯಡ್ಡಿ ಒಪ್ಪಲಿಲ್ಲ, ಇನ್ನೊಬ್ಬ ಲಿಂಗಾಯತ



ಬೆಳೆದರೆ ತನಗೇ ಕಂಟಕ ಎಂದು ಸದಾನಂದ ಗೌಡರನ್ನು ಬೆಂಬಲಿಸಿದರು. ಸದಾನಂದ ಗೌಡರು ತನಗೆ ಸೊಪ್ಪು ಹಾಕುತ್ತಾರೆ, ತನ್ನ ಆಣತಿಯಂತೆ ನಡೆದುಕೊಳ್ಳುತ್ತಾರೆ, ತನ್ನನ್ನು ಭ್ರಷ್ಟಾತಿಭ್ರಷ್ಟ ರಾಜಕಾರಣಿ ಎಂಬ ಆರೋಪಗಳಿಂದ ಮುಕ್ತಗೊಳಿಸುತ್ತಾರೆ ಎಂದು ತಿಳಿದಿದ್ದ ಯಡ್ಡಿಗೆ ಯಾವಾಗ 'ಜ್ಞಾನೋದಯ'ವಾಯಿತೋ ಆಗ ತನ್ನ ಭಿನ್ನಮತ ಚಟುವಟಿಕೆಗಳನ್ನು ಶುರುಮಾಡಿದರು.

ಸಿಎಂ ಹುದ್ದೆಯಿಂದ 'ಸದಾ'ರನ್ನು ಉರುಳಿಸಿದ ಯಡ್ಡಿ ಮುಂದೆ ಶೆಟ್ಟರ್‌ಗೆ ಈ ರೀತಿ ಮಾಡದೆ ಇರುತ್ತಾರೆಯೇ? ಹಿಂದೆ ಯಡ್ಡಿ ತನಗೆ ಮಾಡಿದ ಎಲ್ಲ ಅವಮಾನಗಳನ್ನು ಮರೆತು ಶೆಟ್ಟರ್ ಯಡ್ಡಿಯ ಅಜ್ಞಾನುವರ್ತಿಯಾಗಿ ಸರ್ಕಾರವನ್ನು ನಡೆಸುತ್ತಾರೆಯೇ? ಯಡ್ಡಿಯ ಭ್ರಷ್ಟಾಚಾರಗಳನ್ನೆಲ್ಲ ಮುಚ್ಚಿಹಾಕುತ್ತಾರೆಯೇ?

ಯಡ್ಡಿಗೆ ರಾಜಕೀಯ ಬಲ ಆತನ ಜಾತಿ ಮಾತ್ರ. ಬಿಜೆಪಿಗೆ ಅವಕಾಶ ಕೊಡೋಣವೆಂದು ಮತದಾರರು ಆ ಪಕ್ಷವನ್ನು ಗೆಲ್ಲಿಸಿದರೆ, ಅಧಿಕಾರ ಪಡೆದ ಯಡ್ಡಿ ಒಂದು ಜಾತಿಗೆ ಮಾತ್ರ ಸೀಮಿತವಾದರು. ಶಾಂತಿ, ಸಂಯಮ, ಆಲೋಚನೆ ಇಲ್ಲದೆ ತಿಳಿಗೇಡಿಯಂತೆ ವರ್ತಿಸಿದರು. ಸರ್ವಾಧಿಕಾರಿ ಧೋರಣೆಯನ್ನು ಬೆಳೆಸಿಕೊಂಡರು. ಪರಿಣಾಮವಾಗಿ ಕಳೆದ ನಾಲ್ಕು ವರ್ಷಗಳಿಂದ ರಾಜ್ಯದಲ್ಲಿ ಭ್ರಷ್ಟಾಚಾರ, ಭಿನ್ನಮತ, ಪಕ್ಷಪಾತ ತಾಂಡವವಾಡುತ್ತಿದ್ದು ಜನರ ಬೇಕು ಬೇಡಗಳನ್ನು ಕೇಳುವವರೇ ಇಲ್ಲದಂತಾಗಿದೆ.

ಮುಂದಿನ ಚುನಾವಣೆಯಲ್ಲಿ ಜನ ಬಿಜೆಪಿಯನ್ನು ಸೋಲಿಸುವ ಮೂಲಕ ಆ ಪಕ್ಷಕ್ಕೆ ಸೂಕ್ತ ಪಾಠ ಕಲಿಸಬೇಕಿದೆ.

- ಬಿ.ಎಲ್. ನಾಗರಾಜ್, ಚನ್ನಗಿರಿ

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/-

ರಮ್ಯಾ ಎವರ್‌ಗ್ರೀನ್

ಸಾಧಾರಣವಾಗಿ ನಾಯಕ ನಟರಿಗೆ ವಯಸ್ಸಾದರೂ ಅವರು ತಮ್ಮ ಮಗಳ ವಯಸ್ಸಿನ ನಟಿಯರೊಂದಿಗೆ ಸಿನಿಮಾಗಳಲ್ಲಿ ಮರಗಳನ್ನು ಸುತ್ತುತ್ತಾರೆ. ಆದರೆ ನಟಿಯರು ಸ್ವಲ್ಪ ಕಾಲದ ನಂತರ ತಾಯಿಯ ಪಾತ್ರಗಳಿಗೆ ಸೀಮಿತರಾಗುತ್ತಾರೆ ಅಥವಾ ಚಿತ್ರರಂಗಕ್ಕೆ ಗುಡ್‌ಬೈ ಹೇಳಿ ಮರೆಯಾಗುತ್ತಾರೆ.

ಆದರೆ ನಮ್ಮ ಕನ್ನಡ ಕುವರಿ ರಮ್ಯಾ ಎಂದೂ 'ಸಾಮಾನ್ಯ' ಅಥವಾ 'ಸಾಧಾರಣ' ಎಂಬ ಪದಗಳಿಗೆ ಸಿಲುಕುವಂಥವಳಲ್ಲ. ಆದ್ದರಿಂದ ಆಕೆ ಈಗಲೂ ತನಗಿಂತ ಕಿರಿವಯಸ್ಸಿನ ನಟರೊಂದಿಗೆ ನಾಯಕಿಯಾಗಿ ನಟಿಸುತ್ತಿದ್ದಾಳೆ.

ಮೊನ್ನೆಮೊನ್ನೆಯಷ್ಟೇ ತನಗಿಂತ ಕಿರಿಯರಾದ ದಿಗಂತ್ ಮತ್ತು ಯೋಗಿ ಜೊತೆ ಈಕೆ ನಾಯಕಿಯಾಗಿ ಕಾಣಿಸಿಕೊಂಡಿದ್ದಳು. ಮಾತ್ರವಲ್ಲ ವೃತ್ತಿಯಲ್ಲಿ ತನಗಿಂತ ಜೂನಿಯರ್‌ಗಳಾದ ಶ್ರೀನಗರ ಕಿಟ್ಟಿ ಮತ್ತು ಯಶ್ ತರಹದ ನಟರೊಂದಿಗೆ ಕಾಣಿಸಿಕೊಂಡು ಸೈ ಎನಿಸಿಕೊಂಡಿದ್ದಳು.

ಈಗ ಬಂದಿರುವ ಸುದ್ದಿಯ ಪ್ರಕಾರ 'ದಿಲ್ ಕಾ ರಾಜ' ಎಂಬ ಚಿತ್ರದಲ್ಲಿ ರಮ್ಯಾ ಚಿತ್ರರಂಗದ ಬೇಬಿ ಎಂದೇ ಕರೆಯಲ್ಪಡುವ ಪ್ರಜ್ವಲ್ ದೇವರಾಜ್ ಜೊತೆ ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

ಓರ್ವ ನಾಯಕಿಯ ದೃಷ್ಟಿಯಿಂದ ನೋಡುವುದಾದರೆ ಆಕೆ ತನಗಿಂತ ಕಿರಿಯ ವಯಸ್ಸಿನ ನಾಯಕರೊಂದಿಗೆ ನಟಿಸುತ್ತಿದ್ದರೆ ಅದು ಖಂಡಿತವಾಗಿಯೂ ಆಕೆಗೆ ಸಲ್ಲಬೇಕಾದ ದೊಡ್ಡ ಗೌರವವೆಂದೇ ಹೇಳಬೇಕು. ಏಕೆಂದರೆ ಸಾಮಾನ್ಯವಾಗಿ ನಾಯಕಿಯರು ಒಂದೆರಡು ಚಿತ್ರಗಳ ಯಶಸ್ಸಿನ ನಂತರ ಅಥವಾ ಚಿತ್ರರಂಗದಲ್ಲಿ ಒಂದೆರಡು ವರ್ಷ ಕಾಣಿಸಿಕೊಂಡ ನಂತರ ತಮ್ಮ ಮೈಭಾರವನ್ನು ಹೆಚ್ಚಿಸಿಕೊಳ್ಳುತ್ತಾರೆ. ಆರಂಭದಲ್ಲಿ ತೆಳ್ಳಗೆ ಬಳುಕುವ ನಾಯಕಿಯರು ಕೆಲವು ವರ್ಷಗಳಲ್ಲೇ ಡಬ್ಬಲ್ ಡೆಕ್ಕರ್ ತರ ಊದಿಕೊಂಡ ಉದಾಹರಣೆಗಳು ಬೇಕಾದಷ್ಟಿವೆ. ಅಂತಹುದರಲ್ಲಿ ರಮ್ಯ ಕಳೆದ ಹತ್ತು ವರ್ಷಗಳಿಂದ ಮೈಮಾಟ ಮತ್ತು ಸೌಂದರ್ಯವನ್ನು ಚೆನ್ನಾಗಿ ಕಾಪಾಡಿಕೊಂಡು ಬಂದು ಇತ್ತೀಚೆಗೆ ಬಂದ ಹುಡುಗರ ಜೊತೆ ಕೂಡ ನಾಯಕಿಯಾಗಿ ನಟಿಸುತ್ತಿದ್ದಾಳೆಂದರೆ ನಿಜಕ್ಕೂ ಅದು ಆಕೆಯ ದೊಡ್ಡ ಸಾಧನೆಯೆಂದೇ ಹೇಳಬೇಕು. ಆಕೆ ತನ್ನ ಅಂಗಸೌಷ್ಠವವನ್ನು ಹೇಗೆ ಕಾಪಾಡಿಕೊಂಡು ಬಂದಿದ್ದಾರೆ ಎಂಬುದನ್ನು ತಿಳಿಯಬೇಕಾದರೆ ಒಮ್ಮೆ ಆಕೆಯ ಸಮಕಾಲೀನ ನಟಿ ರಕ್ಷಿತಾಳ ಈಗಿನ ಮೈಮಾಟವನ್ನು ನೋಡಿದರೆ ಅರ್ಥವಾಗುತ್ತದೆ.

ಚಿರಯೌವ್ವನೆ ರಮ್ಯಾ ಮುಂಬರುವ ದಿನಗಳಲ್ಲಿ ಇನ್ನ್ಯಾವ್ಯಾವ ಕಿರಿಯ ನಾಯಕರುಗಳ ಜೊತೆ ನಟಿಸುತ್ತಾಳೋ ನೋಡಬೇಕು.



ಹಾಡಲಿದ್ದಾನೆ ಪುಟಾಣಿ ಆದಿ ಹರಿ





ವಂಶಪಾರಂಪರ್ಯ ಎಂಬುದು ರಾಜಕೀಯಕ್ಕೆ ಮಾತ್ರ ಸೀಮಿತ ಎಂದು ನೀವು ಭಾವಿಸಿದರೆ ನಿಮ್ಮ ಊಹೆ ತಪ್ಪು.

ಚಿತ್ರರಂಗದಲ್ಲೂ ನಾಯಕರ ಮಗ ನಾಯಕನಾಗುವುದು, ನಾಯಕಿಯ ಮಗಳು ನಾಯಕಿಯಾಗುವುದು ನೀವು ಈಗಾಗಲೇ ಬೇಕಾದಷ್ಟು ಬಾರಿ ನೋಡಿದ್ದೀರಿ. ಈಗ ಸಂಗೀತ ನಿರ್ದೇಶಕ ಮತ್ತು ಗಾಯಕ ಹರಿಕೃಷ್ಣ ಕುಟುಂಬದಲ್ಲೂ ಅಂತಹ ಒಂದು ಘಟನೆ ನಡೆದಿದೆ.

ಅದೇನೆಂದರೆ, ಹರಿಕೃಷ್ಣ ಮತ್ತು ಅವರ ಪತ್ನಿ ವಾಣಿ ಇಬ್ಬರೂ ಸಂಗೀತಗಾರರು. ಅ... ವಾಣಿ ಅವರು ಕನ್ನಡ ಚಿತ್ರರಂಗ ಕಂಡ ಧೀಮಂತ ಸಂಗೀತ ನಿರ್ದೇಶಕರಾ... ವೆಂಕಟೇಶ್‌ರವರ ಮೊಮ್ಮಗಳು. ಈಗ ಇವರಿಬ್ಬರ ಪ್ರೀತಿಯ ಪು... ಹರಿಕೃಷ್ಣ ಕೂಡ ಹಿನ್ನೆಲೆಗಾಯಕನಾಗಿ ಚಿತ್ರರಂಗಕ್ಕೆ ಪರಿಚಯಿಸಲ್ಪಡ... ಸೌಂದರ್ಯ ಜಗದೀಶ್ ನಿರ್ಮಿಸುತ್ತಿರುವ, ಅವರ ಮಗ... ನಟಿಸುತ್ತಿರುವ 'ಸ್ನೇಹಿತರು' ಚಿತ್ರದ ಒಂದು ಹಾಡಿಗೆ... ಹರಿಕೃಷ್ಣ ಆದಿ ದನಿ ನೀಡುತ್ತಿದ್ದಾನೆ. ಅಂದಹಾಗೆ ಆದಿಯ... ಈಗ ಇನ್ನೂ ಹತ್ತು ವರ್ಷ! ಕನ್ನಡ ಚಿತ್ರರಂಗದಲ್ಲಿ ಈ... ಯಾವ ಸಂಗೀತ ನಿರ್ದೇಶಕರ ಮಕ್ಕಳು ಇಷ್ಟು ಸಣ್ಣ ವ... ಹಿನ್ನೆಲೆ ಗಾಯಕನಾಗಿ ಕಾಣಿಸಿಕೊಂಡದ್ದಿಲ್ಲ. ಆ ನಿಟ್ಟಿನಲ್ಲಿ ಹರಿಕೃ... ಅವರ ಕುಟುಂಬದವರ ಸಾಧನೆ ನಿಜಕ್ಕೂ ಸಂತೋಷ ಕೊಡುವಂತಹ...



ಅಂಬೆಗಾಲು ಇಡಲಿರುವ ಕಲ್ಯಾಣ್

ಪ್ರೇಮ ಕವಿ ಕಲ್ಯಾಣ್ 'ಅಂಬೆಗಾಲು' ಇಡುತ್ತ ಚಿತ್ರರಂಗಕ್ಕೆ ಬರುತ್ತಿದ್ದಾರೆ. ಇದೇನಪ್ಪ! ಈಗಾಗಲೇ ನೂರಾರು ಚಿತ್ರಗಳಿಗೆ ಹಾಡು ಬರೆದಿರುವ, ಎರಡು ಡಜನ್‌ಗಿಂತಲೂ ಹೆಚ್ಚು ಸಿನಿಮಾಗಳಿಗೆ ಸಂಗೀತ ನಿರ್ದೇಶನ ಮಾಡಿರುವ ಕಲ್ಯಾಣ್ 'ಅಂಬೆಗಾಲು' ಇಡುತ್ತಿದ್ದಾರೆಯೇ ಎಂದು ನೀವು ಪ್ರಶ್ನಿಸಬಹುದು. ಆದರೆ 'ಅಂಬೆಗಾಲು' ಎಂಬುದು ಅವರ ಚೊಚ್ಚಲ ನಿರ್ದೇಶನದ ಸಿನಿಮಾದ ಹೆಸರು. ಈತನಕ ಗೀತರಚನಕಾರರಾಗಿ, ಸಂಗೀತ ನಿರ್ದೇಶಕರಾಗಿದ್ದ ಕಲ್ಯಾಣ್ ಈಗ ಸಿನಿಮಾ ನಿರ್ದೇಶಕರಾಗಿ ತಮ್ಮ ಪ್ರತಿಭೆಯನ್ನು ತೋರಿಸಲು ಹೊರಟಿದ್ದಾರೆ.




ಚಿತ್ರರಂಗದಲ್ಲಿ ಹಂಸಲೇಖರ ಶಿಷ್ಯರಾಗಿ ಆರಂಭದಲ್ಲಿ ಕಾಣಿಸಿಕೊಂಡಿದ್ದ ಕಲ್ಯಾಣ್ ಅನಂತರ ಸ್ವತಂತ್ರ ಗೀತರಚನಕಾರರಾಗಿ ತನ್ನದೇ ಆದ ಛಾಪು ಮೂಡಿಸಿದರು. ಈಗ ಸಂಗೀತಕ್ಕೆ ಹೆಚ್ಚು ಪ್ರಾತಿನಿಧ್ಯ ಇರುವ ಪ್ರೇಮಕಥೆಯೊಂದನ್ನು ಕೈಗೆತ್ತಿಕೊಂಡು ಅದನ್ನು ನಿರ್ದೇಶಿಸಲು ಹೊರಟಿರುವುದು ಆಶ್ಚರ್ಯವೇನಲ್ಲ,

ಒಂದು ಚಿತ್ರವನ್ನು ನಿರ್ದೇಶಿಸಬೇಕೆಂಬುದು ಅವರ ಬಹುದಿನಗಳ ಕನಸಾಗಿತ್ತು. ಈಗ ಆ ಕನಸು 'ಅಂಬೆಗಾಲು' ಸಿನಿಮಾದ ಮೂಲಕ ನನಸಾಗುವ ... ಮೂಡಿಬಂದಿದೆ. ಅಂದಹಾಗೆ, ಈ ಚಿತ್ರದ ಕಥೆ, ಚಿತ್ರಕಥೆ, ಸಂ... ಗೀತರಚನೆ, ಸಂಗೀತ ಮತ್ತು ನಿರ್ದೇಶನ ಹೀಗೆ ಬ... ಎಲ್ಲ ದೊಡ್ಡ ಜವಾಬ್ದಾರಿಯನ್ನು ಅವರೇ ಹೆಗಲಿಗೇರಿಸಿಕೊ... ಸದ್ಯಕ್ಕೆ ಹಾಡಿನ ಕೆಲಸವನ್ನೂ ಕೈಗೆತ್ತಿಕೊಂಡಿರುವ ... ನಾಯಕನಾಯಕಿಯರ ಹುಡುಕಾಟದಲ್ಲಿ ತೊಡಗಿದ್ದಾರೆ...

ಈ ಹಿಂದೆ ಸಂಗೀತ ನಿರ್ದೇಶಕ ವಿ.ಮನೋಹರ್ ... ಒಂದು ಚಿತ್ರವನ್ನು ನಿರ್ದೇಶಿಸಿದ್ದರು. ಅದೇರೀತಿ ಹಂ... ಕೂಡ ಒಂದು ಚಿತ್ರವನ್ನು ನಿರ್ದೇಶಿಸಿದರೂ ಅದು ಬಿಡು... ಭಾಗ್ಯವನ್ನು ಈತನಕ ಕಂಡಿಲ್ಲ. ಈ ಮಧ್ಯೆ ಮತ್ತೋರ್ವ ಸಂಗೀತ ನಿ... ಸಾಧುಕೋಕಿಲ ಈಗಾಗಲೇ ಸಾಕಷ್ಟು ಚಿತ್ರಗಳನ್ನು ನಿರ್ದೇಶಿಸಿದ್ದಾರೆ... ನಡುವೆ ಕಲ್ಯಾಣ್ ಹೇಗೆ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತಾ... ಕಾದುನೋಡಬೇಕು.

ಕೊನೆಗೂ ಸೆಟ್ಟೇರುತ್ತಿರುವ 'ಕಡ್ಡಿಪುಡಿ'

'ಅಣ್ಣಾಬಾಂಡ್' ಚಿತ್ರ ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿದ ಪರಿಣಾಮವಾಗಿ ಸೂರಿ ನಿರ್ದೇಶಿಸಬೇಕಾಗಿದ್ದ 'ಕಡ್... ಚಿತ್ರ ಅನಿರ್ದಿಷ್ಟ ಕಾಲ ಮುಂದೆ ಹೋಗಿದ್ದು ನಿಮಗೆಲ್ಲ ಗೊತ್ತಿರುವ ವಿಚಾರ. ಅದಕ್ಕೆ ಕಾರಣ ಈ ಚಿತ್ರದ ನಾ... ಶಿವರಾಜ್‌ಕುಮಾರ್ ತುಂಬಾ ನಯವಾಗಿ ಸೂರಿಗೆ ಚಿತ್ರದ ಕಥೆಯನ್ನು ಹೇಳಿ ಎಂದು ಹೇಳಿದ್ದು. ಇದರರ್ಥ ಈ ಹಿಂದೆ ಸೂರಿ ನಟರಿಗೆ ಕಥೆ ಹೇಳುತ್ತಿರಲಿಲ್ಲವೆಂದಲ್ಲ. ಅವರು ಒಂದು ಎಳೆಯನ್ನು ಹೇಳಿ ಒಂದಿಷ್ಟು ಚಿತ್ರಕಥೆಯನ್ನು ಮುಂದಿಡುತ್ತಿದ್ದರು. ಅವರ ಇಂತಹ ಧೋರಣೆಯಿಂದಾಗಿಯೇ 'ಅಣ್ಣಾಬಾಂಡ್' ಅವಾಂತರ ಆದದ್ದು ಎಂಬುದು ಹೆಚ್ಚಿನವರ ಅನಿಸಿಕೆ. ಈ ಹಿನ್ನೆಲೆಯಲ್ಲಿ 'ಕಡ್ಡಿಪುಡಿ' ಮತ್ತೊಂದು 'ಅಣ್ಣಾಬಾಂಡ್' ಆಗಬಾರದೆಂಬ ಕಾರಣಕ್ಕೆ ಶಿವರಾಜ್‌ಕುಮಾರ್ ಸೂರಿ ಬಳಿ ಕಥೆಯನ್ನು ಹೇಳಿದ್ದರು.



ಹೀಗೆ ಮುಂದೂಡಲ್ಪಟ್ಟಿದ್ದ 'ಕಡ್ಡಿಪುಡಿ' ಚಿತ್ರ ಇದೇ ತಿಂಗಳು 27ರಂದು ಸೆಟ್ಟೇರಲಿದೆ. ಶಿವರಾಜ್‌ಕುಮಾರ್ ಜೊತೆ ಈ ಚಿತ್ರದಲ್ಲಿ ರಾಧಿಕಾ ಪಂಡಿತ್ ನಟಿಸಲಿದ್ದಾಳೆ. 'ಅಣ್ಣಾಬಾಂಡ್' ಚಿತ್ರದ ಸೋಲಿನ ನಂತರ ಸ್ವಲ್ಪ ಖಿನ್ನರಾಗಿದ್ದ ಸೂರಿ ಈಗ ಅತ್ಯಂತ ಉತ್ಸಾಹ ಮತ್ತು ಆತ್ಮವಿಶ್ವಾಸದಿಂದ ಕಥೆ-ಚಿತ್ರಕಥೆಯನ್ನು ತಯಾರಿಸಿ ಅಖಾಡಕ್ಕೆ ಇಳಿಯುತ್ತಿದ್ದಾರೆ. ಅಂದಹಾಗೆ, ಈ ಚಿತ್ರವನ್ನು 'ಸ್ವಯಂವರ' ಚಿತ್ರವನ್ನು ನಿರ್ಮಿಸಿದ ಚಂದ್ರು ಅವರು ನಿರ್ಮಿಸುತ್ತಿದ್ದಾರೆ.

ಪುನೀತ್‌ಗಾಗಿ ಈಗಾಗಲೇ ಎರಡು ಚಿತ್ರಗಳನ್ನು ನಿರ್ದೇಶಿಸಿರುವ ಸೂರಿ ಇದೇ ಮೊದಲ ಬಾರಿಗೆ ಶಿವರಾಜ್‌ಕುಮಾರ್‌ಗಾಗಿ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಅಕಸ್ಮಾತ್ 'ಅಣ್ಣಾಬಾಂಡ್' ಬಾಕ್ಸ್‌ಆಫೀಸ್‌ನಲ್ಲಿ ಗೆದ್ದಿದ್ದರೆ ಈಗ 'ಕಡ್ಡಿಪುಡಿ' ಸಿನಿಮಾಕ್ಕೆ ಎಲ್ಲಿಲ್ಲದ ಬೇಡಿಕೆ ಇರುತ್ತಿತ್ತು. ಸದ್ಯಕ್ಕೆ ಅಂತಹ ಬೇಡಿಕೆಯಿಲ್ಲದಿದ್ದರೂ ಚಿತ್ರದ ಬಗ್ಗೆ ಕುತೂಹಲವಂತೂ ಇದ್ದೇ ಇದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Fax : 26604526